ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ ಅರ್ಧ ಶತಕ (71 ರನ್) ಗಳಿಸಿದ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಕಾರ್ತಿಕ್ ಶರ್ಮಾ ಅವರ ಬ್ಯಾಟಿಂಗ್ ವೈಖರಿ...

16 ಮೇ 2026 ಶನಿವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 67 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಸ್ಪರ್ಧೆ ಮುಗಿದ ಮೇಲೆ ನಮಗೆ ಅಲ್ಲೊಬ್ಬ ಸಿಗುತ್ತಾನೆ » 2



ಜೂನ್ 21 ರಂದು ನೀಟ್ ಮರು ಪರೀಕ್ಷೆ » 3



ಇಸ್ರೇಲ್-ಕರ್ನಾಟಕ ಮಧ್ಯೆ ಶ್ರಮಶಕ್ತಿ ಒಪ್ಪಂದ » 4

# ಪೆಟ್ರೋಲ್-ಡೀಸೆಲ್ ದರ ಏರಿಕೆ ಬರೆ

## ಪ್ರಧಾನಿ ಮೋದಿ ವಿರುದ್ಧ ಸಿದ್ದರಾಮಯ್ಯ ಸೇರಿ ಕಾಂಗ್ರೆಸ್ ನಾಯಕರ ವಾಗ್ದಾಳಿ


• ಪ್ರಜೋದಯ ವರದಿ

**ಬೆಂಗಳೂರು:** ಪಶ್ಚಿಮ ಏಷ್ಯಾ ಸಂಘರ್ಷದಿಂದ ಜಾಗತಿಕವಾಗಿ ಇಂಧನ ಬೆಲೆ ಏರುತ್ತಿರುವಂತೆಯೇ, ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಪ್ರತಿ ಲೀಟರ್‌ಗೆ 3 ರೂ. ಹೆಚ್ಚಿಸಲಾಗಿದೆ. ಪರಿಷ್ಕೃತ ದರ ಶುಕ್ರವಾರದಿಂದಲೇ ಜಾರಿಯಾಗಿದೆ.

ಪೆಟ್ರೋಲ್ ಲೀಟರ್‌ಗೆ 3.27 ರೂ., ಡೀಸೆಲ್ ಲೀಟರ್‌ಗೆ 3.12 ರೂ.ಗೆ ಏರಿಕೆಯಾಗಿದೆ. 102.90 ರೂ. ಇದ್ದ ಪೆಟ್ರೋಲ್ ಈಗ 106.17 ರೂ., ಡೀಸೆಲ್ 90.98 ರೂ.ನಿಂದ 94.10 ರೂ. ಗೆ ಏರಿಕೆಯಾಗಿದೆ.

ಇಂಧನ ಬೆಲೆ ಏರಿಕೆಯನ್ನು ಖಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮೋದಿ ಸರ್ಕಾರ ತನ್ನ ವೈಫಲ್ಯವನ್ನು ಸಾಮಾನ್ಯ ಜನರ ಮೇಲೆ ಹಾಕಿದೆ. ಪೆಟ್ರೋಲ್ ಮತ್ತು ಡೀಸೆಲ್ ದರದಲ್ಲಿ ಲೀಟರ್‌ಗೆ 3 ರೂ. ಏರಿಕೆ ಮಾಡಿರುವುದು ವಿಫಲ ವಿದೇಶಾಂಗ ನೀತಿ, ದುರ್ಬಲ ಆರ್ಥಿಕ ನಿರ್ವಹಣೆ ಮತ್ತು ಬೆಲೆ ಏರಿಕೆಯನ್ನು ನಿಯಂತ್ರಿಸುವಲ್ಲಿ ನಡೆದ ನಿರ್ಲಕ್ಷ್ಯದ ಫಲವಾಗಿದೆ. ಜನರನ್ನು ರಕ್ಷಿಸುವ ಬದಲು, ಕೇಂದ್ರ ಸರ್ಕಾರ ತನ್ನ ವೈಫಲ್ಯಗಳ ಬೆಲೆಯನ್ನು ಜನರಿಂದಲೇ ವಸೂಲು ಮಾಡುತ್ತಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಈ ದರ ಏರಿಕೆ ಪೆಟ್ರೋಲ್ ಬಂಕ್‌ಗಳಲ್ಲೇ ನಿಲ್ಲುವುದಿಲ್ಲ. ಸಾರಿಗೆ ವೆಚ್ಚ, ತರಕಾರಿ ಬೆಲೆ, ದಿನಸಿ ಖರ್ಚು, ಹಾಲಿನ ದರ, ಕಟ್ಟಡ ನಿರ್ಮಾಣ ವೆಚ್ಚ, ಶಾಲಾ ವಾಹನ ಶುಲ್ಕ, ಕೃಷಿ ಉತ್ಪಾದನಾ ವೆಚ್ಚ ಸೇರಿ ಬಹುತೇಕ ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗಲಿದೆ. ರೈತರು, ಕಾರ್ಮಿಕರು, ಸಣ್ಣ ವ್ಯಾಪಾರಿಗಳು, ಮಧ್ಯಮ ವರ್ಗದವರು ಹೆಚ್ಚು ತೊಂದರೆ ಅನುಭವಿಸುತ್ತಾರೆಂದು ಕಿಡಿಕಾರಿದ್ದಾರೆ.





ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಗಳ ನಂತರ ಕೇಂದ್ರ ಸರ್ಕಾರ ಪೆಟ್ರೋಲ್ ಡೀಸೆಲ್ ದರ ಏರಿಸುವ ನಿರೀಕ್ಷೆ ಇತ್ತು. ನರೇಂದ್ರ ಮೋದಿಯವರು ದೇಶದ ಪ್ರಧಾನಿಯಾದ ನಂತರ ಹಲವು ಬಾರಿ ಪೆಟ್ರೋಲ್-ಡೀಸೆಲ್ ದರಗಳನ್ನು ಹೆಚ್ಚಿಸಿದ್ದಾರೆ. ಈ ಬೆಲೆ ಏರಿಕೆ ಜನಸಾಮಾನ್ಯರ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದ್ದು, ವಿಶೇಷವಾಗಿ ಕಾರ್ಮಿಕರು, ರೈತರು, ಬಡವರ ಮೇಲೆ ಹೆಚ್ಚಿನ ಪರಿಣಾಮ ಬೀರಲಿದೆ. ಕೇಂದ್ರ ಸರ್ಕಾರದ ಈ ಬೆಲೆ ಏರಿಕೆಯ ಕ್ರಮವನ್ನು ರಾಜ್ಯ ಸರ್ಕಾರ ಖಂಡಿಸುವುದಲ್ಲದೇ, ಈ ನಿರ್ಣಯವನ್ನು ಹಿಂದಕ್ಕೆ ಪಡೆಯಬೇಕೆಂದು ಒತ್ತಾಯಿಸುತ್ತೇವೆ ಎಂದರು.

ಮೋದಿ ಆಡಳಿತ ಪ್ರಾರಂಭವಾಗುವ ಮುಂಚೆ 413 ರೂ.ಗಳಿಂದ ಗೃಹಬಳಕೆಯ ಎಲ್‌ಪಿಜಿ ದರ ಈಗ 1000 ರೂ.ಗಳನ್ನು ದಾಟಿದೆ. ಈ ಬೆಲೆ ಏರಿಕೆ ದಿನನಿತ್ಯದ ಬೆಲೆ ಹೆಚ್ಚಳಕ್ಕೂ ಕಾರಣವಾಗಲಿದೆ. ಎಲ್‌ಪಿಜಿ ಪೂರೈಕೆ ವ್ಯತ್ಯಯವಾಗಿರುವ ನಡುವೆಯೇ ಬೆಲೆ ಏರಿಕೆ ಜನಜೀವನವನ್ನು ಅಸ್ತವ್ಯಸ್ತಗೊಳಿಸಲಿದೆ ಎಂದು ಹೇಳಿದರು.

ಇಂಧನ ದರ ಏರಿಕೆ ಬೆನ್ನಲ್ಲೇ ಖಾಸಗಿ ಬಸ್ ಟಿಕೆಟ್ ದರ ಹೆಚ್ಚಳ ಮಾಡಿದ್ದು, ಶುಕ್ರವಾರ ಮಧ್ಯರಾತ್ರಿಯಿಂದಲೇ ಜಾರಿಯಾಗಲಿದೆ ಎಂದು ರಾಜ್ಯ ಖಾಸಗಿ ಬಸ್ ಮಾಲೀಕರ ಸಂಘ ಮಾಹಿತಿ ನೀಡಿದೆ. ಶೇ.20 ರಿಂದ 30ರಷ್ಟು ದರ ಏರಿಕೆ ಮಾಡಲಾಗಿದೆ. ಖಾಸಗಿ ಬಸ್ ಮಾಲೀಕರು ಕನಿಷ್ಠ 150 ಲೀಟರ್ ಡಿಸೇಲ್ ಹಾಕಿಸಿಕೊಳ್ಳಬೇಕು. ಅನಿವಾರ್ಯವಾಗಿ ದರ ಏರಿಕೆ ಮಾಡುತ್ತಿದ್ದೇವೆ. ಇದರ ಪರಿಣಾಮ ಪ್ರಯಾಣಿಕರ ಮೇಲಾಗಲಿದೆ ಎಂದಿದೆ.

> **ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಪ್ರಧಾನಿ ಮೋದಿ ಜನರಿಗೆ ನೀಡಿದ ಉಡುಗೊರೆ. ಅಂತರ‍್ರಾಷ್ಟ್ರೀಯ ಸಂಬಂಧಗಳನ್ನು ನಿಬಾಯಿಸುವಲ್ಲಿ ವಿಫಲರಾಗಿದ್ದಾರೆ. ವಿಶೇಷವಾಗಿ ನೆರೆ ಹೊರೆಯ ದೇಶಗಳೊಂದಿಗೆ ಉತ್ತಮ ಬಾಂಧವ್ಯವನ್ನು ಉಳಿಸಿಕೊಂಡಿಲ್ಲ. ಹೀಗಾಗಿ ಇಂಧನ ಬಳಕೆಯನ್ನು ಮಿತಿ ಗೊಳಿಸಬೇಕು, ಚಿನ್ನ ಖರೀದಿಸಬಾರದೆಂದು ಹೇಳುತ್ತಿದ್ದಾರೆ.**
> **-ಡಿ.ಕೆ.ಶಿವಕುಮಾರ್ ,ಉಪಮುಖ್ಯಮಂತ್ರಿ**

> **ದೇಶದ ಆರ್ಥಿಕ ಸಂಕಷ್ಟಕ್ಕೆ ಕೇವಲ ಅಂತಾರಾಷ್ಟ್ರೀಯ ಬಿಕ್ಕಟ್ಟು ಕಾರಣವಲ್ಲ, ಬದಲಿಗೆ ಸರ್ಕಾರದ ದೂರದೃಷ್ಟಿಯ ಕೊರತೆ ಮತ್ತು ಅಸಮರ್ಥತೆ ಕಾರಣ. ಇದಕ್ಕೆ ದೇಶದ ಸಾಮಾನ್ಯ ಜನರು ಬೆಲೆ ತೆರುತ್ತಿದ್ದಾರೆ.**
> **-ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ**

# ದೇವೇಗೌಡರ ಭೇಟಿಯಾದ ಜಿ.ಟಿ.ಡಿ.

## 2028ಕ್ಕೆ ಜೆಡಿಎಸ್‌ನಿಂದಲೇ ಸ್ಪರ್ಧೆ | ಮುನಿಸು ಮರೆತರಾ ಹಿರಿಯ ಶಾಸಕ?

• ಪ್ರಜೋದಯ ವರದಿ

**ಬೆಂಗಳೂರು:** ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರೊಂದಿಗಿನ ಮುಸುಕಿನ ಗುದ್ದಾಟದಿಂದ ಪಕ್ಷದ ಚಟುವಟಿಕೆಗಳಿಂದ ದೂರವಿದ್ದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರು ಶುಕ್ರವಾರ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರನ್ನು ಭೇಟಿಯಾಗಿ ಕುತೂಹಲ ಮೂಡಿಸಿದ್ದಾರೆ.

ಜೆಡಿಎಸ್ ಕೋರ್ ಕಮಿಟಿಯಿಂದ ಗೇಟ್ ಪಾಸ್ ನೀಡಿದ ಬಳಿಕ ಜಿ.ಟಿ.ದೇವೇಗೌಡ ಕಾಂಗ್ರೆಸ್ ಸೇರುತ್ತಾರೆಂಬ ಗಾಳಿ ಸುದ್ದಿಯ ಬೆನ್ನಲ್ಲೇ ಈ ಭೇಟಿ ಆಶ್ಚರ್ಯವಾಗಿದೆ. ಬಹು ದಿನಗಳ ನಂತರ ದೇವೇಗೌಡರ ಭೇಟಿಯಾಗಿರುವ ಅವರು 2028ರಲ್ಲಿ ಜೆಡಿಎಸ್‌ನಿಂದಲೇ ಸ್ಪರ್ಧಿಸುವುದಾಗಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೆಚ್.ಡಿ.ದೇವೇಗೌಡ ಅವರು ಪ್ರಧಾನಿಯಾಗಿ ಪ್ರಖ್ಯಾತಿ ಪಡೆದವರು. ರೈತರ ಪರ ನಿಂತು ದುಡಿದವರು. ಹೀಗಾಗಿ ಮೋದಿಯವರೇ ಅವರನ್ನ ಗುಣಗಾನ ಮಾಡಿದ್ದಾರೆ. ನಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದಾರೆ. ಅವರ ಬಗ್ಗೆ ಅಪಾರ ಗೌರವ ಇದೆ ಎಂದರು.



ಭೇಟಿ ವೇಳೆ ದೇವೇಗೌಡ ಅವರು ರಾಜಕೀಯ ಮಾತಾಡಿಲ್ಲ. ನಾನು ಮಾತಾಡಿಲ್ಲ. ಚೆನ್ನಾಗಿರು, ಒಳ್ಳೆದಾಗಲಿ ಎಂದು ಆಶೀರ್ವಾದ ಮಾಡಿದ್ದಾರೆ. ನಾನು ಎಷ್ಟು ಪ್ರಾಮಾಣಿಕವಾಗಿ ದುಡಿದ್ದೇನೆ ಅಂತ ಅವರಿಗೆ ಗೊತ್ತಿದೆ. ಕ್ಷೇತ್ರ ದೊಡ್ಡದಿದೆ. ಹಾಗಾಗಿ ಕ್ಷೇತ್ರದ ಅಭಿವೃದ್ಧಿಯಲ್ಲಿ ತೊಡಗಿದ್ದೇನೆ. ನಾನು ಇನ್ನೂ ಜನತಾದಳದಲ್ಲೆ ಇದ್ದೇನೆ. 2028ರಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ ಜೆಡಿಎಸ್‌ನಿಂದಲೇ ಸ್ಪರ್ಧೆ ಮಾಡುತ್ತೇನೆಂದು ಸ್ಪಷ್ಟಪಡಿಸಿದರು.

**ಜಿಟಿಡಿ-ಹೆಚ್‌ಡಿಕೆ ಮುಸುಕಿನ ಗುದ್ದಾಟ**

ಜಿ.ಟಿ.ದೇವೇಗೌಡ ಹಾಗು ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಮಧ್ಯೆ ಎಲ್ಲವೂ ಸರಿ ಇಲ್ಲ. ಇಬ್ಬರ ಮಧ್ಯೆ ಮುಸುಕಿನ ಗುದ್ದಾಟ ನಡೆಯುತ್ತಿದೆ. ಇನ್ನು ಜಿ.ಟಿ.ಡಿ. ವಿರುದ್ಧ ಕುಮಾರಸ್ವಾಮಿ ಬಹಿರಂಗವಾಗಿಯೇ ಕಿಡಿಕಾರಿದ್ದರು. ಪಕ್ಷದ ಬಗ್ಗೆ ನಿಯತ್ತು, ನಿಷ್ಠೆ ಅವರಿಗೆ ಇಲ್ಲ, ಅಂತಹವರನ್ನು ನಮ್ಮ ಜೊತೆ ಇಟ್ಟುಕೊಳ್ಳಬೇಕಾ ಎಂದು ಕುಮಾರ ಸ್ವಾಮಿ ಖಾರವಾಗಿ ಹೇಳಿದ್ದರು.

ಇನ್ನು ಜೆಡಿಎಸ್ ಹಿರಿಯ ನಾಯಕ ಜಿ.ಟಿ.ದೇವೇಗೌಡ ಅವರು ಸಹ ಆಗಾಗ ಪರೋಕ್ಷವಾಗಿ ಪಕ್ಷದಿಂದ ದೂರ ಸರಿಯುವ ಮಾತಾಡಿದ್ದುಂಟು. ಹಾಗೇ ಕುಮಾರಸ್ವಾಮಿ ವಿರುದ್ಧ ಪರೋಕ್ಷವಾಗಿ ಅಸಮಾಧಾನ ಹೊರಹಾಕಿದ್ದಾರೆ. ಕೋರ್ ಕಮಿಟಿಗೆ ಅಧ್ಯಕ್ಷರಾಗಿದ್ದ ಜಿ.ಟಿ.ದೇವೇಗೌಡ ಅವರನ್ನು ಬದಲಿಸಿ ಮಾಜಿ ಶಾಸಕ ಎಂ.ಕೃಷ್ಣಾರೆಡ್ಡಿಗೆ ಸಾರಥ್ಯ ನೀಡಲಾಗಿದೆ.

# ಜಿಲ್ಲೆಯಲ್ಲಿ ಗಾಂಜಾ ಗ್ಯಾಂಗ್ ಕಡಿವಾಣಕ್ಕೆ ಪ್ರಯತ್ನ

• ಪ್ರಜೋದಯ ವರದಿ

- 32 ಪ್ರಕರಣಗಳಲ್ಲಿ ವಶಕ್ಕೆ ಪಡೆದಿದ್ದ 96 ಕೆಜಿ ಗಾಂಜಾ ನಾಶ
- ಟಾಸ್ಕ್‌ಫೋರ್ಸ್ ತ್ವರಿತ ಕಾರ್ಯಾಚರಣೆ

**ಹಾಸನ:** ಜಿಲ್ಲೆಯಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಗಾಂಜಾ, ಡ್ರಗ್ಸ್ ಪ್ರಕರಣಗಳಿಗೆ ಕಡಿವಾಣ ಹಾಕಲು ಪೊಲೀಸರು ಪ್ರಯತ್ನ ನಡೆಸುತ್ತಿದ್ದಾರೆ. ಎನ್‌ಡಿಪಿಎಸ್ ಕಾಯ್ದೆಯಡಿ ದಾಖಲಾಗಿದ್ದ 32 ಪ್ರಕರಣಗಳಲ್ಲಿ ವಶಪಡಿಸಿಕೊಂಡಿದ್ದ ಲಕ್ಷಾಂತರ ರೂ. ಮೌಲ್ಯದ ಬರೋಬ್ಬರಿ 96 ಕೆಜಿ ಗಾಂಜಾವನ್ನು ನಾಶ ಪಡಿಸಲಾಗಿದೆ.

ಇತ್ತೀಚೆಗೆ ಜಿಲ್ಲೆಯ ವಿವಿಧೆಡೆ ಪೊಲೀಸರು ದಾಳಿ ನಡೆಸಿ 32 ಪ್ರಕರಣಗಳಲ್ಲಿ ಒಟ್ಟು 96 ಕೆಜಿ 831 ಗ್ರಾಂ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿತ್ತು. ನ್ಯಾಯಾಲಯ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿಯ ಅನುಮತಿ ಪಡೆದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಅವರ ಸಮ್ಮುಖದಲ್ಲಿ ನಗರ ಹೊರವಲಯದ ಹೆಚ್‌ಪಿಸಿಎಲ್ ಸಮೀಪದ ಕೆಐಎಡಿಬಿ ವ್ಯಾಪ್ತಿಯ ಬಿ.ಎಂ.ಡಬ್ಲ್ಯೂ ಮ್ಯಾನೇಜ್‌ಮೆಂಟ್ ಸಿಸ್ಟಮ್ ಪ್ರೈವೇಟ್ ಲಿಮಿಟೆಡ್ ಘಟಕದಲ್ಲಿ ನಾಶಪಡಿಸಲಾಯಿತು. ನಾಶಪಡಿಸ ಲಾದ ಮಾದಕ ವಸ್ತುಗಳ ಮೌಲ್ಯ 41,14,250 ಎಂದು ಅಂದಾಜಿಸಲಾಗಿದೆ.



**ವಾರದಲ್ಲಿ 3 ಕಡೆ ಗಾಂಜಾ ವಶ**

ಜಿಲ್ಲೆಯಲ್ಲಿ ನೇಮಕಗೊಂಡಿರುವ ವಿಶೇಷ ಟಾಸ್ಕ್‌ಫೋರ್ಸ್ ತಂಡ ತ್ವರಿತ ಕಾರ್ಯಾಚರಣೆ ನಡೆಸುತ್ತಿದ್ದು, ಗಾಂಜಾ ಮಾರಾಟ ಹಾಗು ಮಾದಕ ಜಾಲದ ಮೇಲೆ ಪೊಲೀಸ್ ಇಲಾಖೆ ಹದ್ದಿನ ಕಣ್ಣಿಟ್ಟಿದೆ. ಕಳೆದ ಒಂದು ವಾರದಲ್ಲೇ ಬೇಲೂರು ತಾಲ್ಲೂಕಿನ ಅರೇಹಳ್ಳಿ, ಹೊಳೆನರಸೀಪುರ ಮತ್ತು ಸಕಲೇಶಪುರ ಭಾಗಗಳಲ್ಲಿ ದಾಳಿ ನಡೆಸಿ ಹಲವು ಪ್ರಕರಣಗಳನ್ನು ದಾಖಲಿಸಲಾಗಿದೆ. ಮಾದಕ ವಸ್ತುಗಳ ಮಾರಾಟ ಮತ್ತು ಬಳಕೆಯ ವಿರುದ್ಧ ಜಿಲ್ಲಾ ಪೊಲೀಸರು ಹಾಗು ಅಬಕಾರಿ ಇಲಾಖೆ ಜಂಟಿಯಾಗಿ ಕಠಿಣ ಕ್ರಮ ಕೈಗೊಂಡಿದೆ.

ಕಾಲೇಜು ವಿದ್ಯಾರ್ಥಿಗಳು ಮತ್ತು ಯುವ ಸಮುದಾಯವನ್ನು ಗುರಿಯಾಗಿಸಿಕೊಂಡು ಗಾಂಜಾ ಹಾಗೂ ಇತರೆ ಡ್ರಗ್ಸ್ ಮಾರಾಟ ಜಾಲ ಸಕ್ರಿಯವಾಗಿದ್ದು, ಶಿಕ್ಷಣ ಸಂಸ್ಥೆಗಳ ಸುತ್ತಮುತ್ತ ನಿಗಾವಹಿಸುವುದು, ಮಾಹಿತಿ ಸಂಗ್ರಹಿಸುವುದಾಗಿ ಪೊಲೀಸರು ತಿಳಿಸಿದ್ದಾರೆ.

# ಬಿತ್ತನೆ ಆಲೂಗೆಡ್ಡೆ ಮಾರಾಟಕ್ಕೆ ಚಾಲನೆ : ಕ್ವಿಂಟಾಲ್‌ಗೆ 1,200 ರೂ.

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಕೃಷಿ ಚಟುವಟಿಕೆ ಚುರುಕುಗೊಂಡಿದ್ದು, ಬಿತ್ತನೆ ಆಲೂಗೆಡ್ಡೆ ಮಾರಾಟಕ್ಕೆ ಜಿಲ್ಲಾಡಳಿತ ಶುಕ್ರವಾರ ಚಾಲನೆ ನೀಡಿದೆ.

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರ ಅಧ್ಯಕ್ಷತೆಯಲ್ಲಿ ಈ ಹಿಂದೆ ನಡೆದ ಜಿಲ್ಲಾ ಸಲಹಾ ಸಮಿತಿ ಸಭೆಯಲ್ಲಿ ಸಂಸದ ಹಾಗು ಶಾಸಕ ಹೆಚ್.ಪಿ.ಸ್ವರೂಪ್ ಅವರ ಉಪಸ್ಥಿತಿಯಲ್ಲಿ ಈ ಬಗ್ಗೆ ಚರ್ಚಿಸಿ, ಬಿತ್ತನೆ ಆಲೂಗಡ್ಡೆಗೆ ಬೆಲೆ ನಿಗದಿ ಪಡಿಸಿ, ಸಭೆಯಲ್ಲಿ ಪ್ರಸಕ್ತ ಸಾಲಿನ ಬಿತ್ತನೆ ಆಲೂಗಡ್ಡೆ ಮಾರಾಟವನ್ನು ಮೇ 15ರಿಂದ ಆರಂಭಿಸಲು ನಿರ್ಧರಿಸಲಾಗಿತ್ತು. ಆ ಪ್ರಕಾರ ರೈತರಿಗೆ ಅನುಕೂಲವಾಗುವಂತೆ ಕುಫ್ರಿ ಜ್ಯೋತಿ ತಳಿಯ ಬಿತ್ತನೆ ಆಲೂಗಡ್ಡೆಗೆ ಪ್ರತಿ ಕ್ವಿಂಟಾಲ್‌ಗೆ 1200ರೂ. ದರ ನಿಗದಿ ಮಾಡಲಾಗಿದೆ.

**ಅನಧಿಕೃತ ಮಾರಾಟ ತಡೆಗೆ ಜಾಗೃತಿ ಸಮಿತಿ**

ಬಿತ್ತನೆ ಆಲೂಗೆಡ್ಡೆಯ ಅನಧಿಕೃತ ಮಾರಾಟ ತಡೆಯಲು ಹಾಗು ಗುಣ ಮಟ್ಟ ಕಾಪಾಡಲು ತಾಲ್ಲೂಕು ಮಟ್ಟದಲ್ಲಿ ತೋಟಗಾರಿಕೆ ಮತ್ತು ಕಂದಾಯ ಇಲಾಖೆ ಅಧಿಕಾರಿಗಳನ್ನೊಳಗೊಂಡ ಜಾಗೃತಿ ಸಮಿತಿಗಳನ್ನು ರಚಿಸಲಾಗಿದೆ. ನೋಂದಣಿ ಮಾಡಿಸದ ವರ್ತಕರು, ದಲ್ಲಾಳಿಗಳು ಅಥವಾ ಮಾರಾಟಗಾರರು ಅಕ್ರಮವಾಗಿ ಆಲೂಗೆಡ್ಡೆ ಮಾರಾಟ ನಡೆಸುತ್ತಿರುವುದು ಕಂಡು ಬಂದರೆ ರೈತರು ತಕ್ಷಣ ತಾಲ್ಲೂಕು ಜಾಗೃತಿ ಸಮಿತಿ ಅಥವಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಗೆ ಮಾಹಿತಿ ನೀಡುವಂತೆ ಸೂಚಿಸಲಾಗಿದೆ. ಈ ಮೂಲಕ ಕಳಪೆ ಬಿತ್ತನೆ ಬೀಜ ಮಾರಾಟ ತಡೆ, ಹೆಚ್ಚಿನ ಬೆಲೆ ನಿಗದಿ, ಮಧ್ಯವರ್ತಿಗಳ ಹಾವಳಿ ತಡೆಗೆ ಕಠಿಣ ಕ್ರಮ ಕೈಗೊಳ್ಳಲಾಗಿದೆ.



ಇದರೊಂದಿಗೆ ಕೆಲವು ಲಾಟ್‌ಗಳಲ್ಲಿ ನಂಜಾಣು ಸೋಂಕು ಪತ್ತೆಯಾಗಿರುವ ಹಿನ್ನಲೆ ಅಂತಹ ಲಾಟ್‌ಗಳಿಂದ ಬಿತ್ತನೆ ಉದ್ದೇಶಕ್ಕೆ ಆಲೂಗೆಡ್ಡೆ ಮಾರಾಟ ಮಾಡದಂತೆ ನಿರ್ಬಂಧ ಹೇರಲಾಗಿದೆ. ಸೋಂಕಿತ ಲಾಟ್‌ಗಳ ಆಲೂಗೆಡ್ಡೆ ಮಾರಾಟ ಕಂಡುಬಂದರೆ ಅಧಿಕಾರಿಗಳ ಗಮನಕ್ಕೆ ತರಲು ಜಿಲ್ಲಾಡಳಿತ ಮನವಿ ಮಾಡಿದೆ.

> **ಬಿತ್ತನೆ ಆಲೂಗೆಡ್ಡೆ ಖರೀದಿಸುವಾಗ ರೈತರು ಖರೀದಿ ಬಿಲ್ಲಿನಲ್ಲಿ ತಳಿ, ಉತ್ಪಾದನಾ ಸ್ಥಳ, ಟ್ರೇಡ್ಮಾರ್ಕ್ ಹಾಗು ಗುಣ ಮಟ್ಟದ ವಿವರಗಳಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ರೈತರು ತಾಲ್ಲೂಕು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಹಾಗು ಹೋಬಳಿ ಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸಬಹುದು.**
> **- ಯೋಗೇಶ್, ತೋಟಗಾರಿಕೆ ಜಂಟಿ ನಿರ್ದೇಶಕ**

**ಮಾಹಿತಿ ಕೇಂದ್ರ ಆರಂಭ**

ಬಿತ್ತನೆ ಆಲೂಗೆಡ್ಡೆ ಖರೀದಿಸುವ ರೈತರಿಗೆ ತಾಂತ್ರಿಕ ಮಾರ್ಗದರ್ಶನ ನೀಡಲು ನಗರದ ಎಪಿಎಂಸಿ ಪ್ರಾಂಗಣದಲ್ಲಿ ಆಲೂಗೆಡ್ಡೆ ಮಾಹಿತಿ ಕೇಂದ್ರ ಆರಂಭಿಸಲಾಗಿದೆ. ರೈತರು ಸ್ಥಳದಲ್ಲಿಯೇ ತಾಂತ್ರಿಕ ಸಲಹೆ, ಗುಣಮಟ್ಟದ ಮಾಹಿತಿ ಹಾಗು ಬೆಳೆ ನಿರ್ವಹಣೆ ಕುರಿತ ಮಾರ್ಗದರ್ಶನ ಪಡೆಯಬಹುದಾಗಿದೆ.

**ತಾಂತ್ರಿಕ ಸಮಿತಿಗಳ ರಚನೆ**

ಗ್ರಾಮ ಮತ್ತು ತಾಲ್ಲೂಕು ಮಟ್ಟದಲ್ಲಿ ರೈತರಿಗೆ ಆಲೂಗೆಡ್ಡೆ ಬೆಳೆ ಸಂಬಂಧಿತ ತಾಂತ್ರಿಕ ಮಾಹಿತಿ ನೀಡಲು ವಿಜ್ಞಾನಿಗಳು, ಅಧಿಕಾರಿಗಳನ್ನೊಳಗೊಂಡ ತಾಂತ್ರಿಕ ಸಮಿತಿಗಳನ್ನು ರಚಿಸಲಾಗಿದೆ. ಬಿತ್ತನೆ ಪೂರ್ವ ಸಿದ್ಧತೆ, ಬೀಜೋಪಚಾರ, ಗೊಬ್ಬರ ಬಳಕೆ ಮತ್ತು ರೋಗ ನಿರ್ವಹಣೆ ಮಾಹಿತಿಯನ್ನು ರೈತರಿಗೆ ನೀಡಲು ತೋಟಗಾರಿಕೆ ಇಲಾಖೆ ಮುಂದಾಗಿದೆ.

**ಬೀಜೋಪಚಾರದ ನಂತರ ಬಿತ್ತನೆಗೆ ಸೂಚನೆ**

ಖರೀದಿಸಿದ ಬಿತ್ತನೆ ಆಲೂಗೆಡ್ಡೆಯನ್ನು ಕನಿಷ್ಠ 10ರಿಂದ 15 ದಿನಗಳವರೆಗೆ ನೆರಳಿನಲ್ಲಿ ಹರಡಿ ಹದಗೊಳಿಸಿ, ಬಿತ್ತನೆಗೆ 24 ಗಂಟೆಗಳ ಮೊದಲು ಬೀಜೋಪಚಾರ ಮಾಡಿ ನಂತರ ಬಿತ್ತನೆ ಮಾಡುವುದು ಸೂಕ್ತವೆಂದು ತಜ್ಞರು ತಿಳಿಸಿದ್ದಾರೆ. ಜೊತೆಗೆ ಭೂಮಿಯನ್ನು ಮುಂಚಿತವಾಗಿ ಸಿದ್ಧಪಡಿಸಿ, ಜೈವಿಕ ಹಾಗು ಕೊಟ್ಟಿಗೆ ಗೊಬ್ಬರ ಬಳಸಿ ಮಣ್ಣಿನ ತಾಪಮಾನ ಕಡಿಮೆಯಾದ ಬಳಿಕ ಬಿತ್ತನೆ ಕೈಗೊಳ್ಳುವಂತೆ ಸಲಹೆ ನೀಡಲಾಗಿದೆ.

# ಆನ್‌ಲೈನ್ ಮಾರಾಟಕ್ಕೆ ವಿರೋಧ : ಮೇ 20ರಂದು ಔಷಧ ಅಂಗಡಿಗಳ ಬಂದ್‌ಗೆ ಕರೆ

• ಪ್ರಜೋದಯ ವರದಿ

**ಹಾಸನ:** ಔಷಧ ವ್ಯಾಪಾರಿಗಳ ಉಳಿವು ಹಾಗು ಸಾರ್ವಜನಿಕರ ಆರೋಗ್ಯ ಹಿತಾಸಕ್ತಿ ಕಾಪಾಡುವ ಉದ್ದೇಶದಿಂದ ಮೇ 20ರಂದು ದೇಶವ್ಯಾಪಿ ಒಂದು ದಿನ ಔಷಧ ಅಂಗಡಿ ಬಂದ್‌ಗೆ ಅಖಿಲ ಭಾರತ ಔಷಧ ವ್ಯಾಪಾರಿಗಳ ಸಂಘಟನೆ ಕರೆ ನೀಡಿದೆ.

ಈ ಸಂಬಂಧ ಜಿಲ್ಲಾ ಔಷಧ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಶುಕ್ರವಾರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು. ದೇಶದಲ್ಲಿ 12.40 ಲಕ್ಷಕ್ಕೂ ಹೆಚ್ಚು ಔಷಧ ವ್ಯಾಪಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಆನ್‌ಲೈನ್ ಮೂಲಕ ನಡೆಯುತ್ತಿರುವ ಔಷಧ ಮಾರಾಟ, ಅತಿಯಾದ ರಿಯಾಯಿತಿ ದರಗಳು ಹಾಗು ನಿಯಮ ಉಲ್ಲಂಘನೆಗಳಿಂದ ಸಣ್ಣ ವ್ಯಾಪಾರಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆಂದು ಆರೋಪಿಸಿದರು.



ಈ ವೇಳೆ ಸಂಘದ ಪ್ರಧಾನ ಕಾರ್ಯದರ್ಶಿ ಗಿರೀಗೌಡ ಅವರು ಮಾತನಾಡಿ, ಇತ್ತೀಚಿನ ಬೆಳವಣಿಗೆಗಳಿಂದ ಸುಮಾರು 5 ಕೋಟಿ ಜನರ ಜೀವನೋಪಾಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಆನ್‌ಲೈನ್ ಮೂಲಕ ಔಷಧ ಮಾರಾಟ ವೇದಿಕೆಗಳಲ್ಲಿ ಸಮರ್ಪಕ ಪರಿಶೀಲನೆ ಇಲ್ಲದೆ ಔಷಧ ಮಾರಾಟ ಮಾಡುತ್ತಿರುವುದರಿಂದ ನಕಲಿ ವೈದ್ಯರ ಚೀಟಿಗಳ ಬಳಕೆ ಹೆಚ್ಚುತ್ತಿದೆ ಎಂದು ಆರೋಪಿಸಿದರು.

ದೊಡ್ಡ ವ್ಯಾಪಾರ ಸಂಸ್ಥೆಗಳು ಭಾರೀ ಪ್ರಮಾಣದ ರಿಯಾಯಿತಿ ನೀಡುವ ಮೂಲಕ ಮಾರುಕಟ್ಟೆ ಸಮತೋಲನ ಹಾಳು ಮಾಡುತ್ತಿವೆ. ಗ್ರಾಮೀಣ ಹಾಗು ಪಟ್ಟಣ ಪ್ರದೇಶಗಳ ಸಣ್ಣ ಔಷಧ ವ್ಯಾಪಾರಿಗಳು ವಹಿವಾಟು ನಡೆಸಲು ಕಷ್ಟಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೊರೊನಾ ಅವಧಿಯಲ್ಲಿ ಜಾರಿಗೊಂಡಿದ್ದ ಅಧಿಸೂಚನೆಯನ್ನು ಇನ್ನೂ ಮುಂದುವರಿಸಿಕೊಂಡು ಬರಲಾಗುತ್ತಿದೆ. ಹೀಗಾಗಿ ಆ ಅಧಿಸೂಚನೆ ಹಿಂಪಡೆಯಬೇಕೆಂದು ಒತ್ತಾಯಿಸಿದ ಅವರು, ಸರ್ಕಾರ ನಮ್ಮ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಅನಿರ್ದಿಷ್ಟಾವಧಿ ಹೋರಾಟ ಆರಂಭಿಸಲಾಗುವುದೆಂದು ಎಚ್ಚರಿಕೆ ನೀಡಿದರು.

ಜಿಲ್ಲಾ ಔಷಧ ವ್ಯಾಪಾರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಎಂ.ಸಣ್ಣ ಮಂಜೇಗೌಡ, ಜಿಲ್ಲಾ ಪ್ರತಿನಿಧಿ ಎಸ್.ಎಸ್.ಸಂತೋಷ್ ಜೈನ್ ಸೇರಿ ಹಲವರು ಇದ್ದರು.

## ಇಂದು ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಶನಿವಾರ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಬೆಳಿಗ್ಗೆ 10 ಗಂಟೆಗೆ ಚನ್ನರಾಯಪಟ್ಟಣ ತಾಲ್ಲೂಕಿನ ಕಾಂಗ್ರೆಸ್ ಭವನದ ಭೂಮಿ ಪೂಜೆ ಕಾರ್ಯ ಕ್ರಮದಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 12 ರಿಂದ 3 ಗಂಟೆ ಯವರೆಗೆ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಜಿಲ್ಲೆಯ ವಿವಿಧ ತಾಲ್ಲೂಕಿನಲ್ಲಿ ನಡೆದಿರುವ ಜನಸ್ಪಂದನಾ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಸ್ವೀಕೃತವಾಗಿರುವ ಅರ್ಜಿಗಳ ಬಗ್ಗೆ ಕೈಗೊಂಡಿರುವ ಕ್ರಮದ ವಿಚಾರವಾಗಿ ಮತ್ತು ಇತರೆ ಪ್ರಮುಖ ವಿಷಯಗಳ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ.

# ಎಂಸಿಇ ಪ್ರಾಂಶುಪಾಲರಾಗಿ ಪ್ರದೀಪ್ ಅಧಿಕಾರ ಸ್ವೀಕಾರ



• ಪ್ರಜೋದಯ ವರದಿ

**ಹಾಸನ:** ನಗರದ ಮಲೆನಾಡು ಇಂಜಿನೀಯರಿಂಗ್ ಕಾಲೇಜಿನ ನೂತನ ಪ್ರಾಂಶುಪಾಲರಾಗಿ ಡಾ.ಎಸ್.ಪ್ರದೀಪ್ ಅವರು ಶುಕ್ರವಾರ ಅಧಿಕಾರ ವಹಿಸಿಕೊಂಡರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷ ಬಿ.ಆರ್.ಗುರುದೇವ್ ಹಾಗು ಆಡಳಿತ ಮಂಡಳಿ ಪದಾಧಿಕಾರಿಗಳ ಸಮ್ಮುಖದಲ್ಲಿ ಡಾ.ಹೆಚ್.ಜೆ.ಅಮರೇಂದ್ರ ಅವರು ಜವಾಬ್ದಾರಿ ಹಸ್ತಾಂತರಿಸಿದರು. ಡಾ. ಎಸ್.ಪ್ರದೀಪ್ ಅವರು ಎಂಸಿಇ ಕಾಲೇಜಿನಲ್ಲಿ ಮೆಕ್ಯಾನಿಕಲ್ ಇಂಜಿನೀಯರಿಂಗ್ ವ್ಯಾಸಂಗ ಮಾಡಿ ಅದೇ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥರಾಗಿ, ಈ ಹಿಂದೆ ಮಲೆನಾಡು ಇಂಜಿನೀಯರಿಂಗ್ ಕಾಲೇಜು ಪ್ರಾಂಶು ಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಸಮಿತಿ ಪ್ರಧಾನ ಕಾರ್ಯ ದರ್ಶಿ ಜಿ.ಟಿ.ಕುಮಾರ್, ಖಜಾಂಚಿ ಎಸ್.ಶ್ರೀಧರ್, ನಿರ್ದೇಶಕರಾದ ಕೆ.ಎಂ.ಶಿವಣ್ಣ, ಕೆ.ಪ್ರಭಾಕರ್, ಕೆ.ಎನ್.ಗುರಪ್ಪ, ಬೂವನಹಳ್ಳಿ ಶ್ರೀನಿವಾಸ್, ಎಸ್.ಸುರೇಶ್ ಮತ್ತಿತರರಿದ್ದರು.

# ಬ್ರಿಲಿಯಂಟ್ ಕಾಲೇಜಿನಲ್ಲಿ ಅಭಿ ವಿನ್ಯಾಸ

• ಪ್ರಜೋದಯ ವರದಿ

**ಹಾಸನ:** ನಗರದ ಬ್ರಿಲಿಯಂಟ್ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಶುಕ್ರವಾರ ಅಭಿ ವಿನ್ಯಾಸ ಕಾರ್ಯಕ್ರಮ ನೆರವೇರಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಹಾಗು ಆಡಳಿತಾಧಿಕಾರಿ ಪ್ರೊ. ಜವರಾಜೇಗೌಡ ಅವರು ಮಾತನಾಡಿ, ವಿದ್ಯಾರ್ಥಿಗಳಿಗೆ ಮುಂದಿನ ಎರಡು ವರ್ಷದ ಪಿಯುಸಿ ಅಧ್ಯಯನ ಹಾಗು ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಕುರಿತು ಮಾಹಿತಿ ನೀಡಿದರು.

ಸಂಪನ್ಮೂಲ ವ್ಯಕ್ತಿ ಥಾಮಸ್ ಜಾನ್ ರೋಸ್ ಅವರು, ವಿದ್ಯಾರ್ಥಿ ಜೀವನದಲ್ಲಿ ವಿನಯವಂತಿಕೆ, ಪೋಷಕರ ಮೇಲಿನ ಪ್ರೀತಿ, ಗುರುಗಳಿಗೆ ತೋರಬೇಕಾದ ಗೌರವ, ಮುಂದಿನ ವಿದ್ಯಾಭ್ಯಾಸದ ಅವಧಿಯಲ್ಲಿ ತಾವು ಅಧ್ಯಯನ ಮಾಡುವ ವಿಧಾನಗಳ ಕುರಿತು ಸ್ಫೂರ್ತಿದಾಯಕ ಮಾತುಗಳನ್ನಾಡಿದರು.

ಸಂಸ್ಥೆಯ ಕಾರ್ಯದರ್ಶಿ ಡಾ. ಹೆಚ್.ಎಸ್.ಅನಿಲ್ ಕುಮಾರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪ ಪ್ರಾಂಶುಪಾಲೆ ಪುಷ್ಪ ಅವರು ಉಪನ್ಯಾಸ ನೀಡಿದರು.





ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 7ನೇ ಸ್ಥಾನ ಹಾಗು ಕಾಲೇಜಿಗೆ ಪ್ರಥಮ ಸ್ಥಾನ ಪಡೆದ ಟಿ.ಆರ್. ಹೇಮಲತಾ ಮತ್ತು ಪ್ರಥಮ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ 600ಕ್ಕೆ 599 ಅಂಕ ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದ ಭುವನ್ ಅವರನ್ನು ಸನ್ಮಾನಿಸಲಾಯಿತು.

ಸಂಸ್ಥೆಯ ವ್ಯವಸ್ಥಾಪಕ ಕೆ.ವಿ. ರಘುಕುಮಾರ್, ಉಪನ್ಯಾಸಕರು, ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಹಾಗು ಪೋಷಕರು ಹಾಜರಿದ್ದರು.

## ನಿಯಮ ಉಲ್ಲಂಘನೆಯ ಗಂಭೀರ ಆರೋಪ | 700 ವಿದ್ಯಾರ್ಥಿಗಳ ಭವಿಷ್ಯ ಅತಂತ್ರ

# ಋಷಿ ಶ್ರೀ ವಿದ್ಯಾನಿಕೇತನ ಸಂಸ್ಥೆಗೆ ನೋಟೀಸ್

• ಪ್ರಜೋದಯ ವರದಿ

**ಹಾಸನ:** ಹೊಳೆನರಸೀಪುರ ತಾಲ್ಲೂಕಿನ ಐಚನಹಳ್ಳಿಯ ಋಷಿ ಶ್ರೀ ವಿದ್ಯಾನಿಕೇತನ ಸಿಬಿಎಸ್‌ಇ ವಿದ್ಯಾಸಂಸ್ಥೆ ಆಡಳಿತ ಮಂಡಳಿ ವಿರುದ್ಧ ಕಾನೂನು ಉಲ್ಲಂಘನೆಯ ಗಂಭೀರ ಆರೋಪ ಕೇಳಿ ಬಂದಿದ್ದು, ಮಾನ್ಯತೆ ರದ್ದಾಗುವ ಸಾಧ್ಯತೆ ಹೆಚ್ಚಿದೆ.

2017-18ನೇ ಸಾಲಿನಲ್ಲಿ ಪ್ರಾರಂಭವಾದ ಶಾಲೆಯಲ್ಲಿ ಪ್ರಸ್ತುತ 700 ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಆಡಳಿತ ಮಂಡಳಿ ವೈಮನಸ್ಸಿನಿಂದ ಶಾಲೆಯ ಮಾನ್ಯತೆ ರದ್ದಾಗುವ ಭೀತಿ ಕಾಡುತ್ತಿದ್ದು, ಮಕ್ಕಳನ್ನು ಬೇರೆ ಶಿಕ್ಷಣ ಸಂಸ್ಥೆಗೆ ದಾಖಲಿಸುವ ಕುರಿತು ಶಿಕ್ಷಣ ಇಲಾಖೆ ಚಿಂತನೆ ನಡೆಸುತ್ತಿದೆ ಎಂದು ತಿಳಿದುಬಂದಿದೆ.

**ಡಿಡಿಪಿಐ ನೋಟೀಸ್**

ನಿಯಮ ಉಲ್ಲಂಘನೆ ಸಂಬಂಧ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಎನ್.ಬಲರಾಮ್ ಅವರು ಈಗಾಗಲೇ ಋಷಿ ಶ್ರೀ ಶಾಲೆಯ ಕಾರ್ಯದರ್ಶಿಗೆ ನೋಟೀಸ್ ಜಾರಿ ಮಾಡಿದ್ದಾರೆ. ವಿದ್ಯಾಸಂಸ್ಥೆ ಸಂಸ್ಥಾಪಕರಲ್ಲಿ ಒಬ್ಬರಾದ ಸುರೇಶ್ ಅವರು ಮಾಡಿಕೊಟ್ಟಿರುವ 30 ವರ್ಷಗಳ ಭೋಗ್ಯದ ಕರಾರು ಕಾರಣಾಂತರಗಳಿಂದ 2025ರ ಫೆ.19 ರಂದು ರದ್ದಾಗಿದೆ. ಈಗ ಶಾಲೆ ನಡೆಯುತ್ತಿರುವ ಸ್ಥಳಕ್ಕೆ ಯಾವುದೇ ಕರಾರು ಪತ್ರವಿಲ್ಲ. ಹೀಗಾಗಿ ಶಾಲೆ ಅನಧಿಕೃತವೆಂದು ಪರಿಗಣಿಸಬೇಕಾಗುತ್ತದೆ. ಶಾಲಾ ಆಡಳಿತ ಮಂಡಳಿಯು ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗು ಗ್ರಾಮ ಪಂಚಾಯಿತಿಯಿಂದ ಅನುಮತಿ ಪಡೆಯದೆ ಎರಡು ಅಂತಸ್ತಿನ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುವ ಸಾಧ್ಯತೆ ಇದೆ. ಈ ಆರೋಪಗಳ ಬಗ್ಗೆ ಸೂಕ್ತ ಕಾರಣ ನೀಡಬೇಕೆಂದು ಮಾ.26 ರಂದು ಶಿಕ್ಷಣ ಇಲಾಖೆ ಉಪನಿರ್ದೇ ಶಕರು ನೋಟೀಸ್ ಜಾರಿ ಮಾಡಿದ್ದಾರೆ.





> **ಸುರೇಶ್ ಮಾಲೀಕತ್ವದಲ್ಲಿ ಜಾಗ**
> **ಋಷಿ ಶ್ರೀ ವಿದ್ಯಾ ನಿಕೇತನ ಶಾಲೆಯು 2 ಎಕರೆ ವಿಸ್ತಾರ ಹೊಂದಿದ್ದು, ಸುರೇಶ್ ಅವರೇ ಮಾಲೀಕತ್ವ ಹೊಂದಿದ್ದಾರೆ. ನಗರ ಯೋಜನಾ ಪ್ರಾಧಿಕಾರದಿಂದ ಅನುಮತಿ ಪಡೆದು ಭೂಮಿ ಪರಿವರ್ತನೆ ಮಾಡಿಕೊಳ್ಳಲಾಗಿದೆ. ಶಿಕ್ಷಣ ಸಂಸ್ಥೆಗಾಗಿ ಮಾರ್ಪಾಡಾಗಿರುವ ಜಾಗ ಇದಾಗಿದ್ದು, ಪ್ರತಿವರ್ಷ ನವೀಕರಣ ಆಗದಿರುವುದೇ ಸದ್ಯದ ಸಮಸ್ಯೆಗೆ ಕಾರಣವಾಗಿದೆ.**
> **ಜೂನ್ 1 ರಿಂದ ತರಗತಿಗಳು ಪ್ರಾರಂಭವಾಗುತ್ತಿದ್ದು, ಮಕ್ಕಳನ್ನು ಶಾಲೆಗೆ ಕಳುಹಿಸುವುದೋ ಅಥವಾ ಬೇರೆ ಶಾಲೆಗಳಿಗೆ ದಾಖಲಿಸುವುದೇ ಎಂಬ ಗೊಂದಲದಲ್ಲಿ ಪೋಷಕರಿದ್ದಾರೆ.**

15 ದಿನಗಳೊಳಗೆ ಪ್ರತಿಕ್ರಿಯೆ ನೀಡದಿದ್ದರೆ ಶಿಕ್ಷಣ ಕಾಯ್ದೆ 1983 ಮತ್ತು ಆರ್‌ಟಿಇ ಕಾಯ್ದೆ 2009ರಂತೆ ಶಾಲೆ ವಿರುದ್ಧ ಕ್ರಮ ಜರುಗಿಸಲಾಗುವುದೆಂದು ಎಚ್ಚರಿಕೆ ನೀಡಲಾಗಿತ್ತು. ನೋಟೀಸ್‌ಗೆ ಆಡಳಿತ ಮಂಡಳಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲವೆಂಬ ಮಾಹಿತಿ ಲಭ್ಯವಾಗಿದ್ದು, ಸೋಮವಾರ ಅಂತಿಮ ಕ್ರಮದ ಆದೇಶ ಪ್ರಕಟವಾಗುವ ಸಾಧ್ಯತೆ ಇದೆ.

**ಆತಂಕದಲ್ಲಿ ವಿದ್ಯಾರ್ಥಿಗಳು**

ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿವೆಂಬ ಉದ್ದೇಶದಿಂದ ಪ್ರಾರಂಭವಾದ ಋಷಿ ಶ್ರೀ ವಿದ್ಯಾನಿಕೇತನ ಶಾಲೆಯು ಉತ್ತಮ ಫಲಿತಾಂಶದ ಮೂಲಕ ಒಳ್ಳೆಯ ಹೆಸರು ಪಡೆದಿದೆ. ಆದರೆ, ಶಾಲೆಗೆ ಜಾಗ ನೀಡಿದ ಸುರೇಶ್ ಹಾಗು ಆಡಳಿತ ಮಂಡಳಿ ನಡುವೆ ಹಣಕಾಸಿನ ವಿಚಾರಕ್ಕೆ ವೈಮನಸ್ಸು ಉಂಟಾಗಿ 2024ರಲ್ಲಿ ಸಂಸ್ಥೆ ಯಿಂದ ಹೊರ ಬಂದಿದ್ದಾರೆ ಎನ್ನಲಾಗಿದೆ.

ಮೈಸೂರು ಮೂಲದ ಉದ್ಯಮಿಯೊಬ್ಬರು ಆಡಳಿತ ವಹಿಸಿ ಕೊಂಡಿದ್ದು, ಕಾನೂನು ನಿಯಮಗಳನ್ನು ಗಾಳಿಗೆ ತೂರಿ ವರ್ತಿಸುತ್ತಿದ್ದಾರೆ. ಪ್ರತಿ ವರ್ಷ ಜಾಗದ ಪರವಾನಗಿ ನವೀಕರಣ, ಹೆಚ್ಚುವರಿ ಕಟ್ಟಡಕ್ಕೆ ಅನುಮತಿ ಪಡೆಯಬೇಕೆಂಬ ನಿಯಮ ಕಡ್ಡಾಯವಾಗಿದ್ದರೂ ಪಾಲಿಸದಿರುವುದು ಸಾಕಷ್ಟು ಪ್ರಶ್ನೆಗಳನ್ನು ಹುಟ್ಟು ಹಾಕಿದೆ.

# ಸ್ಪರ್ಧೆ ಮುಗಿದ ಮೇಲೆ ನಮಗೆ ಅಲ್ಲೊಬ್ಬ ಸಿಗುತ್ತಾನೆ

**ಹುಡುಗ ಮೈಕಲ್ ಫೆಲ್ಪ್ಸ್‌ಗೆ ಸ್ವಿಮ್ಮಿಂಗ್ ಪೂಲ್ ಹುಚ್ಚು ಹಿಡಿದುಹೋಯಿತು. ಮಕ್ಕಳಿಗೆ ಸಹಜವಾಗಿ ನೀರಿನ ಆಟ, ಈಜಾಟ ಖುಷಿ. ಇವನೋ ವಿಚಿತ್ರ. ಹುಚ್ಚು ಎಷ್ಟೆಂದರೆ ಇವನ ವಾರಿಗೆಯವರೆಲ್ಲ ಯಾವ ಹವ್ಯಾಸ ಇಷ್ಟವಾಗಬಹುದು ಎಂಬ ಲೆಕ್ಕಾಚಾರದಲ್ಲಿ ಮಲಗಿದ್ದರೆ, ಫೆಲ್ಪ್ಸ್ ಬೆಳಿಗ್ಗೆ ಐದು ಗಂಟೆಗೆ ಹೋಗಿ ತಣ್ಣನೆಯ ಈಜುಕೊಳದೊಳಗೆ ಹಾರುತ್ತಿದ್ದ. ಅವನ ಕೋಚ್ – ಗುರುವಿಗೆ ಇವನಲ್ಲಿನ ಅಸಾಮಾನ್ಯ ಸಾಮರ್ಥ್ಯ ತಿಳಿಯಲು ಹೆಚ್ಚಿನ ಸಮಯ ಬೇಕಾಗಲಿಲ್ಲ.**

ಮೈಕಲ್ ಫೆಲ್ಪ್ಸ್. ನಿಮಗೆ ಇವತ್ತು ಇವನ ಕಥೆಯನ್ನು ಹೇಳಬೇಕು, ಆದಷ್ಟು ಚಿಕ್ಕದಾಗಿ. ಒಲಿಂಪಿಕ್ಸ್‌ನಲ್ಲಿ ಈ ವರೆಗೆ ಅತಿಹೆಚ್ಚು ವೈಯಕ್ತಿಕ ಪದಕ ಗೆದ್ದ ಇವನ ಹೆಸರನ್ನು ನೀವು ಕೇಳಿಯೇ ಇರುತ್ತೀರಿ. ಇವನೇನಾದರೂ ದೇಶವಾಗಿದ್ದಿದ್ದರೆ ಒಲಂಪಿಕ್ ಸ್ವಿಮ್ಮಿಂಗ್ (ಈಜು) ಸ್ಪರ್ಧೆಯಲ್ಲಿ ಅತಿ ಹೆಚ್ಚು ಚಿನ್ನ ಗೆದ್ದ ಮೂರನೆಯ ದೇಶವಾಗಿರುತ್ತಿದ್ದನಂತೆ!

ಫೆಲ್ಪ್ಸ್‌ನನ್ನು ಕ್ರೀಡಾ ಜಗತ್ತು ಪರಿಚಯಿಸುವುದು ಹೀಗೆ. ಇವನು ಕೂಡ ಅವಿರತ ಶ್ರಮ ಪಟ್ಟು, ತಾಲೀಮು ನಡೆಸಿ ಪದಕ ಗೆದ್ದ ಸಾಧಕನೇ. ಆದರೆ ಕಥೆ ಕಲಿಸುವ ಪಾಠ ಮಾತ್ರ ವಿಭಿನ್ನ. ಮೈಕಲ್ ಫೆಲ್ಪ್ಸ್. ಒಲಿಂಪಿಕ್ಸ್‌ನ ದಂತಕಥೆ. ಹಾಗೆಂದು ಇವನನ್ನು ಕರೆಯುವುದಕ್ಕಿಂತ ಸುಮಾರು ವರ್ಷದ ಹಿಂದೆ ಶಾಲೆಯಲ್ಲಿ ಇವನೊಬ್ಬ ವಿಚಿತ್ರ ಹುಡುಗನಾಗಿದ್ದ. ಹೈಪರ್ ಆಕ್ಟಿವ್!

ಇವನಿಗೆ ಕ್ಲಾಸಿನಲ್ಲಿ ಕೂತಲ್ಲಿ ಕೂರಲಿಕ್ಕಾಗುತ್ತಿರಲಿಲ್ಲ. ಯಾವುದೇ ಒಂದು ವಿಷಯದ ಮೇಲೆ ಮನಸ್ಸನ್ನು ಹದಿನೈದು ಸೆಕೆಂಡ್‌ಗಿಂತ ಜಾಸ್ತಿ ಏಕಾಗ್ರಗೊಳಿಸಲಿಕ್ಕಾಗುತ್ತಿರಲಿಲ್ಲ. ಚೇಳು ಕಚ್ಚಿದ ಮಂಗನಂತೆ. ಎಷ್ಟೆಂದರೆ ಡಾಕ್ಟರ್ ಹತ್ತಿರ ತೋರಿಸುವ ಪರಿಸ್ಥಿತಿ ಬಂತು. ಡಾಕ್ಟರ್ ಇವನಿಗೆ ★ಅಈಏಈ(ಏಕಾಗ್ರತಾ ಕೊರತೆ ಮತ್ತು ಅತಿಚುರುಕುತನದ ಅವ್ಯವಸ್ಥೆ) ಇದೆ ಎಂದರು.

ಕೆಲವು ಮಕ್ಕಳಿಗೆ ಶಕ್ತಿ ಹೊರ ಹಾಕಲಿಕ್ಕೆ ಸಾಧ್ಯವಾಗದಷ್ಟು ಇರುತ್ತದೆಯಲ್ಲ. ವೈದ್ಯರು ಇವನನ್ನು ಸರಿ ಮಾಡಲಿಕ್ಕೆ ಕಷ್ಟ, ಕ್ರೀಡೆಗಳಲ್ಲಿ ತೊಡಗಿಸಿ, ಸ್ವಿಮ್ಮಿಂಗ್ ಇತ್ಯಾದಿ ಮಾಡಿಸಿ ಎಂದು ಪ್ರಿಸ್ಕ್ರಿಪ್ಷನ್ ಚೀಟಿ ಬರೆದುಕೊಟ್ಟರು.

ಹುಡುಗ ಮೈಕಲ್ ಫೆಲ್ಪ್ಸ್‌ಗೆ ಸ್ವಿಮ್ಮಿಂಗ್ ಪೂಲ್ ಹುಚ್ಚು ಹಿಡಿದುಹೋಯಿತು. ಮಕ್ಕಳಿಗೆ ಸಹಜವಾಗಿ ನೀರಿನ ಆಟ, ಈಜಾಟ ಖುಷಿ. ಇವನೋ ವಿಚಿತ್ರ. ಹುಚ್ಚು ಎಷ್ಟೆಂದರೆ ಇವನ ವಾರಿಗೆಯವರೆಲ್ಲ ಯಾವ ಹವ್ಯಾಸ ಇಷ್ಟವಾಗಬಹುದು ಎಂಬ ಲೆಕ್ಕಾಚಾರದಲ್ಲಿ ಮಲಗಿದ್ದರೆ, ಫೆಲ್ಪ್ಸ್ ಬೆಳಿಗ್ಗೆ ಐದು ಗಂಟೆಗೆ ಹೋಗಿ ತಣ್ಣನೆಯ ಈಜುಕೊಳದೊಳಗೆ ಹಾರುತ್ತಿದ್ದ. ಅವನ ಕೋಚ್ – ಗುರುವಿಗೆ ಇವನಲ್ಲಿನ ಅಸಾಮಾನ್ಯ ಸಾಮರ್ಥ್ಯ ತಿಳಿಯಲು ಹೆಚ್ಚಿನ ಸಮಯ ಬೇಕಾಗಲಿಲ್ಲ. ಒಳ್ಳೆಯ ಐಬು ಇಲ್ಲದ ಆಳುತನ ಮತ್ತು ನೀರೆಂದರೆ ಹುಚ್ಚು. ಜೊತೆಯಲ್ಲಿ ಹೆದರಿಕೆಯಾಗುವಷ್ಟು ಶಿಸ್ತು.

ಫೆಲ್ಪ್ಸ್ ಉಳಿದೆ ಚಾಂಪಿಯನ್ ಕ್ರೀಡಾಪಟುಗಳಿಗಿಂತ ವಿಶೇಷವೆನಿಸುವುದು, ಪ್ರತ್ಯೇಕವೆನಿಸುವುದು ಅವನ ತಯಾರಿಯ ರೀತಿಯಲ್ಲಿ. ಯಾಂತ್ರಿಕ ನಿಖರತೆ. ಏನೆಂದರೆ ಒಂದು ಈಜಿನ ಸ್ಪರ್ಧೆಯಲ್ಲಿ ಭಾಗವಹಿಸಬೇಕೆಂದರೆ ಅದರ ಉದ್ದ, ಎಷ್ಟು ಲ್ಯಾಪ್ಸ್ (ಸುತ್ತು), ನೀರಿಗೆ ಹಾರುವುದರಿಂದ ಹಿಡಿದು, ಯಾವ ಕೋನದಲ್ಲಿ ದೇಹವನ್ನು ಬಾಗಿಸಿ ತಿರುಗಿ ಈಜಿ ಬರಬೇಕು ಇತ್ಯಾದಿ ಯಥಾವತ್- ಸ್ಪರ್ಧೆ ಹೇಗೆ ನಡೆಯುತ್ತದೆಯೋ ಅದೇ ರೀತಿ ತಯಾರಿ ನಡೆಸುತ್ತಿದ್ದ.

ಎಲ್ಲಾ ಈಜುಪಟುಗಳಿಗೂ ಉಸಿರು ಯಾವಾಗ ತೆಗೆದುಕೊಳ್ಳಬೇಕು ಎನ್ನುವುದು ಅತ್ಯಂತ ಮುಖ್ಯ. ಈಜುವಾಗ ಒಂದೇ ಉಸಿರು ಆಚೀಚೆಯಾದರೆ ವೇಗ ಕುಂಠಿತವಾಗಬಾರದು, ಸ್ಪರ್ಧೆ ಸೋಲಬಹುದು. ಫೆಲ್ಪ್ಸ್ ಪ್ರತಿ ಉಸಿರು ತೆಗೆದುಕೊಳ್ಳುವುದನ್ನೂ ಸೇರಿದಂತೆ ಎಲ್ಲವನ್ನೂ ಅವನ ತಾಲೀಮಿನ ಭಾಗವನ್ನಾಗಿಸಿಕೊಂಡಿದ್ದ.

ಕ್ರೀಡಾಪಟುಗಳು ಒಲಂಪಿಕ್‌ನಂತಹ ಕ್ರೀಡೆಗಳಿಗೆ ತಯಾರಿ ನಡೆಸುವ ರೀತಿ ಯಾವತ್ತೂ ನನ್ನಲ್ಲಿ ಆಶ್ಚರ್ಯ ಹುಟ್ಟಿಸುತ್ತದೆ. ಉದಾಹರಣೆಗೆ ಕೆನ್ಯಾದಂದು ಗ್ರಾಮವಿದೆ- ಇಟನ್. ನಾವು ಯಾವುದೇ ದೇಶದ ಮ್ಯಾರಥಾನ್ ಓಟವನ್ನು ತೆಗೆದುಕೊಳ್ಳಿ. ಅಲ್ಲಿ ಕೋಲು ಕಡ್ಡಿಯಂತಹ ಆಫ್ರಿಕಾ ದೇಶದವರು ಉಳಿದೆಲ್ಲರಿಗಿಂತ ಒಂದೆರಡು ಕಿಲೋಮೀಟರ್ ಮುಂದೆ ಓಡುತ್ತಿರುತ್ತಾರೆ ಗಮನಿಸಿದ್ದೀರಾ? ಅವರೆಲ್ಲರೂ ಮ್ಯಾರಥಾನ್ ತಯಾರಿ ಮಾಡುವುದು ಈ ಗ್ರಾಮದಲ್ಲಿ.

ಅಲ್ಲಿ ಮ್ಯಾರಥಾನ್ ಕೋಚಿಂಗ್ ಸೆಂಟರ್, ಹಾಸ್ಟೆಲ್ ಎಲ್ಲವೂ ಇದೆ. ಅವರ ತಯಾರಿ ಹೀಗೆ – ಬೆಳಿಗ್ಗೆ ಎದ್ದು ಮೂರು ಗಂಟೆ ಓಡುವುದು. ರೂಮಿಗೆ ಬಂದು ಊಟ, ಮಧ್ಯಾಹ್ನದ ನಿದ್ರೆ. ಮತ್ತೆ ಸಂಜೆ ಮೂರು ತಾಸು ಓಡುವುದು. ಊಟ ಮುಗಿಸಿ- ಮಲಗುವುದು- ಮಾರನೆಯ ದಿನ ಬೆಳಿಗ್ಗೆ ಎದ್ದು ಮತ್ತದೇ ಕಾಯಕ. ಊಟ, ನಿದ್ರೆ, ಓಟ.

ಇದನ್ನು ನಾಲ್ಕೈದು ವರ್ಷ ಪ್ರತಿನಿತ್ಯ ಮಾಡುವವರಿದ್ದಾರೆ. ಮೈಕೆಲ್ ಫೆಲ್ಪ್ಸ್ ತಯಾರಿ ಕೂಡ ಹಾಗೆಯೇ ಇತ್ತು. ನಿತ್ಯ ಬೆಳಿಗ್ಗೆ ಐದರಿಂದ ಈಜು – ಮಧ್ಯಾಹ್ನ ಊಟ ಮುಗಿಸಿ ಮತ್ತೆ ಈಜು. ಮಲಗೆದ್ದು ಮತ್ತೆ ಈಜು. ಊಟ, ನಿದ್ರೆ, ಈಜು. ಸಾಮಾನ್ಯವಾಗಿ ಈ ರೀತಿಯ ತಯಾರಿ ಮಾಡುವವರು ವಾರದಲ್ಲಿ ನಾಲ್ಕು ಅಥವಾ ಐದು ದಿನ ಮಾಡುತ್ತಾರೆ.

ಇನ್ನುಳಿದ ಎರಡು ದಿನ ದೇಹಕ್ಕೆ ವಿಶ್ರಾಂತಿ. ಆದರೆ ಮೈಕೆಲ್ ಫೆಲ್ಪ್ಸ್ ಒಂದು ದಿನವೂ ವಿಶ್ರಮಿಸಲಿಲ್ಲ. ಒಂದೇ ಒಂದು ದಿನ ಬಿಡದೆ ಈಜು – ವ್ಯಾಯಾಮ, ನಿದ್ರೆ. ಅವನ ತಯಾರಿ ಹೀಗಿರುತ್ತಿತ್ತು ಎಂದರೆ – ಅವನು ಒಲಂಪಿಕ್ ಸ್ಪರ್ಧಿಸುವಾಗ ಉಳಿದವರ ಜೊತೆ ಸ್ಪರ್ಧಿಸುತ್ತಿರಲಿಲ್ಲ, ಬದಲಿಗೆ ಮನುಷ್ಯನ ದೇಹದ ಮಿತಿಯ ಜೊತೆಯೇ ಸ್ಪರ್ಧೆಗಿಳಿಯುತ್ತಿದ್ದ!

2008ರ ಬೀಜಿಂಗ್ ಒಲಂಪಿಕ್. ಎಂಟು ಗೋಲ್ಡ್ ಮೆಡಲ್! ಅಲ್ಲಿಯವರೆಗೆ ಒಂದು ಒಲಂಪಿಕ್ ಪಂದ್ಯದಲ್ಲಿ ಇಷ್ಟು ಚಿನ್ನದ ಪದಕ ಗೆದ್ದವರೇ ಇರಲಿಲ್ಲ. ಅಷ್ಟಕ್ಕೇ ನಿಲ್ಲಲಿಲ್ಲ. ಮತ್ತೆ ನಾಲ್ಕು ವರ್ಷದ ಪ್ರತಿನಿತ್ಯದ ತಯಾರಿ, ಇನ್ನೊಂದು ಒಲಂಪಿಕ್, ಅಂದಿಷ್ಟು ಪದಕ. ಅವನು ಒಲಂಪಿಕ್‌ನಲ್ಲಿ ಗೆದ್ದ ಒಟ್ಟೂ ಪದಕ 28!

ಫೆಲ್ಪ್ಸ್ ಕೇಳಿದರೆ 28 ಅಲ್ಲ, 23 ಎಂದು ಮಾಡುತ್ತಾನೆ. ಏಕೆಂದರೆ ಅದರಲ್ಲಿ 23 ಮಾತ್ರ ಚಿನ್ನದ ಪದಕ. ಅವನ ಲೆಕ್ಕದಲ್ಲಿ ಚಿನ್ನ ಗೆಲ್ಲದಿದ್ದರೆ ಅದು ಗೆಲುವೇ ಅಲ್ಲ – ಸೋಲು. ಭಾರತಕ್ಕೆ ಇಲ್ಲಿಯ ತನಕ ಈಜಿನಲ್ಲಿ ಒಂದೇ ಒಂದು ಕಂಚಿನ ಮೆಡಲ್ ಕೂಡ ಬಂದಿಲ್ಲ ಅನ್ನೋದೂ ತಿಳಿದಿರಲಿ. ಹೀಗೆ ಇಷ್ಟೊಂದು ತಯಾರಿ – ಮೈಕೆಲ್ ಫೆಲ್ಪ್ಸ್ ದಂತಕತೆ ಇತ್ಯಾದಿ ಆದದ್ದು ಆಯ್ತು.

ಒಲಿಂಪಿಕ್ ಮೊದಲಾದ ಕ್ರೀಡೆಗಳನ್ನು ವೃತ್ತಿ, ಬದುಕಿನ ಗುರಿಯಾಗಿಸಿಕೊಂಡು ಬದುಕುವುದು ಸಾಮಾನ್ಯವಲ್ಲ. ಅಷ್ಟೆ ತಾಲೀಮು, ತಯಾರಿ ಮಾಡಿ, ನಂತರ ಮೆಡಲ್ ಅನಿಶ್ಚಿತ. ಮೈಕ್ರೋ ಸೆಕೆಂಡ್ ಅಂತರದಲ್ಲಿ ನಾಲ್ಕನೇ ಸ್ಥಾನ ಬಂದುಬಿಟ್ಟರೆ ತಯಾರಿ ಮಾಡಿದ್ದೆಲ್ಲ ನೀರಿನಲ್ಲಿ ಹೋಮ.

ಮತ್ತೊಂದು ಅವಕಾಶಕ್ಕೆ ಮತ್ತೆ ನಾಲ್ಕು ವರ್ಷ ಕಾಯಬೇಕು. ಅಷ್ಟು ಕಾಲ ತಾಲೀಮು ಮುಂದುವರಿಯಬೇಕು, ದೇಹವನ್ನು ಸರಿಯಾಗಿಟ್ಟುಕೊಳ್ಳಬೇಕು. ಮುಂದಿನ ಬಾರಿ ಸ್ಪರ್ಧಿಸುವಾಗ ಇನ್ನಷ್ಟು ಕಡಿಮೆ ವಯಸ್ಸಿನ ಕ್ರೀಡಾಪಟುಗಳು, ಸ್ಪರ್ಧೆ ಇನ್ನಷ್ಟು ಕಠಿಣ.

ಇದೊಂದು ಬದುಕಿನ ಜೊತೆಗಿನ ಜೂಜು. ಇದರಲ್ಲಿ ಸೋತವರೆಷ್ಟೋ, ಗೆದ್ದವರೆಷ್ಟೋ. ಗೆದ್ದವರ ಕಥೆಯೂ ಮುನ್ನಡೆದಂತೆ ಭಿನ್ನವಲ್ಲ. ಮೆಡಲ್ ಬರದಿದ್ದರೆ ಒಂದು ರೀತಿ, ಮೆಡಲ್ ಬಾರದಿದ್ದರೆ ಇನ್ನೊಂದು ರೀತಿ. ಇದರ ಬಗ್ಗೆ ಮಾತನಾಡುವವರು ಕಡಿಮೆ. ಇದು ಕೇವಲ ಲೈಮ್ ಲೈಟ್ – ಮುಖ್ಯವಾಹಿನಿಯಿಂದ ದೂರವಾಗುವ ನಟ-ನಟಿಯರ ಕಥೆಯಂತಲ್ಲ!

ಮೈಕೆಲ್ ಫೆಲ್ಪ್ಸ್ ಪ್ರತಿನಿತ್ಯ ಆರು ಗಂಟೆ ಈಜುತ್ತಿದ್ದನಂತೆ. ನಿತ್ಯ ಕನಿಷ್ಠ ಹದಿನೈದು ಕಿಲೋಮೀಟರ್ ಈಜುವುದನ್ನು ಅವನು ಒಂದೆರಡು ದಿನ ಮಾಡಿದ್ದಲ್ಲ. ಅವನ ಬಾಲ್ಯದಿಂದ – ಸುಮಾರು ಇಪ್ಪತ್ತು ವರ್ಷಗಳ ಕಾಲ, ವರ್ಷದ ಮುನ್ನೂರ ಅರವತ್ತೈದು ದಿನ ಮಾಡಿಕೊಂಡು ಬಂದಿದ್ದ. ತಮಾಷೆಗಲ್ಲ, ಸುಮಾರು 7 ಸಾವಿರ ದಿನ – ನಿರಂತರ. ನಮ್ಮ ಹತ್ತಿರ ದಿನ ತಪ್ಪಿಸದೆ ಒಂದು ವಾರ ವಾಕಿಂಗ್ ಹೋಗಲಿಕ್ಕಾಗುವುದಿಲ್ಲ.

ಮೈಕೆಲ್ ಫೆಲ್ಪ್ಸ್ ಒಬ್ಬನೇ ಎಂದಲ್ಲ – ಇಂತಹ ಕ್ರೀಡೆಗಳಿಗೆ ತಯಾರಾಗುವ ಲಕ್ಷ ಲಕ್ಷ ಜನರ ಬದುಕು ಹೆಚ್ಚು ಕಡಿಮೆ ಇದೇ ಆಗಿರುತ್ತದೆ. ಅವರಿಗೆ ಸ್ಪರ್ಧೆಯ ದಿನ – ಇನ್ನೊಂದು ದಿನ. ಗೆನೆಂದು ಹಿಗ್ಗಿ ಕೂರುವಂತಿಲ್ಲ, ಸೋತೆ ಎಂದು ಕುಗ್ಗುವಂತೆಯೂ ಇಲ್ಲ.

ಬದುಕೇ ತಾಲೀಮು, ತಯಾರಿ. ಬದುಕೇ ಕ್ರೀಡೆಯಾಗಿಬಿಟ್ಟಿರುತ್ತದೆ. ಆದರೆ ಒಂದು ದಿನ ದೇಹಕ್ಕೆ ವಯಸ್ಸಾಗುತ್ತಿದ್ದಂತೆ ಇದೆಲ್ಲ ಮುಗಿಯಬೇಕಲ್ಲ. ಇವರೆಲ್ಲರ ಸಾಮೂಹಿಕ ಸಮಸ್ಯೆ ಎಂದರೆ ಇಷ್ಟು ಕಾಲ ತಯಾರಿ ಮಾಡುವುದೇ ಬದುಕಾಗಿತ್ತು. ಈಗ ಅದುವೆ ಇಲ್ಲ, ಸ್ಪರ್ಧೆಯೇ ಇಲ್ಲ. ಬದುಕಿನ ಉದ್ದೇಶವೇ ಬದಲಾಗಿ ಹೋಗುವುದನ್ನು ಅವರು ಎದುರಿಸಬೇಕಾಗುತ್ತದೆ.



ಮೈಕೆಲ್ ಫೆಲ್ಪ್ಸ್‌ನಷ್ಟು ಪದಕ ಗೆದ್ದವರಿಗೆ ಹಣಕಾಸಿನ ತೊಂದರೆಯಾಗುವುದಿಲ್ಲ. ಆದರೆ ಅವನಿಗೂ ಈ ತಾಲೀಮಿಲ್ಲದ ಖಾಲಿತನ, ನಿರ್ವಾತ ಸಹಿಸಲಿಕ್ಕಾಗಲಿಲ್ಲ. ಸ್ಪರ್ಧೆಯಿಲ್ಲ, ತಯಾರಿಯಿಲ್ಲ, ಚಪ್ಪಾಳೆಗಳಿಲ್ಲ – ಖಿನ್ನತೆ ಹತ್ತಿಕೊಂಡಿತು. ಅಷ್ಟು ಪದಕ ಗೆದ್ದ, ಹಣ ಗಳಿಸಿದವನಿಗೂ ಬದುಕಿನ ಉದ್ದೇಶವೇ ಮಾಯವಾದಾಗ ಗಲಿಬಿಲಿಯಾಯಿತು. ಅವನೇ ಹೇಳುವಂತೆ ಖಿನ್ನತೆ ಉಲ್ಬಣಿಸಿ ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂದು ಹಲವು ಬಾರಿ ಅನ್ನಿಸಿತಂತೆ! ನಂತರ ಮಾನಸಿಕ ಶುಶ್ರೂಷೆ ಇತ್ಯಾದಿ ಪಡೆಯಬೇಕಾಯಿತು.

ಹೇಗಿದೆ ನೋಡಿ. ಫೆಲ್ಪ್ಸ್ ಹಣ ಗಳಿಸಿದ್ದ, ಫೇಮಸ್ ಇತ್ಯಾದಿ. ಹಾಗಾಗಿ ಆರೈಕೆ ಪಡೆದ, ಇಂಥದ್ದೊಂದು ಖಿನ್ನತೆಯಿಂದ ಹೊರಬರಲಿಕ್ಕಾಯಿತು. ಆದರೆ ಇವತ್ತಿಗೂ ಪದಕ ಕಚ್ಚಿ, ರಾಷ್ಟ್ರಗೀತೆಗೆ ಎದೆಯುಬ್ಬಿಸುವ ಕ್ರೀಡಾಪಟುಗಳಲ್ಲಿ ಬಹುತೇಕರು ಮಾನಸಿಕ ಉದ್ವೇಗಕ್ಕೆ, ಖಿನ್ನತೆಗೆ ಒಳಗಾಗುವುದು ಸಾಮಾನ್ಯವಂತೆ. ಅದಕ್ಕೆ ಕಾರಣ ವೃತ್ತಿಪರ ಕ್ರೀಡಾಪಟುಗಳಿಗೆ ಸ್ಪರ್ಧೆಗಿಂತ ತಯಾರಿಯೇ ಬದುಕಾಗಿರುತ್ತದೆ.

ಸ್ಪರ್ಧೆಯ ಸಮೀಕರಣ ತೆಗೆದರೆ ಅದು ಕೂಡ ತಾಲೀಮಿನ ಇನ್ನೊಂದು ಈಜು/ಓಟ. ಆದರೆ ಸ್ಪರ್ಧೆ ಮುಗಿಯುತ್ತಿದ್ದಂತೆ, ಚಪ್ಪಾಳೆ ನಿಲ್ಲುತ್ತಿದ್ದಂತೆ ಬದುಕೇ ನಿಂತುಹೋದಂತೆನಿಸುತ್ತದೆ! ಅಸಾಮಾನ್ಯ ಮೈಕೆಲ್ ಫೆಲ್ಪ್ಸ್‌ನ ಕಥೆ ಕೇವಲ ಅವನದಷ್ಟೇ ಅಲ್ಲ, ಇದು ನಮ್ಮಲ್ಲಿ – ಎಷ್ಟೋ ಜನರ ಸಾಮಾನ್ಯ ಕಥೆಯೂ ಹೌದು. ಹೇಗೆಂದು ಕೇಳುತ್ತೀರಾ? ಹುಟ್ಟಿದ ಮಾರನೇ ಕ್ಷಣದಿಂದಲೇ ಗುರಿಗಳು ಶುರುವಾಗಿಬಿಡುತ್ತವೆ.

ಮೊದಲು ನಡೆಯಲು ಕಲಿಯುವುದು, ಮಾತನಾಡಲು, ನಂತರ ಒಳ್ಳೆಯ ಮಾರ್ಕ್ಸ್ ಪಡೆಯುವುದು, ಒಳ್ಳೆಯ ಕಾಲೇಜಿಗೆ ಹೋಗುವುದು, ಉದ್ಯೋಗ, ಮದುವೆ, ಮಕ್ಕಳು, ಅವರ ಶಿಕ್ಷಣ, ಅವರ ಉದ್ಯೋಗ, ಉಳಿತಾಯ, ಮನೆ, ನಿವೃತ್ತಿ ಹೀಗೆ. ಒಂದಾದ ಮೇಲೆ ಇನ್ನೊಂದು ಗುರಿ – ಎಲ್ಲವೂ ಸ್ಪರ್ಧೆ. ಶಿಕ್ಷಕ ಎರಡು ಮೂರು ದಶಕಗಳ ನಂತರ ಹೆಡ್ ಮಾಸ್ತರ್ ಆಗುತ್ತಾನೆ, ಒಂದೆರಡು ವರ್ಷ – ಕೊನೆಗೊಂದು ದಿನ ನಿವೃತ್ತನಾಗುತ್ತಾನೆ.

ನಿನ್ನೆಯವರೆಗೆ ಏನೋ ಕೇಳಿಕೊಂಡು ಬರುತ್ತಿದ್ದ ವಿದ್ಯಾರ್ಥಿಗಳು, ಶಿಕ್ಷಕರು, ಹಳೆಯ ವಿದ್ಯಾರ್ಥಿಗಳು, ಬೆಂಚ್ ರಿಪೇರಿಯವನು – ಎಲ್ಲರೂ ಏನೋ ಒಂದನ್ನು ಕೇಳಿಕೊಂಡು ಬರುವುದು ನಿಂತುಬಿಡುತ್ತದೆ. ಅದರಲ್ಲೂ ಕೆಲವೊಂದು ಉನ್ನತ ಹುದ್ದೆ – ಸಿಇಒ, ಐಎಎಸ್, ಐಪಿಎಸ್ ಹುದ್ದೆಯಲ್ಲಿದ್ದು ನಿವೃತ್ತಿ ಸೃಷ್ಟಿಸುವ ನಿರ್ವಾತ ಇನ್ನಷ್ಟು ದೊಡ್ಡದು.

ಸೋತ ರಾಜಕಾರಣಿ ಖಿನ್ನನಾಗಿಬಿಡುವುದು ಸೋಲಿನಿಂದಲ್ಲ, ಸೋಲು ಅವನಿಂದ ದೂರವಾಗುವ ಅವನ ಐಡೆಂಟಿಟಿಯಿಂದ – ಗುರುತಿನಿಂದ. ತಾಯಿ ತನ್ನ ಮಕ್ಕಳು ಕಾಲೇಜಿಗೆಂದು ಪರ ಊರಿಗೆ ಹೋದ ನಂತರ ಖಾಲಿ ಮನೆಯಲ್ಲಿ ಅನುಭವಿಸುವ ನಿರ್ವಾತವೂ ಇದುವೇ.

ಸೈನಿಕ ತನ್ನ ಸಮವಸ ತೆಗೆದಿಟ್ಟಾಗ, ಕ್ರಿಕೆಟರ್‌ಗೆ ಮೈದಾನದ ಶಿಳ್ಳೆ ಕೇಳುವುದು ನಿಂತಾಗ. ಅಷ್ಟೇ ಏಕೆ, ದಶಕಗಳ ಕಾಲ ಅದೇ ಮರದ ಕುರ್ಚಿ, ತುಕ್ಕಾದ ಕನ್ನಡಿಯಿಟ್ಟು ಊರಿನವರ ಕೂದಲನ್ನು ಕತ್ತರಿಸುತ್ತಿದ್ದ ಹಳ್ಳಿಯ ಕ್ಷೌರಿಕ ಕೂಡ ಒಂದು ದಿನ ಮುದುಕನಾಗಿ ತನ್ನ ಮನೆಯ ಮುಂಗಟ್ಟಿನಲ್ಲಿ ಕೂತು ಆಚೀಚೆ ಹೋಗಿಬರುವವರನ್ನು ಅದೇ ಖಾಲಿತನದಲ್ಲಿ ನೋಡುತ್ತಾನೆ.

ಆಧುನಿಕ ಜೀವನ ಮಜವಾಗಿದೆ ನೋಡಿ. ಸಮಾಜಕ್ಕೆ ನಮ್ಮಿಂದೇನು ಉಪಯೋಗ ಎನ್ನುವ ಆಧಾರದ ಮೇಲೆ ನಮ್ಮ ಗುರುತು ನಿರ್ಮಾಣವಾಗಿರುತ್ತದೆ. ಏನು ಉದ್ಯೋಗ? ನೀನೇನು ಮಾಡುತ್ತೀಯಾ? ಇದು ಪ್ರತಿಯೊಬ್ಬರೂ ಎದುರಿಸುವ ಮೊದಲ ಅಸ್ತಿತ್ವದ ಪ್ರಶ್ನೆ. ಹಾಗಾಗಿಯೇ ವ್ಯಕ್ತಿ ಸಮಾಜದಲ್ಲಿನ, ಕುಟುಂಬದಲ್ಲಿನ ಪಾತ್ರವೇ ಆಗಿಬಿಡುತ್ತಾನೆ!

ವೈದ್ಯ ಆಸ್ಪತ್ರೆಯಾಚೆಯೂ ವೈದ್ಯನಾಗಿಬಿಡುತ್ತಾನೆ. ವ್ಯಾಪಾರಿ ಲಾಭ ನಷ್ಟವಾಗಿ ಬಿಡುತ್ತಾನೆ. ತಂದೆ ಕರ್ತವ್ಯವೇ ಆಗಿ ಬಿಡುತ್ತಾನೆ. ಕೆಲವೊಮ್ಮೆ ನಮ್ಮ ಹವ್ಯಾಸಗಳೂ ನಮ್ಮ ಗುರುತುಗಳಾಗಿ ಬಿಡುತ್ತವೆ. ನಮ್ಮೂರಲ್ಲಿ ಒಬ್ಬ ಗೃಹಿಣಿ ಅತ್ಯುತ್ತಮ ಸಾಂಬಾರು (ಹುಳಿ) ಮಾಡುತ್ತಾರೆ.

ಯಾರದೇ ಮನೆಯಲ್ಲಿ ಯಾವುದೇ ಕಾರ್ಯಕ್ರಮವಿರಲಿ, ಅವರ ಸಾಂಬಾರು ಜನಪ್ರಿಯ. ಎಷ್ಟೆಂದರೆ ಪೆಂಡಾಲು ಹೊಕ್ಕುತ್ತಿದ್ದಂತೆ ಇವತ್ತು ಸಾಂಬಾರು ಮಾಡಿದ್ದು ಅವರೇ ಎಂದು ಜನರಿಗೆ ಘಮದಲ್ಲಿಯೇ ತಿಳಿದು ಬಿಡುತ್ತದೆ! ಈಗ ಹೇಗಾಗಿದೆಯೆಂದರೆ ಅವರು ಮತ್ತು ಅವರು ಮಾಡುವ ಸಾಂಬಾರನ್ನು ಪ್ರತ್ಯೇಕಿಸಲಿಕ್ಕಾಗುವುದೇ ಇಲ್ಲ. ಸಾಂಬಾರೇ ಅವರ ಗುರುತಾಗಿಹೋಗಿದೆ. ಅವರನ್ನು ಸಾಂಬಾರ್ ಸಾವಿತ್ರಕ್ಕ ಎಂದೇ ಕರೆಯುವುದು!

ನಾನೀಗ ಆರು ವರ್ಷದಿಂದ ಪ್ರತೀ ವಾರ ಅಂಕಣ ಬರೆಯುತ್ತಿದ್ದೇನಲ್ಲ. ಇದು ಕೂಡ. ಹೆಚ್ಚಿನ ಕಡೆ, ಸಂದರ್ಭದಲ್ಲಿ ನನ್ನ ಗುರುತಾಗಿ ಹೋಗಿದೆ! ಈ ಗುರುತಿನ ಆರೋಪದಿಂದ ತಪ್ಪಿಸಿಕೊಳ್ಳಲಿಕ್ಕಾಗುವುದಿಲ್ಲ! ತಮಾಷೆಗೆ ಹೇಳುತ್ತಿಲ್ಲ, ನೀವು ಸಮಾಜಕ್ಕೆ ಏನೇ ಒಳ್ಳೆಯದು ಮಾಡಿ, ಆ ಪ್ರಯೋಜನವನ್ನು ಸಮಾಜ ಅಷ್ಟು ಸಂಭ್ರಮಿಸುತ್ತದೆ. ಎಷ್ಟೆಂದರೆ ಅದಕ್ಕಿಂತ ಮೊದಲು ಇದ್ದ ನಮ್ಮ ಅಸ್ತಿತ್ವವೇ ಮಸುಕೆನಿಸಿ ಬಿಡುತ್ತದೆ, ಬಹುತೇಕರಿಗೆ ಮರೆತು ಹೋಗಿ ಬಿಡುತ್ತದೆ. ಕ್ರಮೇಣ ಸಮಾಜ ಆರೋಪಿಸುವ ಗುರುತುಗಳೇ ನಮ್ಮ ನಡವಳಿಕೆ, ಹಾವಭಾವ ಎಲ್ಲವನ್ನೂ ನಿರ್ದೇಶಿಸಲು ಶುರುಮಾಡಿ ಬಿಡುತ್ತವೆ. ಹಾಗಾಗಿ ಆ ಗುರುತೇ ನಮ್ಮ ಅಸ್ತಿತ್ವವೆನಿಸುವುದು! ಆದರೆ ಯಾವುದೇ ಗುರುತಿನದೊಂದು ಸಮಸ್ಯೆಯಿದೆ.

ಏನೆಂದರೆ ಯಾವುದೇ ಗುರುತು ತಾತ್ಕಾಲಿಕ. ಇದನ್ನು ವೈರಾಗ್ಯವೆಂದು ಭಾವಿಸಬೇಡಿ. ಇರೋದೇ ಹಾಗೆ. ಜೀವನವೇ ಹಾಗೆ. ನಾವು ಒಂದೊಂದೇ ಗುರುತನ್ನು ಚೀಲಕ್ಕೆ ಹಾಕಿಕೊಳ್ಳುತ್ತಾ ಹೋಗುತ್ತೇವೆ – ಕಾಲ ಒಂದೊಂದೇ ಗುರುತನ್ನು ಸದ್ದಿಲ್ಲದೆ ನಮ್ಮಿಂದ ಹಿಂಪಡೆಯುತ್ತ ಹೋಗುತ್ತದೆ.

ಪ್ರತೀ ಗುರುತಿನ ಹಣೆಪಟ್ಟಿ ಕಳಚಿ ಬಿದ್ದಾಗ – ನಾವು ನಮ್ಮನ್ನು ಏನೆಂದು ನಂಬಿದ್ದೇವೋ ಅದುವೇ ನಮ್ಮೆದುರಿಗಿಂದ ಮಾಯವಾದಾಗ. ಅದು ನಮ್ಮ ಅಸ್ತಿತ್ವದ ಪ್ರಶ್ನೆ. ನಾವು ದೈಹಿಕ ಮತ್ತು ಮಾನಸಿಕ ಅಸ್ತಿತ್ವವನ್ನು ಒಂದೇ ರೀತಿಯಲ್ಲಿ ಸ್ವೀಕರಿಸುತ್ತೇವೆ!

ಬದುಕಲ್ಲಿ ಎಲ್ಲರೂ ಪ್ರದರ್ಶನ ಕೊಡಬೇಕು. ತಾಲೀಮು ಮಾಡಬೇಕು. ಸ್ಪರ್ಧೆಗಿಳಿಯಲೇ ಬೇಕು. ಆದರೆ ತಯಾರಿ, ಸ್ಪರ್ಧೆ, ಪ್ರದರ್ಶನ ಇವೇ ಅಸ್ತಿತ್ವವೆನ್ನುವ ಭ್ರಮೆಯಲ್ಲಿ ಬಿದ್ದರೆ ಪಡ್ಚ. ಮೆಡಲ, ಚಪ್ಪಾಳೆ, ಸ್ಪರ್ಧೆ ನಿಂತಾಗ, ರಿಟೈರ್ಡ್ ಆದಾಗ, ಅಂಗಡಿ ಮುಚ್ಚಿದಾಗ, ಆಫೀಸಿನ ಕೆಲಸ ಮುಗಿಸಿ ಮನೆಗೆ ಬಂದಾಗ, ಯೂಟ್ಯೂಬ್ – ರೀಲ್ ವೀವ್ ಕಡಿಮೆ ಯಾದಾಗ – ಒಂದೊಂದೇ ಗುರುತುಗಳು ಕಳಚಿಕೊಳ್ಳುವುದು ಸ್ವಾಭಾವಿಕ ಸಹಜ.

ಬದುಕಿನ ಗುರಿಯತ್ತ ಸಾಗುವಾಗಲೇ ಇದರ ಅರಿವಿದ್ದರೆ ಒಳ್ಳೆಯದು. ಜಗತ್ತು ಪ್ರಯೋಜನ ನಿಲ್ಲುತ್ತಿದ್ದಂತೆ ನಮ್ಮ ಗುರುತನ್ನು ಸಂಭ್ರಮಿಸುವುದನ್ನು ಕೂಡ ನಿಲ್ಲಿಸುತ್ತದೆ. ಆದರೆ ಬದುಕು ಗುರುತು ಕಳೆಯುತ್ತಿದ್ದಂತೆ ಮುಗಿದುಹೋಗುವುದಿಲ್ಲ. ಚಪ್ಪಾಳೆ, ಶಿಳ್ಳೆ, ಗುರುತುಗಳು ಆಚೆ ನಮಗೆ ಎದುರಾಗುವ ವ್ಯಕ್ತಿ ನಾವೇ ಎಂದು ತಿಳಿದಿದ್ದರಾಯ್ತು ! ಅಷ್ಟೆ.

**– ಶಿಶಿರ್** ಹೆಗಡೆ



# ದ ಲಾಟರಿ

ಜೂನ್ 27ರ ಆ ಬೆಳಗಿನ ವಾತಾವರಣವು ಸ್ವಚ್ಛ ಹಾಗೂ ಬಿಸಿಲಿನಿಂದ ಕೂಡಿದ್ದು, ತುಂಬು ಬೇಸಿಗೆಯ ಹಿತವಾದ ಉಲ್ಲಾಸವನ್ನು ಹೊಂದಿತ್ತು. ಹೂವುಗಳು ಸಮೃದ್ಧವಾಗಿ ಅರಳಿದ್ದವು. ಹುಲ್ಲು ದಟ್ಟವಾದ ಹಸಿರಿನಿಂದ ಕಂಗೊಳಿಸುತ್ತಿತ್ತು. ಸುಮಾರು ಹತ್ತು ಗಂಟೆಯ ಹೊತ್ತಿಗೆ ಹಳ್ಳಿಯ ಜನರು ಅಂಚೆ ಕಚೇರಿ ಮತ್ತು ಬ್ಯಾಂಕಿನ ನಡುವೆ ಇದ್ದ ಚೌಕದಲ್ಲಿ ಜಮಾಯಿಸಲು ಪ್ರಾರಂಭಿಸಿದರು. ಕೆಲವು ಪಟ್ಟಣಗಳಲ್ಲಿ ಜನಸಂಖ್ಯೆ ಎಷ್ಟಿತ್ತೆಂದರೆ, ಲಾಟರಿ ಪ್ರಕ್ರಿಯೆಯು ಎರಡು ದಿನಗಳ ಕಾಲ ನಡೆಯುತ್ತಿತ್ತು ಮತ್ತು ಅದನ್ನು ಜೂನ್ 26ರಂದೇ ಆರಂಭಿಸಬೇಕಾಗುತ್ತಿತ್ತು. ಆದರೆ ಸುಮಾರು ಮುನ್ನೂರು ಜನರಿರುವ ಈ ಹಳ್ಳಿಯಲ್ಲಿ, ಇಡೀ ಪ್ರಕ್ರಿಯೆಯು ಎರಡು ಗಂಟೆಗಳಿಗಿಂತ ಕಡಿಮೆ ಅವಧಿಯಲ್ಲಿ ಮುಗಿದುಹೋಗುತ್ತಿತ್ತು. ಇದರಿಂದಾಗಿ, ಬೆಳಿಗ್ಗೆ ಹತ್ತು ಗಂಟೆಗೆ ಆರಂಭಿಸಿದರೂ ಗ್ರಾಮಸ್ಥರು ಮಧ್ಯಾಹ್ನದ ಊಟದ ವೇಳೆಗೆ ಮನೆಗೆ ಮರಳಲು ಸಾಧ್ಯವಾಗುತ್ತಿತ್ತು.

ಸಹಜವಾಗಿಯೇ ಮೊದಲು ಮಕ್ಕಳು ಗುಂಪುಗೂಡಿದರು. ಶಾಲೆಗಳು ಇತ್ತೀಚೆಗಷ್ಟೇ ಬೇಸಿಗೆ ರಜೆಗಾಗಿ ಮುಚ್ಚಿದ್ದವು, ಹಾಗಾಗಿ ಆ ಬಿಡುಗಡೆಯ ಭಾವನೆ ಅವರಲ್ಲಿ ಇನ್ನೂ ಪೂರ್ಣವಾಗಿ ಮನೆಮಾಡಿರಲಿಲ್ಲ; ಅವರು ಸ್ವಲ್ಪ ಸಮಯ ಸುಮ್ಮನೆ ಜೊತೆಗೂಡಿ ನಿಂತಿದ್ದರು. ನಂತರ ಅವರು ಗದ್ದಲದ ಆಟಗಳಿಗೆ ಇಳಿದರು. ಅವರ ಮಾತುಗಳಿನ್ನೂ ತರಗತಿ, ಶಿಕ್ಷಕರು, ಪುಸ್ತಕಗಳು ಮತ್ತು ಶಾಲೆಯಲ್ಲಿ ಕೊಡಲಾದ ಶಿಕ್ಷೆಗಳ ಬಗ್ಗೆಯೇ ಇದ್ದವು. ಬಾಬಿ ಮಾರ್ಟಿನ್ ಈಗಾಗಲೇ ತನ್ನ ಜೇಬುಗಳನ್ನು ಕಲ್ಲುಗಳಿಂದ ತುಂಬಿಸಿಕೊಂಡಿದ್ದ, ಉಳಿದ ಹುಡುಗರು ಶೀಘ್ರದಲ್ಲೇ ಅವನನ್ನು ಅನುಸರಿಸಿದರು ಅವರು ಅತ್ಯಂತ ನಯವಾದ ಮತ್ತು ದುಂಡಗಿನ ಕಲ್ಲುಗಳನ್ನು ಆರಿಸಿಕೊಂಡರು. ಬಾಬಿ, ಹ್ಯಾರಿ ಜೋನ್ಸ್ ಮತ್ತು ಡಿಕ್ಕಿ ಡೆಲಾಕ್ರಾಯ್ (ಗ್ರಾಮಸ್ಥರು ಇದನ್ನು ಡೆಲ್ಲಾಕ್ರಾಯ್ ಎಂದು ಉಚ್ಚರಿಸುತ್ತಿದ್ದರು) ಕೊನೆಗೆ ಚೌಕದ ಒಂದು ಮೂಲೆಯಲ್ಲಿ ಕಲ್ಲುಗಳ ದೊಡ್ಡ ರಾಶಿಯನ್ನೇ ಮಾಡಿ, ಬೇರೆ ಹುಡುಗರು ಅದನ್ನು ಕಿತ್ತುಕೊಳ್ಳದಂತೆ ಕಾಯುತ್ತಾ ನಿಂತರು. ಹುಡುಗಿಯರು ಒಂದು ಬದಿಯಲ್ಲಿ ನಿಂತು ತಮ್ಮ ತಮ್ಮಲ್ಲೇ ಮಾತನಾಡಿಕೊಳ್ಳುತ್ತಾ, ಹುಡುಗರ ಕಡೆಗೆ ಕಣ್ಣು ಹಾಯಿಸುತ್ತಿದ್ದರು. ಇನ್ನು ಅತಿ ಸಣ್ಣ ಮಕ್ಕಳು ಧೂಳಿನಲ್ಲಿ ಹೊರಳಾಡುತ್ತಿದ್ದರು ಅಥವಾ ತಮ್ಮ ಅಣ್ಣ-ಅಕ್ಕಂದಿರ ಕೈ ಹಿಡಿದು ನಿಂತಿದ್ದರು.

ಶೀಘ್ರದಲ್ಲೇ ಪುರುಷರು ಸೇರತೊಡಗಿದರು. ಅವರು ತಮ್ಮ ಮಕ್ಕಳನ್ನು ಗಮನಿಸುತ್ತಾ ಬಿತ್ತನೆ, ಮಳೆ, ಟ್ರಾಕ್ಟರುಗಳು ಮತ್ತು ತೆರಿಗೆಗಳ ಬಗ್ಗೆ ಮಾತನಾಡುತ್ತಿದ್ದರು. ಅವರು ಆ ಕಲ್ಲುಗಳ ರಾಶಿಯಿಂದ ಸ್ವಲ್ಪ ದೂರದಲ್ಲಿ ನಿಂತಿದ್ದರು; ಅವರ ಹಾಸ್ಯವು ಮೆಲುದನಿಯಲ್ಲಿರುತ್ತಿತ್ತು ಮತ್ತು ಅವರು ಜೋರಾಗಿ ನಗುವ ಬದಲು ಮಂದಹಾಸ ಬೀರುತ್ತಿದ್ದರು. ಮಸುಕಾದ ಮನೆಗೆಲಸದ ಉಡುಪು ಮತ್ತು ಸ್ವೆಟರ್‌ಗಳನ್ನು ಧರಿಸಿದ್ದ ಮಹಿಳೆಯರು ತಮ್ಮ ಪತಿಯಂದಿರ ಬೆನ್ನಲ್ಲೇ ಬಂದರು. ಅವರು ಪರಸ್ಪರ ಹರಟುತ್ತಾ ತಮ್ಮ ಪತಿಯಂದಿರನ್ನು ಸೇರಿಕೊಂಡರು. ಶೀಘ್ರದಲ್ಲೇ ಮಹಿಳೆಯರು ಮಕ್ಕಳನ್ನು ಕೂಗಲಾರಂಭಿಸಿದರು. ನಾಲ್ಕೈದು ಬಾರಿ ಕರೆದ ನಂತರವಷ್ಟೇ ಮಕ್ಕಳು ಇಷ್ಟವಿಲ್ಲದಿದ್ದರೂ ಅಮ್ಮಂದಿರ ಬಳಿ ಬಂದರು. ಬಾಬಿ ಮಾರ್ಟಿನ್ ತನ್ನ ತಾಯಿಯ ಕೈಗೆ ಸಿಗದಂತೆ ನುಣುಚಿಕೊಂಡು ನಗುತ್ತಾ ಮತ್ತೆ ಕಲ್ಲುಗಳ ರಾಶಿಯ ಕಡೆಗೆ ಓಡಿದ. ಅವನ ತಂದೆ ಗದರಿಸಿದಾಗ, ಬಾಬಿ ತಕ್ಷಣ ಬಂದು ತನ್ನ ತಂದೆ ಮತ್ತು ಅಣ್ಣನ ನಡುವೆ ನಿಂತುಕೊಂಡನು.



ಚೌಕದ ನೃತ್ಯಗಳು, ಹದಿಹರೆಯದವರ ಕ್ಲಬ್ ಮತ್ತು ಹ್ಯಾಲೋವೀನ್ ಕಾರ್ಯಕ್ರಮಗಳಂತೆ ಈ ಲಾಟರಿಯನ್ನೂ ಸಹ ಮಿಸ್ಟರ್ ಸಮ್ಮರ್ಸ್ ಅವರೇ ಆಯೋಜಿಸುತ್ತಿದ್ದರು. ಅವರಿಗೆ ಇಂತಹ ಸಾಂಸ್ಕೃತಿಕ ಚಟುವಟಿಕೆಗಳಿಗೆ ಕೊಡುವಷ್ಟು ಸಮಯ ಮತ್ತು ಆಸಕ್ತಿ ಇರುತ್ತಿತ್ತು. ಅವರು ದುಂಡು ಮುಖದ, ಪ್ರಸನ್ನ ವ್ಯಕ್ತಿಯಾಗಿದ್ದರು ಮತ್ತು ಕಲ್ಲಿದ್ದಲು ವ್ಯವಹಾರವನ್ನು ನಡೆಸುತ್ತಿದ್ದರು. ಅವರಿಗೆ ಮಕ್ಕಳಿಲ್ಲದ ಕಾರಣ ಮತ್ತು ಅವರ ಹೆಂಡತಿ ಸದಾ ಜಗಳಗಂಟಿಯಾಗಿದ್ದರಿಂದ ಹಳ್ಳಿಗರಿಗೆ ಅವರ ಬಗ್ಗೆ ಮರುಕವಿತ್ತು. ಅವರು ಆ ಕಪ್ಪು ಮರದ ಪೆಟ್ಟಿಗೆಯನ್ನು ಹಿಡಿದು ಬಂದಾಗ ಗ್ರಾಮಸ್ಥರಲ್ಲಿ ಪಿಸುಮಾತು ಶುರುವಾಯಿತು. ಅವರು ಕೈಬೀಸುತ್ತಾ, ಇಂದು ಸ್ವಲ್ಪ ತಡವಾಯಿತು ಜನರೇ, ಎಂದರು. ಪೋಸ್ಟ್‌ಮಾಸ್ಟರ್ ಮಿಸ್ಟರ್ ಗ್ರೇವ್ಸ್ ಅವರು ಮೂರು ಕಾಲುಗಳ ಸ್ಟೂಲ್ ಹಿಡಿದು ಅವರನ್ನು ಅನುಸರಿಸಿದರು. ಸ್ಟೂಲನ್ನು ಚೌಕದ ಮಧ್ಯದಲ್ಲಿ ಇರಿಸಲಾಯಿತು ಮತ್ತು ಮಿಸ್ಟರ್ ಸಮ್ಮರ್ಸ್ ಅದರ ಮೇಲೆ ಕಪ್ಪು ಪೆಟ್ಟಿಗೆಯನ್ನು ಇಟ್ಟರು. ಗ್ರಾಮಸ್ಥರು ಆ ಪೆಟ್ಟಿಗೆಯಿಂದ ಸ್ವಲ್ಪ ಅಂತರ ಕಾಯ್ದುಕೊಂಡಿದ್ದರು. ಮಿಸ್ಟರ್ ಸಮ್ಮರ್ಸ್ ಯಾರಾದರೂ ಸ್ವಲ್ಪ ಸಹಾಯ ಮಾಡುವಿರಾ? ಎಂದು ಕೇಳಿದಾಗ, ಮೊದಲು ಎಲ್ಲರೂ ಹಿಂಜರಿದರು. ನಂತರ ಮಿಸ್ಟರ್ ಮಾರ್ಟಿನ್ ಮತ್ತು ಅವರ ಹಿರಿಯ ಮಗ ಬ್ಯಾಕ್ಸ್ಟರ್ ಮುಂದೆ ಬಂದು ಪೆಟ್ಟಿಗೆಯನ್ನು ಗಟ್ಟಿಯಾಗಿ ಹಿಡಿದುಕೊಂಡರು. ಮಿಸ್ಟರ್ ಸಮ್ಮರ್ಸ್ ಅದರೊಳಗಿನ ಕಾಗದಗಳನ್ನು ಕೈಯಾಡಿಸಿ ಬೆರೆಸತೊಡಗಿದರು.

ಲಾಟರಿಗೆ ಬಳಸುತ್ತಿದ್ದ ಮೂಲ ಉಪಕರಣಗಳು ಅದೆಂದೋ ಕಳೆದುಹೋಗಿದ್ದವು. ಈಗ ಸ್ಟೂಲ್ ಮೇಲೆ ಇಟ್ಟಿದ್ದ ಈ ಕಪ್ಪು ಪೆಟ್ಟಿಗೆಯು, ಊರಿನ ಅತಿ ಹಿರಿಯ ವ್ಯಕ್ತಿಯಾದ ಓಲ್ಡ್ ಮ್ಯಾನ್ ವಾರ್ನರ್ ಹುಟ್ಟುವುದಕ್ಕಿಂತ ಮುಂಚಿನಿಂದಲೂ ಬಳಕೆಯಲ್ಲಿತ್ತು. ಹೊಸ ಪೆಟ್ಟಿಗೆಯನ್ನು ತಯಾರಿಸುವ ಬಗ್ಗೆ ಮಿಸ್ಟರ್ ಸಮ್ಮರ್ಸ್ ಹಳ್ಳಿಗರೊಂದಿಗೆ ಆಗಾಗ ಮಾತನಾಡುತ್ತಿದ್ದರಾದರೂ, ಈ ಕಪ್ಪು ಪೆಟ್ಟಿಗೆಯ ರೂಪದಲ್ಲಿರುವ ಸಂಪ್ರದಾಯವನ್ನು ಕಿಂಚಿತ್ತೂ ಬದಲಿಸಲು ಯಾರಿಗೂ ಮನಸ್ಸಿರಲಿಲ್ಲ. ಹಳ್ಳಿಯಲ್ಲಿ ಮೊದಲು ಬಂದು ನೆಲೆಸಿದವರು ತಯಾರಿಸಿದ್ದ ಮೂಲ ಪೆಟ್ಟಿಗೆಯ ಕೆಲವು ತುಂಡುಗಳನ್ನು ಬಳಸಿಯೇ ಈ ಪೆಟ್ಟಿಗೆಯನ್ನು ಮಾಡಲಾಗಿದೆ ಎಂಬ ಕಥೆಯೂ ಇತ್ತು. ಪ್ರತಿ ವರ್ಷ ಲಾಟರಿ ಮುಗಿದ ಮೇಲೆ ಮಿಸ್ಟರ್ ಸಮ್ಮರ್ಸ್ ಹೊಸ ಪೆಟ್ಟಿಗೆಯ ಬಗ್ಗೆ ಪ್ರಸ್ತಾಪಿಸುತ್ತಿದ್ದರು, ಆದರೆ ಪ್ರತಿ ಬಾರಿಯೂ ಆ ವಿಷಯವು ಏನೂ ಮಾಡದೆಯೇ ಹಾಗೆಯೇ ಮಾಸಿ ಹೋಗುತ್ತಿತ್ತು. ಆ ಕಪ್ಪು ಪೆಟ್ಟಿಗೆಯು ವರ್ಷದಿಂದ ವರ್ಷಕ್ಕೆ ಹಳೆಯದಾಗಿ ಕಾಣುತ್ತಿತ್ತು; ಈಗಂತೂ ಅದು ಸಂಪೂರ್ಣವಾಗಿ ಕಪ್ಪಾಗಿರದೆ, ಒಂದು ಬದಿಯಲ್ಲಿ ಮೂಲ ಮರದ ಬಣ್ಣ ಕಾಣುವಂತೆ ಸೀಳಿಕೊಂಡಿತ್ತು ಮತ್ತು ಹಲವು ಕಡೆ ಬಣ್ಣ ಮಾಸಿ ಕಲೆಗಳಿಂದ ಕೂಡಿತ್ತು.

ಮಿಸ್ಟರ್ ಸಮ್ಮರ್ಸ್ ಪೆಟ್ಟಿಗೆಯೊಳಗಿನ ಕಾಗದಗಳನ್ನು ಕೈಯಾಡಿಸಿ ಸರಿಯಾಗಿ ಬೆರೆಸುವವರೆಗೆ ಮಿಸ್ಟರ್ ಮಾರ್ಟಿನ್ ಮತ್ತು ಅವರ ಹಿರಿಯ ಮಗ ಬ್ಯಾಕ್ಸ್ಟರ್ ಅದನ್ನು ಸ್ಟೂಲ್ ಮೇಲೆ ಭದ್ರವಾಗಿ ಹಿಡಿದುಕೊಂಡಿದ್ದರು. ಲಾಟರಿಯ ಬಹಳಷ್ಟು ಹಳೆಯ ರೀತಿ-ರಿವಾಜುಗಳು ಮರೆತುಹೋಗಿದ್ದವು ಅಥವಾ ಕೈಬಿಡಲಾಗಿದ್ದವು. ಈ ಹಿಂದೆ ತಲೆಮಾರುಗಳಿಂದ ಬಳಸುತ್ತಿದ್ದ ಮರದ ಚಿಟ್ಟುಗಳ ಬದಲಿಗೆ ಕಾಗದದ ಚೂರುಗಳನ್ನು ಬಳಸುವಂತೆ ಮಾಡುವಲ್ಲಿ ಮಿಸ್ಟರ್ ಸಮ್ಮರ್ಸ್ ಯಶಸ್ವಿಯಾಗಿದ್ದರು. ಹಳ್ಳಿ ಚಿಕ್ಕದಿದ್ದಾಗ ಮರದ ಚಿಟ್ಟುಗಳು ಸರಿಯಾಗಿದ್ದವು, ಆದರೆ ಈಗ ಜನಸಂಖ್ಯೆ ಮುನ್ನೂರು ದಾಟಿದ್ದು ಇನ್ನು ಬೆಳೆಯುತ್ತಿರುವುದರಿಂದ, ಕಪ್ಪು ಪೆಟ್ಟಿಗೆಯೊಳಗೆ ಸುಲಭವಾಗಿ ಹಿಡಿಸುವಂತಹ ವಸ್ತುವನ್ನು ಬಳಸುವುದು ಅವಶ್ಯಕ ಎಂದು ಅವರು ವಾದಿಸಿದ್ದರು. ಲಾಟರಿಯ ಹಿಂದಿನ ರಾತ್ರಿ ಮಿಸ್ಟರ್ ಸಮ್ಮರ್ಸ್ ಮತ್ತು ಮಿಸ್ಟರ್ ಗ್ರೇವ್ ಕಾಗದದ ಚೂರುಗಳನ್ನು ಸಿದ್ಧಪಡಿಸಿ ಪೆಟ್ಟಿಗೆಯಲ್ಲಿ ಹಾಕಿ, ನಂತರ ಅದನ್ನು ಮಿಸ್ಟರ್ ಸಮ್ಮರ್ಸ್ ಅವರ ಕಲ್ಲಿದ್ದಲು ಕಂಪನಿಯ ಸೇಫ್‌ನಲ್ಲಿ ಇಟ್ಟು ಬೀಗ ಹಾಕುತ್ತಿದ್ದರು. ಮಾರನೇ ದಿನ ಬೆಳಿಗ್ಗೆ ಚೌಕಕ್ಕೆ ತರುವವರೆಗೆ ಅದು ಅಲ್ಲೇ ಇರುತ್ತಿತ್ತು. ವರ್ಷದ ಉಳಿದ ದಿನಗಳಲ್ಲಿ ಆ ಪೆಟ್ಟಿಗೆಯನ್ನು ಬೇರೆ ಬೇರೆ ಕಡೆ ಇಡಲಾಗುತ್ತಿತ್ತು; ಅದು ಒಂದು ವರ್ಷ ಮಿಸ್ಟರ್ ಗ್ರೇವ್ಸ್ ಅವರ ಕೊಟ್ಟಿಗೆಯಲ್ಲಿದ್ದರೆ, ಇನ್ನೊಂದು ವರ್ಷ ಪೋಸ್ಟ್ ಆಫೀಸ್‌ನಲ್ಲಿ ಅಥವಾ ಮಾರ್ಟಿನ್ ದಿನಸಿ ಅಂಗಡಿಯ ಶೆಲ್ಫ್‌ನಲ್ಲಿ ಇರುತ್ತಿತ್ತು.

ಮಿಸ್ಟರ್ ಸಮ್ಮರ್ಸ್ ಲಾಟರಿ ಆರಂಭವಾಯಿತು ಎಂದು ಘೋಷಿಸುವ ಮೊದಲು ಬಹಳಷ್ಟು ಸಿದ್ಧತೆಗಳಿದ್ದವು. ಪ್ರತಿಯೊಂದು ಕುಟುಂಬದ ಯಜಮಾನರು, ಮನೆಯ ಮುಖ್ಯಸ್ಥರು ಮತ್ತು ಅವರ ಕುಟುಂಬದ ಸದಸ್ಯರ ಪಟ್ಟಿಗಳನ್ನು ಸಿದ್ಧಪಡಿಸಬೇಕಿತ್ತು. ಪೋಸ್ಟ್ ಮಾಸ್ಟರ್‌ರವರಿಂದ ಮಿಸ್ಟರ್ ಸಮ್ಮರ್ಸ್ ಅವರನ್ನು ಲಾಟರಿಯ ಅಧಿಕೃತ ನಿರ್ವಾಹಕನಾಗಿ ಪ್ರಮಾಣ ವಚನ ಸ್ವೀಕರಿಸುವಂತೆ ಮಾಡಲಾಯಿತು. ಹಿಂದೆಲ್ಲಾ ಲಾಟರಿ ಅಧಿಕಾರಿ ಒಂದು ರೀತಿಯ ಮಂತ್ರವನ್ನು ಅಥವಾ ರಾಗವಿಲ್ಲದ ಹಾಡನ್ನು ಪಠಿಸುತ್ತಿದ್ದರು ಎಂದು ಕೆಲವರು ನೆನಪಿಸಿಕೊಳ್ಳುತ್ತಿದ್ದರು; ಅದನ್ನು ಮಾಡುವಾಗ ಅಧಿಕಾರಿ ಒಂದು ನಿರ್ದಿಷ್ಟ ಜಾಗದಲ್ಲಿ ನಿಲ್ಲಬೇಕೆಂಬುದು ಕೆಲವರ ನಂಬಿಕೆಯಾದರೆ, ಅವರು ಜನರ ನಡುವೆ ನಡೆದಾಡಬೇಕೆಂಬುದು ಇನ್ನು ಕೆಲವರ ನಂಬಿಕೆಯಾಗಿತ್ತು. ಆದರೆ ಎಷ್ಟೋ ವರ್ಷಗಳ ಹಿಂದೆಯೇ ಈ ಸಂಪ್ರದಾಯ ನಿಂತುಹೋಗಿತ್ತು. ಅಲ್ಲದೆ, ಲಾಟರಿ ಎತ್ತಲು ಬರುವ ಪ್ರತಿಯೊಬ್ಬರಿಗೂ ಅಧಿಕಾರಿ ಒಂದು ರೀತಿಯ ಗೌರವ ಸೂಚಕ ವಂದನೆ ಮಾಡಬೇಕಿತ್ತು, ಆದರೆ ಈಗ ಅಧಿಕಾರಿ ಪ್ರತಿಯೊಬ್ಬರನ್ನೂ ಮಾತನಾಡಿಸುವುದು ಸಾಕು ಎಂಬಷ್ಟಕ್ಕೆ ಅದು ಬದಲಾಗಿತ್ತು. ಬಿಳಿ ಶರ್ಟ್ ಮತ್ತು ನೀಲಿ ಜೀನ್ಸ್ ಧರಿಸಿದ್ದ ಮಿಸ್ಟರ್ ಸಮ್ಮರ್ಸ್, ಒಂದು ಕೈಯನ್ನು ಅಸಡ್ಡೆಯಿಂದ ಕಪ್ಪು ಪೆಟ್ಟಿಗೆಯ ಮೇಲೆ ಇಟ್ಟುಕೊಂಡು ಮಿಸ್ಟರ್ ಗ್ರೇವ್ಸ್ ಮತ್ತು ಮಾರ್ಟಿನ್ ಜೊತೆ ಮಾತನಾಡುತ್ತಾ ಬಹಳ ಪ್ರಮುಖ ವ್ಯಕ್ತಿಯಂತೆ ಕಾಣುತ್ತಿದ್ದರು. ಮಿಸ್ಟರ್ ಸಮ್ಮರ್ಸ್ ಹಳ್ಳಿಗರನ್ನು ಉದ್ದೇಶಿಸಿ ಮಾತನಾಡಲು ಹೋದಾಗಲೇ ಮಿಸೆಸ್ ಹಚಿನ್ಸನ್ ಸ್ವೆಟರ್ ಅನ್ನು ಹೆಗಲ ಮೇಲೆ ಹಾಕಿಕೊಂಡು ಅವಸರದಲ್ಲಿ ಚೌಕಕ್ಕೆ ಬಂದು ಗುಂಪಿನ ಹಿಂಭಾಗದಲ್ಲಿ ನಿಂತುಕೊಂಡಳು. ಇಂದು ಯಾವ ದಿನ ಎನ್ನುವುದನ್ನೇ ಮರೆತುಬಿಟ್ಟಿದ್ದೆ, ಎಂದು ಅವಳು ತನ್ನ ಪಕ್ಕದಲ್ಲಿದ್ದ ಮಿಸೆಸ್ ಡೆಲಕ್ರಾಯ್ ಜೊತೆ ಹೇಳಿದಳು, ಇಬ್ಬರೂ ಮೆಲ್ಲಗೆ ನಕ್ಕರು. ನನ್ನ ಗಂಡ ಹಿತ್ತಲಿನಲ್ಲಿ ಕಟ್ಟಿಗೆ ಜೋಡಿಸುತ್ತಿದ್ದಾರೆ ಎಂದುಕೊಂಡೆ, ಆಮೇಲೆ ಕಿಟಕಿಯಿಂದ ನೋಡಿದಾಗ ಮಕ್ಕಳೂ ಇರಲಿಲ್ಲ, ಆಗ ಇವತ್ತು ಇಪ್ಪತ್ತೇಳನೇ ತಾರೀಖು ಎಂದು ನೆನಪಾಗಿ ಓಡಿಕೊಂಡು ಬಂದೆ, ಎಂದು ಅವಳು ತನ್ನ ಏಪ್ರನ್‌ನಲ್ಲಿ ಕೈ ಒರೆಸಿಕೊಳ್ಳುತ್ತಾ ಹೇಳಿದಳು. ಮಿಸೆಸ್ ಡೆಲಕ್ರಾಯ್, ನೀನು ಸರಿಯಾದ ಸಮಯಕ್ಕೇ ಬಂದೆ, ಅವರಿನ್ನೂ ಅಲ್ಲಿ ಮಾತನಾಡುತ್ತಲೇ ಇದ್ದಾರೆ, ಎಂದಳು.

ಮಿಸೆಸ್ ಹಚಿನ್ಸನ್ ಗುಂಪಿನ ನಡುವೆ ಇಣುಕಿ ನೋಡಿ ತನ್ನ ಗಂಡ ಮತ್ತು ಮಕ್ಕಳು ಮುಂಭಾಗದಲ್ಲಿ ನಿಂತಿರುವುದನ್ನು ಕಂಡಳು. ಅವಳು ಮಿಸೆಸ್ ಡೆಲಕ್ರಾಯ್ ಕೈ ಮುಟ್ಟಿ ಅಲ್ಲಿಂದ ಗುಂಪಿನ ನಡುವೆ ದಾರಿ ಮಾಡಿಕೊಂಡು ಹೋದಳು. ಜನರು ಅವಳಿಗೆ ದಾರಿ ಬಿಟ್ಟು ಕೊಡುತ್ತಾ, ಇಲ್ಲಿ ನೋಡಿ ಹಚಿನ್ಸನ್, ನಿಮ್ಮ ಹೆಂಡತಿ ಬಂದರು, ಎಂದು ತಮಾಷೆ ಮಾಡಿದರು. ಟೆಸ್ಸಿ (ಮಿಸೆಸ್ ಹಚಿನ್ಸನ್) ತನ್ನ ಗಂಡನ ಬಳಿ ತಲುಪಿದಾಗ ಮಿಸ್ಟರ್ ಸಮ್ಮರ್ಸ್ ನಗುಮುಖದಿಂದ, ನೀನಿಲ್ಲದೆಯೇ ಲಾಟರಿ ಆರಂಭಿಸಬೇಕಾಗುತ್ತದೆ ಎಂದುಕೊಂಡಿದ್ದೆ, ಟೆಸ್ಸಿ, ಎಂದರು. ಅದಕ್ಕೆ ಅವಳು ನಗುತ್ತಾ, ಏನು ಜೋ, ಪಾತ್ರೆಗಳನ್ನು ತೊಳೆದು ಮುಗಿಸದೆ ಹಾಗೆಯೇ ಬರಬೇಕೆಂದಿದ್ದೀರಾ? ಎಂದಳು. ಇದನ್ನು ಕೇಳಿ ಹಳ್ಳಿಯ ಜನರಲ್ಲಿ ಮೆಲುದನಿಯ ನಗು ಹರಡಿತ್ತು.

**– ಹರಿ ಪ್ರಸಾದ್** ನಾಡಿಗ್

**ಹಿಜಾಬ್ ನಿರ್ಬಂಧದ ವಿಚಾರವನ್ನು ಕಾಂಗ್ರೆಸ್ ಪಕ್ಷವು 2023ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಪ್ರಮುಖ ರಾಜಕೀಯ ಅಸ್ತ್ರವನ್ನಾಗಿ ಬಳಸಿಕೊಂಡಿತ್ತು. ಅಧಿಕಾರಕ್ಕೆ ಬಂದರೆ ನಿರ್ಬಂಧಾತ್ಮಕ ನಿಯಮಗಳನ್ನು ತೆಗೆದುಹಾಕುವುದಾಗಿ ಸ್ಪಷ್ಟ ಭರವಸೆ ನೀಡಲಾಗಿತ್ತು.**

# ಮೂರು ವರ್ಷಗಳ ಬಳಿಕ ಹಿಜಾಬ್‌ಗೆ ಅವಕಾಶ: ಏನಿದರ ಮರ್ಮ

ರಾಜಕೀಯ ಪಕ್ಷಗಳು ಚುನಾವಣಾ ಸಂದರ್ಭದಲ್ಲಿ ನೀಡುವ ಭರವಸೆಗಳು ಕೇವಲ ಮತ ಸೆಳೆಯುವ ಘೋಷಣೆಗಳಾಗಿರಬಾರದು; ಅವು ಅಧಿಕಾರಕ್ಕೆ ಬಂದ ಬಳಿಕ ಸರ್ಕಾರದ ಆಡಳಿತದ ದಿಕ್ಕು ತೋರಿಸುವ ನಿರ್ಧಾರಗಳಾಗಬೇಕು. ಆದರೆ ಭರವಸೆ ನೀಡಿದ ವಿಷಯಗಳನ್ನು ಸಮಯೋಚಿತವಾಗಿ ಜಾರಿಗೆ ತರದೇ ವಿಳಂಬ ಮಾಡುವುದರಿಂದ, ಜನಪರ ಉದ್ದೇಶದ ನಿರ್ಧಾರಗಳೇ ಕೆಲವೊಮ್ಮೆ ಸಮಾಜದಲ್ಲಿ ಅನಗತ್ಯ ವಿವಾದಗಳಿಗೆ ಕಾರಣವಾಗುತ್ತವೆ. ರಾಜ್ಯ ಸರ್ಕಾರ ಇತ್ತೀಚೆಗೆ ಶಿಕ್ಷಣ ಸಂಸ್ಥೆಗಳಲ್ಲಿ ಜಾರಿಯಲ್ಲಿದ್ದ ಆಂಟಿಹಿಜಾಬ್ ನಿರ್ಬಂಧಟಿಟಿ ಸಂಬಂಧಿತ ಆದೇಶವನ್ನು ಹಿಂಪಡೆಯುವ ಮೂಲಕ ತೆಗೆದುಕೊಂಡಿರುವ ಕ್ರಮವೂ ಇದೇ ಪ್ರಶ್ನೆಯನ್ನು ಮತ್ತೊಮ್ಮೆ ಮುಂದಿಟ್ಟಿದೆ.

ಮುಸ್ಲಿಂ ಸಮುದಾಯದ ಭಾವನೆಗಳನ್ನು ಸ್ಪರ್ಶಿಸುವ ವಿಷಯವಾಗಿದ್ದ ಹಿಜಾಬ್ ನಿರ್ಬಂಧದ ವಿಚಾರವನ್ನು ಕಾಂಗ್ರೆಸ್ ಪಕ್ಷವು 2023ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಪ್ರಮುಖ ರಾಜಕೀಯ ಅಸ್ತ್ರವನ್ನಾಗಿ ಬಳಸಿಕೊಂಡಿತ್ತು. ಅಧಿಕಾರಕ್ಕೆ ಬಂದರೆ ನಿರ್ಬಂಧಾತ್ಮಕ ನಿಯಮಗಳನ್ನು ತೆಗೆದುಹಾಕುವುದಾಗಿ ಸ್ಪಷ್ಟ ಭರವಸೆ ನೀಡಲಾಗಿತ್ತು. ಅಂದಿನ ರಾಜಕೀಯ ವಾತಾವರಣದಲ್ಲಿ ಈ ವಿಷಯ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಚರ್ಚೆಗೆ ಕಾರಣವಾಗಿದ್ದರೂ, ಕಾಂಗ್ರೆಸ್ ತನ್ನ ನಿಲುವನ್ನು ಮುಚ್ಚಿಡದೆ ಸಾರ್ವಜನಿಕರ ಮುಂದೆ ಇಟ್ಟಿತ್ತು. ಜನರು ಬಹುಮತ ನೀಡಿ ಸರ್ಕಾರ ರಚಿಸುವ ಅವಕಾಶ ನೀಡಿದಾಗ, ಆ ಭರವಸೆಯನ್ನು ತಕ್ಷಣವೇ ಜಾರಿಗೆ ತರುವ ಅವಕಾಶವೂ ಸರ್ಕಾರದ ಮುಂದಿತ್ತು.

ಸಾಮಾನ್ಯವಾಗಿ ಹೊಸ ಸರ್ಕಾರಗಳು ಅಧಿಕಾರಕ್ಕೆ ಬಂದ ಆರಂಭಿಕ ದಿನಗಳಲ್ಲಿ ಕೆಲ ಕಠಿಣ ಅಥವಾ ವಿವಾದಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳುತ್ತವೆ. ಏಕೆಂದರೆ ಆ ಸಮಯದಲ್ಲಿ ಜನರಿಂದ ದೊರೆತ ರಾಜಕೀಯ ಬೆಂಬಲ ಹಾಗೂ ಆಡಳಿತದ ಮೇಲಿನ ನಿರೀಕ್ಷೆಗಳು ಗರಿಷ್ಠ ಮಟ್ಟದಲ್ಲಿರುತ್ತವೆ. ವಿರೋಧ ಪಕ್ಷಗಳ ಟೀಕೆಗಳು ಸಹ ಆರಂಭಿಕ ಹಂತದಲ್ಲಿ ಹೆಚ್ಚು ಪರಿಣಾಮ ಬೀರುವುದಿಲ್ಲ. ಆದರೆ ಸಿದ್ದರಾಮಯ್ಯ ಸರ್ಕಾರ ಮೂರು ವರ್ಷಗಳ ಕಾಲ ಈ ವಿಚಾರವನ್ನು ಮುಟ್ಟದೆ ಮೌನ ವಹಿಸಿತು.



ಈಗ ಏಕಾಏಕಿ ಹೊಸ ಆದೇಶ ಹೊರಡಿಸಿರುವುದು ಸರ್ಕಾರದ ರಾಜಕೀಯ ಸಮಯಜ್ಞಾನವನ್ನೇ ಪ್ರಶ್ನಿಸುವಂತಾಗಿದೆ. ಈ ನಿರ್ಧಾರದ ತಕ್ಷಣವೇ ಸಂಘ ಪರಿವಾರ, ಹಿಂದೂಪರ ಸಂಘಟನೆಗಳು ಹಾಗೂ ವಿರೋಧ ಪಕ್ಷಗಳಿಂದ ತೀವ್ರ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತಿರುವುದು ಗಮನಾರ್ಹ.

ಪ್ರತಿಭಟನೆಗಳ ಎಚ್ಚರಿಕೆಗಳು ಕೇಳಿಬರುತ್ತಿದ್ದು, ಈ ವಿಚಾರವನ್ನು ರಾಜಕೀಯವಾಗಿ ಬಳಸಿಕೊಳ್ಳುವ ಪ್ರಯತ್ನಗಳು ಆರಂಭವಾಗಿವೆ. ಸರ್ಕಾರದ ವಿರುದ್ಧ ಜನಾಭಿಪ್ರಾಯ ರೂಪಿಸಲು ಇದು ಪ್ರತಿಪಕ್ಷಗಳಿಗೆ ಹೊಸ ಅಸ್ತ್ರ ಒದಗಿಸಿದಂತಾಗಿದೆ.

ವಿಶೇಷವಾಗಿ ಮೂರು ವರ್ಷಗಳ ಕಾಲ ಮೌನವಾಗಿದ್ದ ಸರ್ಕಾರ ಈಗ ಚುನಾವಣೆಯ ಹೊಸ್ತಿಲಲ್ಲಿ ಈ ಕ್ರಮ ಕೈಗೊಂಡಿರುವುದರಿಂದ, ಆಡಳಿತ ಪಕ್ಷವೇ ವಿರೋಧ ಪಕ್ಷಗಳಿಗೆ ಸುಖಾಸುಮ್ಮನೆ ಪ್ರಬಲ ರಾಜಕೀಯ ಅಸ್ತ್ರವನ್ನು ಕೈಗೆತ್ತಿಕೊಟ್ಟಂತಾಗಿದೆ ಎಂಬ ಅಭಿಪ್ರಾಯಗಳು ರಾಜಕೀಯ ವಲಯದಲ್ಲಿ ಕೇಳಿಬರುತ್ತಿವೆ. ಮೊದಲ ಅವಧಿಯಲ್ಲೇ ಈ ನಿರ್ಧಾರ ಜಾರಿಗೊಂಡಿದ್ದರೆ ವಿವಾದ ಸೀಮಿತವಾಗಿರಬಹುದಿತ್ತು. ಆದರೆ ದೀರ್ಘ ವಿಳಂಬದ ಬಳಿಕ ಕೈಗೊಂಡ ಕ್ರಮದಿಂದ ವಿಷಯ ಮತ್ತೆ ಭಾವನಾತ್ಮಕ ಹಾಗೂ ಧಾರ್ಮಿಕ ಚರ್ಚೆಯ ಕೇಂದ್ರಬಿಂದುವಾಗಿದೆ.

ಇಲ್ಲಿ ಪ್ರಶ್ನೆಯಾಗುವುದು ನಿರ್ಧಾರದ ಉದ್ದೇಶವಲ್ಲ; ಅದರ ಸಮಯ. ಸರ್ಕಾರ ನಿಜವಾಗಿಯೂ ಚುನಾವಣಾ ಭರವಸೆಯನ್ನು ಈಡೇರಿಸಲು ಬದ್ಧವಾಗಿದ್ದರೆ, ಅದನ್ನು ಮೊದಲ ವರ್ಷದಲ್ಲೇ ಜಾರಿಗೆ ತರಬಹುದಾಗಿತ್ತು. ಮೂರು ವರ್ಷಗಳ ಬಳಿಕ, ಅದೂ ಮುಂದಿನ ಚುನಾವಣೆಯ ಹೊಸ್ತಿಲಲ್ಲಿ ಈ ಕ್ರಮ ಕೈಗೊಳ್ಳುವುದರಿಂದ ಸರ್ಕಾರದ ಉದ್ದೇಶಗಳ ಕುರಿತು ಅನುಮಾನಗಳು ಮೂಡುವುದು ಸಹಜ. ಇದು ನಿಜವಾದ ಸಾಮಾಜಿಕ ನ್ಯಾಯದ ನಿರ್ಧಾರವೇ, ಅಥವಾ ನಿರ್ದಿಷ್ಟ ಮತಬ್ಯಾಂಕ್‌ಗಳನ್ನು ಮತ್ತೆ ಒಗ್ಗೂಡಿಸುವ ರಾಜಕೀಯ ಲೆಕ್ಕಾಚಾರವೇ ಎಂಬ ಚರ್ಚೆಗಳು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿವೆ.

ಈ ವಿವಾದ ಮತ್ತೊಂದು ಮಹತ್ವದ ವಿಚಾರವನ್ನೂ ನೆನಪಿಸುತ್ತದೆ. ಶಿಕ್ಷಣ ಸಂಸ್ಥೆಗಳು ಜ್ಞಾನ, ಶಿಸ್ತು ಮತ್ತು ಸಮಾನತೆಯ ಕೇಂದ್ರಗಳಾಗಿರಬೇಕೇ ಹೊರತು ನಿರಂತರ ರಾಜಕೀಯ ಮತ್ತು ಧಾರ್ಮಿಕ ಸಂಘರ್ಷಗಳ ವೇದಿಕೆಯಾಗಬಾರದು. ಸರ್ಕಾರದ ಯಾವುದೇ ನಿರ್ಧಾರ ಸಮಾಜದಲ್ಲಿ ಸಾಮರಸ್ಯವನ್ನು ಬಲಪಡಿಸುವಂತಿರಬೇಕು. ಆದರೆ ವಿವಾದಾತ್ಮಕ ವಿಷಯಗಳಲ್ಲಿ ತಡವಾದ ನಿರ್ಧಾರಗಳು ಸಮಾಜದಲ್ಲಿ ಮತ್ತಷ್ಟು ಧ್ರುವೀಕರಣಕ್ಕೆ ಕಾರಣವಾಗುವ ಅಪಾಯವಿದೆ.

ಪ್ರಜಾಪ್ರಭುತ್ವದಲ್ಲಿ ಸರ್ಕಾರಗಳಿಗೆ ನಿರ್ಧಾರ ಕೈಗೊಳ್ಳುವ ಹಕ್ಕಿದೆ. ಅದೇ ವೇಳೆ ಸಾರ್ವಜನಿಕ ಅಭಿಪ್ರಾಯ, ಸಾಮಾಜಿಕ ಪರಿಣಾಮ ಮತ್ತು ಆಡಳಿತದ ಸಮಯೋಚಿತತೆ ಎಂಬುವೂ equally ಮುಖ್ಯ. ಒಂದು ನಿರ್ಧಾರ ಸರಿಯೇ ತಪ್ಪೇ ಎನ್ನುವುದಕ್ಕಿಂತ, ಅದನ್ನು ಯಾವ ಸಂದರ್ಭದಲ್ಲೂ ಹೇಗೆ ಜಾರಿಗೆ ತರಲಾಗುತ್ತದೆ ಎಂಬುದೇ ಕೆಲವೊಮ್ಮೆ ದೊಡ್ಡ ರಾಜಕೀಯ ಪರಿಣಾಮ ಬೀರುತ್ತದೆ.

ಸಿದ್ದರಾಮಯ್ಯ ಸರ್ಕಾರದ ಇತ್ತೀಚಿನ ಕ್ರಮವೂ ಅದೇ ರೀತಿಯ ಚರ್ಚೆಗೆ ಕಾರಣವಾಗಿದೆ. ಚುನಾವಣಾ ಭರವಸೆಗಳನ್ನು ಈಡೇರಿಸುವುದು ಸ್ವಾಗತಾರ್ಹ. ಆದರೆ ಅವುಗಳನ್ನು ಸಮಯಕ್ಕೆ ಸರಿಯಾಗಿ ಜಾರಿಗೆ ತರುವ ರಾಜಕೀಯ ದೃಢತೆ ಇಲ್ಲದಿದ್ದರೆ, ಅದೇ ನಿರ್ಧಾರ ಸರ್ಕಾರಕ್ಕೇ ಸಂಕಷ್ಟವನ್ನುಂಟುಮಾಡುವ ಸಾಧ್ಯತೆ ಇರುತ್ತದೆ. ಈಗಿನ ಬೆಳವಣಿಗೆಗಳು ಅದನ್ನೇ ಸ್ಪಷ್ಟಪಡಿಸುತ್ತಿವೆ.

**– ಅಲೀಲ್** ಅಕ್ಬರ್



# ಜೂನ್ 21 ರಂದು ನೀಟ್ ಮರು ಪರೀಕ್ಷೆ

## ಮುಂದಿನ ವರ್ಷದಿಂದ ಆನ್ ಲೈನ್ ಪರೀಕ್ಷೆ: ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ | ಅಭ್ಯರ್ಥಿಗಳಿಂದಲೇ ಪರೀಕ್ಷಾ ಕೇಂದ್ರ ಆಯ್ಕೆ

• ಪ್ರಜೋದಯ ವರದಿ


**ನವದೆಹಲಿ:** ವೈದ್ಯಕೀಯ ಪ್ರವೇಶ ಪರೀಕ್ಷೆ ನೀಟ್- ಯುಜಿ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆ ಬೆನ್ನಲ್ಲೇ ರದ್ದಾಗಿದ್ದ ಪರೀಕ್ಷೆಯ ಮರುಪರೀಕ್ಷೆ ಜೂನ್ 21ರಂದು ನಡೆಯಲಿದೆ ಎಂದು ಹೇಳಿರುವ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಮುಂದಿನ ವರ್ಷದಿಂದ ಆನ್‌ಲೈನ್ ಮೂಲಕ ನೀಟ್-ಯುಜಿ ಪರೀಕ್ಷೆ ನಡೆಸಲಾಗುವುದು ಎಂದು ಇಂದು ಪ್ರಕಟಿಸಿದ್ದಾರೆ.

ಈ ವರ್ಷದ ನೀಟ್-ಯುಜಿ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ ಮರುಪರೀಕ್ಷೆ 2026ಅನ್ನು ಜೂನ್ 21 ರ ನಡೆಸಲು ನಿರ್ಧರಿಸಲಾಗಿದೆ, ಇನ್ನು ಮುಂದೆ ಪ್ರಶ್ನೆ ಪತ್ರಿಕೆ ಸೋರಿಕೆಯಾಗುವುದನ್ನು ತಡೆಯುವ ಉದ್ದೇಶದಿಂದ ಆನ್‌ಲೈನ್ ಮಾದರಿ



ಯಲ್ಲಿ ಪರೀಕ್ಷೆ ಬರೆಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ನೀಟ್-ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಸಂಬಂಧ ಸಿಬಿಐ ತನಿಖೆ ನಡೆಯುತ್ತಿದೆ, ಸೋರಿಕೆಯಾದ ಪ್ರಶ್ನೆ ಪತ್ರಿಕೆ ಪಡೆಯಲು ಪ್ರತಿ ವಿದ್ಯಾರ್ಥಿಗೆ 3 ಲಕ್ಷದಿಂದ 5 ಲಕ್ಷ ರೂ.ಗಳವರೆಗೆ ಶುಲ್ಕ ವಿಧಿಸಲಾಗಿದೆ ಎನ್ನುವುದು ಪ್ರಾಥಮಿಕ ತನಿಖೆಯಿಂದ ಪತ್ತೆಯಾಗಿದೆ, ಈ ಸಂಬಂಧ ತನಿಖೆಯನ್ನು ಮತ್ತಷ್ಟು ತೀವ್ರಗೊಳಿಸಲಾಗಿದೆ ಎಂದರು.




ನೀಟ್-ಯುಜಿ ಪತ್ರಿಕೆಯು ಯಶ್ ಯಾದವ್ ಎಂದು ಗುರುತಿಸಲಾದ ಆರೋಪಿಯ ಮೂಲಕ ರಾಜಸ್ಥಾನವನ್ನು ತಲುಪಿದೆ ಎಂದು ಹೇಳಲಾಗಿದೆ, ಈತ ಇನ್ನೊಬ್ಬ ಆರೋಪಿ ವಿಕಾಸ್ ಬಿವಾಲ್ ಜೊತೆ ಪರಿಚಿತನಾಗಿದ್ದ ಎನ್ನುವುದು ತಿಳಿದು ಬಂದಿದೆ, ಈ ಸಂಬಂಧ ಸಮಗ್ರ ತನಿಖೆ ನಡೆಯಿತ್ತಿದೆ ಎಂದಿದ್ದಾರೆ.

**ಪರೀಕ್ಷಾ ಕೇಂದ್ರ ನಿರ್ಧಾರ:**

ಜೂನ್ 21 ರಂದು ನೀಟ್-ಯುಜಿ ಮರು ಪರೀಕ್ಷೆ ನಡೆಯಲಿದ್ದು ಅಭ್ಯರ್ಥಿಗಳು ತಮ್ಮದೇ ಆದ ಪರೀಕ್ಷಾ ಕೇಂದ್ರ ಆಯ್ಕೆ ಮಾಡಿ ಕೊಳ್ಳಬಹುದು ಎಂದು ಹೇಳಿದ ಸಚಿವ ಧರ್ಮೇಂದ್ರ ಪ್ರಧಾನ್ ಜೂನ್ 14 ರೊಳಗೆ ಮರು ಪರೀಕ್ಷೆ ಪ್ರವೇಶ ಪತ್ರವನ್ನು ನೀಡಲಾಗುವುದು ಎಂದು ಅವರು ತಿಳಿಸಿದ್ದಾರೆ.

ಪತ್ರಿಕೆ ಸೋರಿಕೆಗೆ ಕಾರಣರಾದವರ ವಿರುದ್ಧ ಬಲವಾದ ಕ್ರಮ ಕೈಗೊಳ್ಳುವುದಾಗಿ ಪ್ರತಿಜ್ಞೆ ಮಾಡಿದರು ಮತ್ತು ಈ ತಿಂಗಳ ಪರೀಕ್ಷೆಯನ್ನು ರದ್ದುಗೊಳಿಸುವ ನಿರ್ಧಾರವನ್ನು ಪ್ರತಿಭಾನ್ವಿತ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು.

ಕೆಲವು ಸಮಸ್ಯೆಗಳು ಗಮನಕ್ಕೆ ಬಂದಿವೆ ಮತ್ತು ಸಂಪೂರ್ಣವಾಗಿ ತನಿಖೆ ಮಾಡಲಾಗುತ್ತದೆ ಎಂದು ಅವರು ಹೇಳಿದರು. ಮೇ 3 ರ ಪರೀಕ್ಷೆಯನ್ನು ರದ್ದುಗೊಳಿಸುವುದಾಗಿ ಘೋಷಿಸಿದ ನಂತರ ಕಾನೂನು ಜಾರಿ ಸಂಸ್ಥೆಗಳು ಹಂಚಿಕೊಂಡ ಸಂಶೋಧನೆಗಳೊಂದಿಗೆ ಸ್ವೀಕರಿಸಿದ ಇನ್‌ಪುಟ್‌ಗಳನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಈ ವರ್ಷದ ನೀಟ್ ಮರು ಪರೀಕ್ಷೆಗೆ ಅರ್ಜಿ ಶುಲ್ಕ ಅಗತ್ಯವಿಲ್ಲ. ಪ್ರಶ್ನೆ ಪತ್ರಿಕೆ ಸೋರಿಕೆಯಂತಹ ''ದುಷ್ಕೃತ್ಯಗಳ ಬಗ್ಗೆ ಶೂನ್ಯ ಸಹಿಷ್ಣುತೆ ಇರುತ್ತದೆ'', ನೀಟ್ ಮರು ಪರೀಕ್ಷೆಯನ್ನು ಜೂನ್ 21 ಮತ್ತಷ್ಟು ಬಿಗಿ ಭದ್ರತೆಯಲ್ಲಿ ನಡೆಸಲಾಗುವುದು ಎಂದು ಪ್ರಧಾನ್ ಅವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

### ಮರು ನೋಂದಣಿ ಅಗತ್ಯವಿಲ್ಲ

ನೀಟ್-ಯುಜಿ ಪರೀಕ್ಷೆಯನ್ನು ಜೂನ್ 21ಕ್ಕೆ ಮರು ನಿಗಧಿ ಮಾಡಿರುವ ಹಿನ್ನಲೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗೆ ಮತ್ತೊಮ್ಮೆ ಮುರು ನೋಂದಣಿ ಮಾಡಿಕೊಳ್ಳುವ ಅಗತ್ಯವಿಲ್ಲ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ- ಎನ್ ಟಿಎ ಹೇಳಿದೆ.

ಮೇ 3 ರಂದು ಪರೀಕ್ಷೆ ಬರೆದ ಎಲ್ಲಾ ವಿದ್ಯಾರ್ಥಿಗಳಿಗೆ ಜೂನ್ 21 ರಂದು ಪರೀಕ್ಷೆಗೆ ಅವಕಾಶ ಮಾಡಿಕೊಡಲಾಗುತ್ತಿದೆ. ಯಾವುದೇ ಹೊಸ ನೋಂದಣಿ ಅಗತ್ಯವಿಲ್ಲ, ಮತ್ತು ಯಾವುದೇ ಹೆಚ್ಚುವರಿ ಪರೀಕ್ಷಾ ಶುಲ್ಕ ವಿಧಿಸಲಾಗುವುದಿಲ್ಲ. ಹೆಚ್ಚುವರಿಯಾಗಿ, ಈಗಾಗಲೇ ಪಾವತಿಸಿದ ಶುಲ್ಕವನ್ನು ವಿದ್ಯಾರ್ಥಿಗಳಿಗೆ ಮರುಪಾವತಿಸಲಾಗುತ್ತದೆ ಎಂದು ತಿಳಿಸಿದೆ.

## ಸಿದ್ದರಾಮಯ್ಯನವರೇ, ನಿಮಗೆ ಹಿಂದೂಗಳೆಂದರೆ ಏಕಿಷ್ಟು ದ್ವೇಷ?

• ಪ್ರಜೋದಯ ವರದಿ



**ಬೆಂಗಳೂರು:** ಹಿಂದೂಗಳು ಅವರ ನಂಬಿಕೆ, ಆಚರಣೆ, ಧಾರ್ಮಿಕ ಚಿಹ್ನೆ ಗಳೆಂದರೆ ನಿಮಗೆ ಯಾಕೆ ಇಷ್ಟು ಅಸಹನೆ? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವ ರನ್ನು ವಿಧಾನ ಸಭೆಯ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಪ್ರಶ್ನೆ ಮಾಡಿದ್ದಾರೆ.

ತಮ್ಮ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಹಿಂದುಗಳೆಂದರೆ, ಹಿಂದೂಗಳ ನಂಬಿಕೆಗಳೆಂದರೆ, ಹಿಂದೂಗಳ ಆಚರಣೆ, ಅವರ ಧಾರ್ಮಿಕ ಚಿಹ್ನೆಗಳೆಂದರೆ ಸಿದ್ದರಾಮಯ್ಯನವರಿಗೆ ಏಕೆ ಇಷ್ಟು ದ್ವೇಷ? ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಸಮಾರಂಭಗಳಲ್ಲಿ ಹಿಂದೂಗಳು ಹಣೆಗೆ ಕುಂಕುಮವಿಡಲು ಬಂದರೆ ಮತ್ತು ಶಾಲು ಹೊದಿಸಲು ಬಂದರೆ ಕಿತ್ತೆಸೆಯುತ್ತೀರಿ. ಕುಂಕುಮ ಕಂಡರೆ ರಕ್ತ ಕಂಡಂತೆ ಸಿಡಿಮಿಡಿಗೊಳ್ಳುತ್ತೀರಿ ಏಕೆ ಎಂದು ಕಿಡಿಕಾರಿದ್ದಾರೆ.

ನೀವು ಬರೀ ಅಲ್ಪಸಂಖ್ಯಾತರಿಗೆ ಮಾತ್ರ ಮುಖ್ಯಮಂತ್ರಿ ಅಲ್ಲ ಸ್ವಾಮಿ, ಇಡೀ ರಾಜ್ಯಕ್ಕೆ ಮುಖ್ಯಮಂತ್ರಿ ಎನ್ನುವುದನ್ನು ಮರೆಯಬೇಡಿ ಎಂದು ಎಚ್ಚರಿಸಿದ್ದಾರಲ್ಲದೆ, ನಿಮಗೆ ತಿಲಕ ಕಂಡರೆ ನಡುಕ, ಕೇಸರಿ ಕಂಡರೆ ಮೈಯೆಲ್ಲ ಉರಿ, ಹನುಮ ಧ್ವಜ ಕಂಡರೆ ತಳಮಳ, ರಾಮಮಂದಿರ ಎಂದರೆ ಕಿರಿಕಿರಿ ಎಂದು ಕಿಚಾಯಿಸಿದ್ದಾರೆ.

ಆದರೆ ಅನ್ಯಮತೀಯ ಸಂಭ್ರಮಗಳಲ್ಲಿ ಮಾತ್ರ ಘಮಘಮಿಸುವ ಸೆಂಟು ಹೊಡೆದುಕೊಂಡು, ಟೋಪಿ ಹಾಕಿಕೊಂಡು, ನವ ಮಧು ಮಗನಂತೆ ಸಿಂಗಾರಗೊಳ್ಳುತ್ತೀರಿ ಎಂದು ಅಶೋಕ್ ಕುಹಕವಾಡಿದ್ದಾರೆ.

## ರಸ್ತೆಯಲ್ಲಿ ಗುಂಡಿ: ವಾಹನ ಸವಾರರಿಗೆ ತೊಂದರೆ



• ಪ್ರಜೋದಯ ವರದಿ

**ಹಾರನಹಳ್ಳಿ;** ಹಾಸನ- ಅರಸೀಕೆರೆ ಮುಖ್ಯ ರಸ್ತೆ ಹಾರನಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ಮುಖ್ಯ ರಸ್ತೆಯಲ್ಲಿ ಚರಂಡಿ ಮಾಡಿ ಕಾಂಕ್ರೀಟ್ ಹಾಕಿದ ಜಾಗದಲ್ಲಿ ಸರಿಯಾಗಿ ರಸ್ತೆ ಮುಚ್ಚಿ ಡಾಂಬರ್ ಹಾಕದೆ ಇರುವುದರಿಂದ ರಸ್ತೆಯ ಮಧ್ಯ ಭಾಗದಲ್ಲಿ ಗುಂಡಿ-ಗೊಟರುಗಳಿಂದ ಕೂಡಿದ್ದು ಸಾರ್ವಜನಿಕರ ತೊಂದರೆ ಅನುಭವಿಸುವಂತಾಗಿದೆ.

ಮಳೆ ಬಂದ ಸಂದರ್ಭಗಳಲ್ಲಿ ಗುಂಡಿಗಳಲ್ಲಿ ನೀರು ತುಂಬಿದು ರಸ್ತೆ ಗುಂಡಿ ಗೋತಾಗದಸ್ಥಿತಿ ಉಂಟಾಗಿ ಈ ರಸ್ತೇಯಲ್ಲಿ ಸಂಚಾರ ನೆಡೆಸು ದುಸ್ತರವಾಗಿದೆ. 6 ತಿಂಗಳು ಕಳೆದರೂ ಗುಂಡಿ ಮುಚ್ಚದೆ ಇರುವುದರಿಂದ ಈ ರಸ್ತೆಯಲ್ಲಿ ರಾತ್ರಿ ಸಂಧರ್ಭದಲ್ಲಿ ಈ ರಸ್ತೆಯಲ್ಲಿ ಪ್ರಯಾಣ ಮಾಡುವ ದ್ವಿಚಕ್ರ ವಾಹನ ಸವಾರರು ಆಯತಪ್ಪಿ ಬಿದ್ದು ಕೈಕಾಲು ಮುರಿದುಕೊಂಡು ಆಸ್ಪತ್ರೆ ಸೇರುವ ಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ ವಾಹನ ಸವಾರರು ದಿನನಿತ್ಯ ಭಯದಲ್ಲಿಯೇ ವಾಹನ ಚಾಲನೆ ಮಾಡುವಂತಾಗಿದೆ ಎಂದು ಹಾರನಹಳ್ಳಿ ಗ್ರಾಮಸ್ಥರು ಅಕ್ರೋಶ ವ್ಯಕ್ತಪಡಿಸಿದ್ದಾರೆ.

ಹಾಸನಕ್ಕೆ ಹೋಗುವ ಮುಖ್ಯ ರಸ್ತೆಯಾಗಿರುವುದರಿಂದ ಚರಂಡಿ ತೊಡಿ ಮುಚ್ಚಿರುವ ಜಾಗದಲ್ಲಿ ಟಾರ್ ಹಾಕಿಸಿ ತಕ್ಷಣ ಈರಸ್ತೆ ದುರಸ್ಥಿಗೆ ಲೋಕೋಪಯೋಗಿ ಇಲಾಖೆಯವರು ಮುಂದಾಗಬೇಕು ಎಂದು ಕಾಂಗ್ರೆಸ್ ಮುಖಂಡ ಹೆಚ್.ಎಂ. ಮಲ್ಲಿಕಾರ್ಜುನ ಸ್ವಾಮಿ ಒತ್ತಾಯಿಸಿದ್ದಾರೆ

## ರಾಜ್ಯದಲ್ಲಿ ಜೂ.20 ರಿಂದ SIR ಶುರು: ಅ.7ಕ್ಕೆ ಅಂತಿಮ ಪಟ್ಟಿ ಪ್ರಕಟ

• ಪ್ರಜೋದಯ ವರದಿ

**ಬೆಂಗಳೂರು:** ಕರ್ನಾಟಕದಲ್ಲಿ ಜೂನ್ 20 ರಂದು ಮತದಾರರ ವಿಶೇಷ ತೀವ್ರ ಪರಿಷ್ಕರಣೆ (SIR) ಪ್ರಕ್ರಿಯೆ ಆರಂಭವಾಗಲಿದ್ದು, ಅಕ್ಟೋಬರ್ 7, 2026 ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ತಿಳಿಸಿದ್ದಾರೆ.

ವಿವಿಧ ರಾಜ್ಯಗಳಲ್ಲಿ ಮೂರನೇ ಹಂತದ ಪ್ರಕ್ರಿಯೆ ಆರಂಭವನ್ನು ಭಾರತೀಯ ಚುನಾವಣಾ ಆಯೋಗ ಘೋಷಣೆ ಮಾಡಿದ ಬೆನ್ನಲ್ಲೇ ರಾಜ್ಯ ಚುನಾವಣಾ ಆಯುಕ್ತರು ಈ ಮಾಹಿತಿ ನೀಡಿದ್ದಾರೆ.

ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ಹೊರತುಪಡಿಸಿ 16 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳಿಗೆ ಭಾರತೀಯ ಚುನಾವಣಾ ಆಯೋಗ



ಘೋಷಿಸಿದೆ. ಅಕ್ಟೋಬರ್ 1 ರಂದು ನಿಗದಿಯಾಗಿರುವ ಅರ್ಹತಾ ದಿನಾಂಕಕ್ಕಾಗಿ ಮೇಘಾಲಯ, ಮಹಾರಾಷ್ಟ್ರ, ಜಾರ್ಖಂಡ್ ಮತ್ತು ದೆಹಲಿಯೊಂದಿಗೆ ಕರ್ನಾಟಕವನ್ನು ಸೇರಿಸಲಾಗಿದೆ.

**ಆಗಸ್ಟ್ 5 ರಂದು ಕರಡು ಪಟ್ಟಿ ಪ್ರಕಟ:** ಇಲ್ಲಿಯವರೆಗೆ ಶೇಕಡಾ 86.37 ರಷ್ಟು ಮತದಾರರ ಮ್ಯಾಪಿಂಗ್ ಪೂರ್ಣಗೊಂಡಿದೆ ಮತ್ತು ಆಗಸ್ಟ್ 5, 2026 ರಂದು ಕರಡು ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಆಗಸ್ಟ್ 3 ರವರೆಗೂ ಮ್ಯಾಪಿಂಗ್ ಕಾರ್ಯ ಮುಂದುವರೆಯಲಿದೆ. ಸರ್‌ಗಾಗಿ




ಕೆಲವು ದಿನಗಳಿಂದ ಸಿದ್ಧತೆಗಳು ನಡೆಯುತ್ತಿವೆ ಮತ್ತು ಬೂತ್ ಮಟ್ಟದ ಅಧಿಕಾರಿ ಗಳು ತಮಗೆ ನಿಗದಿಪಡಿಸಿದ ಕೆಲಸಗಳನ್ನು ಮಾಡುತ್ತಿದ್ದಾರೆ ಎಂದು ಮುಖ್ಯ ಚುನಾವಣಾ ಆಯುಕ್ತ ವಿ. ಅನ್ಬುಕುಮಾರ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಕ್ಟೋಬರ್ 3 ರವರೆಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ: ಜೂನ್ 20 ರಿಂದ 29, 2026 ರವರೆಗೆ ಫಾಮ್‌ಗಳ ತಯಾರಿ, ತರಬೇತಿ ಮತ್ತು ಮುದ್ರಣ ಆರಂಭವಾಗಲಿದೆ. ಜೂನ್ 30 ರಿಂದ ಜುಲೈ 29, 2026 ರವರೆಗೆ ಬಿಎಲ್‌ಒಗಳು ಮನೆಗಳಿಗೆ ಭೇಟಿ ನೀಡುತ್ತಾರೆ. ಆಗಸ್ಟ್ 5 ರಿಂದ ಸೆಪ್ಟೆಂಬರ್ 4 ರವರೆಗೆ ನಾಗರಿಕರು ತಮ್ಮ ಹೇಳಿಕೆಗಳನ್ನು ನೀಡಲು ಸುಮಾರು ಒಂದು ತಿಂಗಳ ಕಾಲಾವಕಾಶ ಇರುತ್ತದೆ. ಆಗಸ್ಟ್ 5 ರಿಂದ ಅಕ್ಟೋಬರ್ 3 ರವರೆಗೆ ಜನರು ತಮ್ಮ ಹಕ್ಕುಗಳನ್ನು ಸಲ್ಲಿಸಲು ಆಕ್ಷೇಪಣೆಗಳು ಮತ್ತು ನೋಟಿಸ್‌ಗಳನ್ನು ನೀಡಲಾಗುವುದು. ಸದ್ಯ ನಡೆಯುತ್ತಿರುವ ಜನಗಣತಿ ಕಾರ್ಯ ಎಸ್‌ಐಆರ್ ಪ್ರಕ್ರಿಯೆಯ ಮೇಲೆ ಹೆಚ್ಚಿನ ಪರಿಣಾಮ ಬೀರುವು ದಿಲ್ಲ ಎಂದು ಕುಮಾರ್ ಹೇಳಿದರು.

ಕರ್ನಾಟಕದಲ್ಲಿ 59,050 ಬಿಎಲ್‌ಒಗಳು ಮತ್ತು 25,284 ಬೂತ್ ಮಟ್ಟದ ಏಜೆಂಟ್‌ಗಳು (ಬಿಎಲ್‌ಎ) ಇದ್ದಾರೆ. ಮೇ 12, 2026 ರ ಹೊತ್ತಿಗೆ, ರಾಜ್ಯದಲ್ಲಿ 5,55,74,064 ಮತದಾರರಿದ್ದಾರೆ. ಎಸ್‌ಐಆರ್‌ನಲ್ಲಿ ಪಟ್ಟಿ ಮಾಡಲಾದ ಪ್ರಶ್ನೆಗಳು ವಿವಾದಾತ್ಮಕವಾಗಿಲ್ಲ ಅಥವಾ ಯಾವುದೇ ವೈಯಕ್ತಿಕ ವಿವರಗಳನ್ನು ಬಯಸುವುದಿಲ್ಲ. ಮತದಾರರು ತಮ್ಮ ಹೆಸರು, ಜನ್ಮ ದಿನಾಂಕ, ಫೋಟೋ, ಎಪಿಕ್ ಸಂಖ್ಯೆ ಮತ್ತು ವಿಳಾಸ ಮತ್ತು ಕೊನೆಯದಾಗಿ, ಎಸ್‌ಐಆರ್ ಮತದಾನದ ವಿವರಗಳನ್ನು ಕೇಳಲಾಗುತ್ತದೆ ಎಂದು ಸಿಇಒ ಕಚೇರಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇದಲ್ಲದೆ, ಮೊಬೈಲ್ ಸಂಖ್ಯೆಗಳನ್ನು ನವೀಕರಿಸಲು ಕೇಳಲಾಗುತ್ತದೆ. ಮತದಾರರು ಗುರುತು ಮತ್ತು ವಿಳಾಸ ಪುರಾವೆಗಾಗಿ ಪಟ್ಟಿ ಮಾಡಲಾದ 11 ದಾಖಲೆಗಳಲ್ಲಿ ಒಂದನ್ನು ಮತ್ತು ಇತ್ತೀಚಿನ ಪಾಸ್‌ಪೋರ್ಟ್ ಗಾತ್ರದ ಫೋಟೋವನ್ನು ಸಲ್ಲಿಸಬೇಕು ಎಂದು ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

## ಹಸಿರು ಹಾಸನ: ಸರ್ಕಾರಿ ಕಾಲೇಜಿನಲ್ಲಿ ವನ ಮಹೋತ್ಸವ

• ಪ್ರಜೋದಯ ವರದಿ

**ಸಕಲೇಶಪುರ:** ಹಸಿರು ಹಾಸನ ಅಭಿಯಾನದ ಅಂಗವಾಗಿ ಪಟ್ಟಣದ ಕುಡುಗರಹಳ್ಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವನ ಮಹೋತ್ಸವ ಕಾರ್ಯಕ್ರಮವನ್ನು ಗಿಡ ನೆಡುವುದರ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಪ್ರತಿಯೊಬ್ಬ ವಿದ್ಯಾರ್ಥಿಯೂ ಕನಿಷ್ಠ ಒಂದು ಗಿಡವನ್ನು ನೆಟ್ಟು ಅದರ ಪೋಷಣೆಯ ಜವಾಬ್ದಾರಿ ಹೊತ್ತುಕೊಳ್ಳಬೇಕು ಎಂದು ಕರೆ ನೀಡಲಾಯಿತು ಮತ್ತು ಕಾಲೇಜು ಆವರಣವನ್ನು ಹಸಿರುಮಯವಾಗಿಸುವ ಉದ್ದೇಶದಿಂದ ಮುಂದಿನ ದಿನಗಳಲ್ಲಿ ಔಷಧೀಯ, ಹಣ್ಣಿನ ಹಾಗೂ ನೆರಳು ನೀಡುವ ವಿವಿಧ ಜಾತಿಯ ಸಸಿಗಳನ್ನು ಹಂತ ಹಂತವಾಗಿ ನೆಡುವ ಯೋಜನೆ ರೂಪಿಸಲಾ



ಗಿದೆ ಎಂದು ತಿಳಿಸಲಾಯಿತು.

ಕಾಲೇಜು ಆವರಣದಲ್ಲಿ ವಿದ್ಯಾರ್ಥಿಗಳು ವಿಶ್ರಾಂತಿ ಪಡೆಯುವ ಅಂಗಳದ ಸುತ್ತಮುತ್ತ 25ಕ್ಕೂ ಹೆಚ್ಚು ನೆರಳು ನೀಡುವ ಗಿಡಗಳನ್ನು ನೆಟ್ಟು ಮಾತನಾಡಿದ ಹಸಿರು ಕರ್ನಾಟಕ ಫೌಂಡೇಶನ್‌ನ ಪರಿಸರ ಪ್ರೇಮಿ ಇತಿಹಾಸ್, ಜೂನ್ ತಿಂಗಳ ಬಳಿಕ ಮುಂಗಾರು ಆರಂಭವಾಗುವ ಸಂದರ್ಭದಲ್ಲಿ ಕಾಲೇಜು ವ್ಯಾಪ್ತಿಯಲ್ಲಿ 150ಕ್ಕೂ ಹೆಚ್ಚು ಹಣ್ಣು ಹಾಗೂ ನೆರಳು ಗಿಡಗಳನ್ನು ನೆಡುವ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ಮರ-ಗಿಡಗಳು ಪರಿಸರ ಸಮತೋಲನ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಪರಿಸರ ಅಸಮತೋಲನವೇ ಜಾಗತಿಕ ತಾಪಮಾನ ಏರಿಕೆಗೆ ಪ್ರಮುಖ ಕಾರಣವಾಗಿದ್ದು, ನಮ್ಮ ಸುತ್ತಮುತ್ತ ಉತ್ತಮ ಪರಿಸರ ನಿರ್ಮಿಸಿ ಅದನ್ನು ಸಂರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಸಿರು ಕರ್ನಾಟಕ ಫೌಂಡೇಶನ್ ಸದಸ್ಯರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ. ಸಹನ ಹೆಚ್.ಎಂ., ಡಾ. ಕೋಮಲ, ಅರಕ್ಷಕ ಸಿಬ್ಬಂದಿ ಪೃಥ್ವಿ, ಕಂದಾಯ ಇಲಾಖೆಯ ಸಿ.ಎಸ್. ಜನಾರ್ಧನ್, ಸಿದ್ದಲಿಂಗೇಶ್ ಹಾಗೂ ಅರಣ್ಯ ಇಲಾಖೆಯ ವಿಜಯ್ ಕುಮಾರ್, ರಾಷ್ಟ್ರೀಯ ಸೇವಾ ಯೋಜನೆ ಘಟಕದ ಕೆ.ಜಿ.ಟಿ. ಗೌಡ, ಕಾಲೇಜಿನ ಉಪನ್ಯಾಸಕರು, ಉಪನ್ಯಾಸಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ನಟ ದರ್ಶನ್‌ಗೆ ಸದ್ಯಕ್ಕಿಲ್ಲ ಬೇಲು; 1 ವರ್ಷ ಜೈಲು

• ಪ್ರಜೋದಯ ವರದಿ

**ನವದೆಹಲಿ:** ಚಿತ್ರದುರ್ಗ ಮೂಲದ ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ನಟ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅವರಿಗೆ ಮಧ್ಯಂತರ ಜಾಮೀನು ನೀಡಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದ್ದು, ವಿಚಾರಣಾ ನ್ಯಾಯಾಲಯವು ಒಂದು ವರ್ಷದೊಳಗೆ ವಿಚಾರಣೆಯನ್ನು ಸಂಪೂರ್ಣಗೊಳಿಸಿ ಪ್ರಕರಣವನ್ನು ತೀರ್ಮಾನಿಸಬೇಕೆಂದು ತನ್ನ ಆದೇಶವನ್ನು ಪ್ರಕಟಿಸಿದೆ.

ನ್ಯಾಯಮೂರ್ತಿ ಜೆ.ಬಿ. ಪರ್ದಿವಾಲಾ ನೇತೃತ್ವದ ಇಬ್ಬರು ನ್ಯಾಯಮೂರ್ತಿಗಳ ಪೀಠ ಈ ಆದೇಶ ನೀಡಿದ್ದು, ಇಂದಿನಿಂದಲೇ ವಿಚಾರಣೆಯನ್ನು ಆದ್ಯತೆಯ ಮೇರೆಗೆ ನಡೆಸಬೇಕು ಎಂದು ಹೇಳಿದೆ.

ಜೈಲಿನಲ್ಲಿ ಇತರ ಕೈದಿಗಳಿಗೆ

### 'ದಾಸ' ನಿಗೆ ಸುಪ್ರೀಂಕೋರ್ಟ್‌ನಿಂದ ನಿರಾಸೆ



ನೀಡಲಾಗುವಂತೆ ದರ್ಶನ್ ಅವರಿಗೆ ಸಹ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು ಎಂದು ನ್ಯಾಯಾಲಯ ಸೂಚಿಸಿದೆ.

**ಒಂದು ವರ್ಷದವರೆಗೆ ಅರ್ಜಿ ಸಲ್ಲಿಕೆ ಇಲ್ಲ:**

ಮುಂದಿನ ಒಂದು ವರ್ಷದವರೆಗೆ ದರ್ಶನ್ ಯಾವುದೇ ಜಾಮೀನು ಅರ್ಜಿ ಸಲ್ಲಿಸಬಾರದು ಎಂದು ನ್ಯಾಯಾಲಯ ಷರತ್ತು ವಿಧಿಸಿದೆ. ಆದರೆ ಒಂದು ವರ್ಷದೊಳಗೆ ವಿಚಾರಣೆ ಪೂರ್ಣಗೊಳ್ಳದಿದ್ದರೆ, ಆ ಬಳಿಕ ಅವರಿಗೆ ಜಾಮೀನು ಪರಿಗಣಿಸಬಹುದು ಎಂದು ಹೇಳಿದೆ.

ಹಿಂದಿನ ವಿಚಾರಣೆಗಳಲ್ಲಿ, ಜೈಲಿನಲ್ಲಿನ ಅಕ್ರಮಗಳು ಹಾಗೂ ಸಹ ಕೈದಿಗಳಿಂದ ಕಿರುಕುಳ ಮತ್ತು ಬೆದರಿಕೆ ಎದುರಿಸುತ್ತಿರುವುದಾಗಿ ದರ್ಶನ್ ಸುಪ್ರೀಂ ಕೋರ್ಟ್‌ಗೆ ತಿಳಿಸಿದ್ದರು. ಇದಾದ ಬಳಿಕ ನ್ಯಾಯಾಲಯ ಜೈಲು ಅಧಿಕಾರಿಗಳಿಂದ ವರದಿ ಕೇಳಿತ್ತು.

ವಿಶೇಷ ಸರ್ಕಾರಿ ಅಭಿಯೋಜಕರು ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಿ, ದರ್ಶನ್ ಮಾಡಿದ್ದ ಎಲ್ಲ ಆರೋಪಗಳನ್ನು ವಿಡಿಯೋ ಸಾಕ್ಷ್ಯಗಳೊಂದಿಗೆ ತಳ್ಳಿಹಾಕಿದ್ದರು.

ವಿಚಾರಣೆ ವೇಳೆ, ಪ್ರಕರಣದಲ್ಲಿರುವ 270 ಸಾಕ್ಷಿದಾರರಲ್ಲಿ ಇದುವರೆಗೆ ಕೇವಲ 10 ಮಂದಿಯಷ್ಟೇ ವಿಚಾರಣೆಗೆ ಒಳಪಟ್ಟಿದ್ದಾರೆ ಎಂಬುದೂ ಗಮನಕ್ಕೆ ಬಂತು. ವಿಚಾರಣೆಯಲ್ಲಿ ವಿಳಂಬವಾಗುತ್ತಿರುವ ಕಾರಣ, ಉಳಿದ ಸಾಕ್ಷಿದಾರರ ವಿಚಾರಣೆ ಮುಗಿಯುವವರೆಗೆ ಮಧ್ಯಂತರ ಜಾಮೀನು ನೀಡಬೇಕು ಎಂದು ದರ್ಶನ್ ಅವರು ಮನವಿ ಮಾಡಿದ್ದರು.

ಈ ವಿಷಯದ ಕುರಿತು ವಿವರವಾದ ವರದಿ ಕೇಳಿದ್ದ ಸುಪ್ರೀಂ ಕೋರ್ಟ್, ಶುಕ್ರವಾರ ಅಂತಿಮ ಆದೇಶ ಹೊರಡಿಸಿದೆ.

## ನಿರುದ್ಯೋಗಿಗಳಿಂದ ಜಿರಳೆಗಳಂತೆ ವ್ಯವಸ್ಥೆ ಮೇಲೆ ದಾಳಿ

### ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಆಕ್ರೋಶ

• ಪ್ರಜೋದಯ ವರದಿ

**ನವದೆಹಲಿ:** ಕೆಲವು ನಿರುದ್ಯೋಗಿ ಯುವಕರು ಜಿರಳೆಗಳಂತೆ ಹೆಚ್ಚುತ್ತಾ ಮಾಧ್ಯಮ, ಸಾಮಾಜಿಕ ಜಾಲತಾಣ ಮತ್ತು ಆರ್‌ಟಿಐ ಕಾರ್ಯಕರ್ತರಾಗಿ ವ್ಯವಸ್ಥೆಯ ಮೇಲೆ ದಾಳಿ ಮಾಡಲು ಆರಂಭಿಸುತ್ತಾರೆಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಅಭಿಪ್ರಾಯಪಟ್ಟರು.

ಹಿರಿಯ ವಕೀಲರ ಹುದ್ದೆ ಪಡೆಯಲು ಪ್ರಯತ್ನಿಸುತ್ತಿದ್ದ ವಕೀಲರೊಬ್ಬರನ್ನು ತರಾಟೆಗೆ ತೆಗೆದುಕೊಂಡ ಅವರು, ಸಮರ್ಪಕ ಆಧಾರವಿಲ್ಲದೆ ಹಿರಿಯ ಅಧಿಕಾರಿಗಳು ಮತ್ತು ಸಂಸ್ಥೆಗಳ ವಿರುದ್ಧ ನಿರಂತರವಾಗಿ ಆರೋಪ ಮಾಡುವುದು ನ್ಯಾಯ ವ್ಯವಸ್ಥೆ ಮತ್ತು ಆಡಳಿತಾತ್ಮಕ ವ್ಯವಸ್ಥೆಯ ಮೇಲೆ ಅನಗತ್ಯ ಒತ್ತಡ ಉಂಟು ಮಾಡುತ್ತದೆಂದರು.

ಸಮಾಜದಲ್ಲಿ ಈಗಾಗಲೇ ಪರೋಪ ಜೀವಿಗಳು ಇದ್ದು, ಉದ್ಯೋಗ ಸಿಗದ ಅಥವಾ ವೃತ್ತಿಯಲ್ಲಿ ಸ್ಥಾನ ಪಡೆಯದ ಕೆಲ ಯುವಕರು ಜಿರಳೆಗಳಂತೆ ಇರುತ್ತಾರೆ. ಅವರಲ್ಲಿ ಕೆಲವರು ಮಾಧ್ಯಮವಾಗುತ್ತಾರೆ, ಕೆಲವರು ಸಾಮಾಜಿಕ ಜಾಲತಾಣ ಅಥವಾ ಆರ್‌ಟಿಐ ಕಾರ್ಯಕರ್ತರಾಗುತ್ತಾರೆ. ನಂತರ ಎಲ್ಲರ ಮೇಲೂ ದಾಳಿ ಪ್ರಾರಂಭಿಸುತ್ತಾರೆ. ನೀವು ಕೂಡ ಅವರ ಜೊತೆ



ಕೈಜೋಡಿಸಲು ಬಯಸುತ್ತೀರಾ ಎಂದು ಅರ್ಜಿದಾರ ವಕೀಲರನ್ನು ಪ್ರಶ್ನಿಸಿದರು

ಜಗತ್ತೇ ಹಿರಿಯ ವಕೀಲರಾಗಲು ಅರ್ಹವಾಗಿರಬಹುದು. ಆದರೆ ಕನಿಷ್ಟ ನೀವು ಅದಕ್ಕೆ ಅರ್ಹರಲ್ಲ. ಅರ್ಜಿದಾರರ ವೃತ್ತಿಪರ ನಡೆ ಕುರಿತು ಅಸಮಾಧಾನ ವ್ಯಕ್ತಪಡಿಸಿ ದೆಹಲಿ ಹೈಕೋರ್ಟ್ ನಿಮಗೆ ಹಿರಿಯ ವಕೀಲರ ಹುದ್ದೆ ನೀಡಿದರೂ, ಸುಪ್ರೀಂ ಕೋರ್ಟ್ ಅದನ್ನು ರದ್ದುಪಡಿಸಬಹುದು ಎಂದು ಅವರು ಎಚ್ಚರಿಸಿದರು.

**ಪದವಿಗಳ ಬಗ್ಗೆ ಅನುಮಾನವಿದೆ:**

ಕಪ್ಪು ಕೋಟ್ ಧರಿಸಿ ವಕಾಲತ್ತು ನಡೆಸುತ್ತಿರುವ ಅನೇಕ ಮಂದಿಯ ಪದವಿಗಳ ನೈಜತೆಯ ಬಗ್ಗೆ ಗಂಭೀರ ಅನುಮಾನಗಳಿವೆ. ಅವರ ಪದವಿಗಳನ್ನು ಪರಿಶೀಲಿಸಲು ಸಿಬಿಐ ತನಿಖೆ ನಡೆಸಬೇಕೆಂದು ಬಯಸುತ್ತೇವೆ. ಈ ವಿಷಯದಲ್ಲಿ ಬಾರ್ ಕೌನ್ಸಿಲ್ ಆಫ್ ಇಂಡಿಯಾ ಯಾವ ಕ್ರಮ ಕೈಗೊಳ್ಳುವುದಿಲ್ಲ, ಏಕೆಂದರೆ ಅವರಿಗೆ ಮತಗಳು ಬೇಕೆಂದು ಸೂರ್ಯಕಾಂತ್ ಅವರು ಕಿಡಿಕಾರಿದರು.

ಅರ್ಜಿ ವಾಪಾಸ್ ಪಡೆದ ವಕೀಲ:

ಅತ್ತ ಸಿಜೆಐ ಚಾಟಿ ಬೀಸುತ್ತಲೇ ಎಚ್ಚೆತ್ತುಕೊಂಡ ಅರ್ಜಿದಾರ ವಕೀಲ, ಪೀಠದ ಮುಂದೆ ಕ್ಷಮೆ ಕೇಳಿ, ಅರ್ಜಿಯನ್ನು ಹಿಂತೆಗೆದುಕೊಳ್ಳಲು ಅನುಮತಿ ಕೋರಿದರು. ಪೀಠವು ಅರ್ಜಿಯನ್ನು ಹಿಂತೆಗೆದುಕೊಳ್ಳಲು ಅನುಮತಿ ನೀಡಿತು.

## ಓವರ್‌ಹೆಡ್ ನೀರಿನ ಟ್ಯಾಂಕ್ ನಿರ್ಮಾಣಕ್ಕೆ ಕಿತ್ತಾಟ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ಯಲಹಂಕ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಲ್ಲಿಕಾರ್ಜುನಪುರ ಗ್ರಾಮದಲ್ಲಿ ಓವರ್‌ಹೆಡ್ ನೀರಿನ ಟ್ಯಾಂಕ್ ನಿರ್ಮಾಣ ವಿಚಾರವಾಗಿ ಸ್ಥಳೀಯ ಕುಟುಂಬ ಹಾಗೂ ಗ್ರಾಮ ಪಂಚಾಯಿತಿ ಅಧಿಕಾರಿಗಳ ನಡುವೆ ಕಿತ್ತಾಟ ಏರ್ಪಟ್ಟಿದೆ.

ಪೂರ್ವಿಕರ ಕಾಲದಿಂದಲೂ ಮನೆ ನಿರ್ಮಿಸಿಕೊಂಡು ಗ್ರಾಮ ಪಂಚಾಯಿತಿಗೆ ಕಂದಾಯ ಪಾವತಿಸುತ್ತಾ ಬಂದಿದ್ದೇವೆ. ಆದರೆ, ಈಗ ಏಕಾಏಕಿ ಈ ಜಾಗ ಗ್ರಾಮಠಾಣ ಎಂದು ಹೇಳಿ ನಮ್ಮ ಮೇಲೆಯೇ ದೌರ್ಜನ್ಯ ನಡೆಸಲಾಗುತ್ತಿದೆ. ಪಿಡಿಒ, ಬಿಲ್‌ಕಲೆಕ್ಟರ್, ರೆವೆನ್ಯೂ ಇನ್‌ಸ್ಪೆಕ್ಟರ್ ಪೊಲೀಸರೊಂದಿಗೆ ಸ್ಥಳಕ್ಕೆ ಬಂದು ಜೆಸಿಬಿ



ಯಂತ್ರದ ಮೂಲಕ ಓವರ್‌ಹೆಡ್ ಟ್ಯಾಂಕ್ ನಿರ್ಮಾಣಕ್ಕೆ ಗುಂಡಿ ತೋಡಲು ಮುಂದಾಗಿದ್ದಾರೆ. ಯಾವುದೇ ನೋಟೀಸ್ ಅಥವಾ ಅನುಮತಿ ದಾಖಲೆ ತೋರಿಸದೇ ಕಾಮಗಾರಿ ಆರಂಭಿಸಲಾಗಿದೆ ಎಂದು ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ತಮ್ಮ ದಾಖಲೆಗಳು, ಪಾಲುಪಾರಿಕತ್ತು, ಕಂದಾಯ ರಸೀದಿಗಳು ಸೇರಿ ಹಲವು ದಾಖಲೆಗಳಿವೆ. ಇಷ್ಟು ವರ್ಷ ಗ್ರಾಮ ಪಂಚಾಯಿತಿಗೆ ಕಂದಾಯ ಕಟ್ಟಿಸಿಕೊಂಡು ಬಂದಿದ್ದರೂ ಈಗ ಇದು ನಿಮ್ಮ ಜಾಗ ಅಲ್ಲ ಎಂದು ಹೇಳುವುದು ಸರಿಯಲ್ಲ. ನಮಗೆ ಸೂಕ್ತ ನ್ಯಾಯ ಒದಗಿಸಬೇಕು. ಓವರ್‌ಹೆಡ್ ಟ್ಯಾಂಕ್ ಅನ್ನು ಬೇರೆಡೆ ನಿರ್ಮಿಸಿ ನಮ್ಮ ಜಾಗವನ್ನು ಉಳಿಸಿ ಕೊಡಬೇಕು ಎಂದು ಮನವಿ ಮಾಡಿದರು.

ಯಾವುದೇ ಕಾರಣಕ್ಕೂ ನಮ್ಮ ಜಾಗದಲ್ಲಿ ಓವರ್‌ಹೆಡ್ ಟ್ಯಾಂಕ್ ನಿರ್ಮಾಣಕ್ಕೆ ಅವಕಾಶ ನೀಡುವುದಿಲ್ಲ. ಜಿಲ್ಲಾಧಿಕಾರಿ, ಶಾಸಕರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ನ್ಯಾಯ ಒದಗಿಸಬೇಕು. ಇಲ್ಲವಾದರೆ ನಮಗೆ ತೊಂದರೆ ನೀಡಿದವರ ಹೆಸರು ಬರೆದಿಟ್ಟು ಪ್ರಾಣತ್ಯಾಗ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಗ್ರಾಮಸ್ಥರಾದ ವೀಣಾ, ಸವಿತಾ, ಮಂಜಮ್ಮ, ಉಷಾ, ಚಂದ್ರಮ್ಮ, ರಾಧಮ್ಮ ಹಾಜರಿದ್ದರು.

## ಹೊಳೆನರಸೀಪುರದಲ್ಲಿ ಡ್ರಗ್ಸ್, ಗಾಂಜಾ ವಶ

ಹೊಳೆನರಸೀಪುರ: ಪಟ್ಟಣದ ಅರಕಲಗೂಡು ರಸ್ತೆ ಸಮೀಪದ ಹೇಮಾವತಿ ನದಿ ತಟದಲ್ಲಿ ಗಾಂಜಾ ಹಾಗು ಇತರೆ ಮಾದಕ ಪದಾರ್ಥಗಳನ್ನು ಇಟ್ಟುಕೊಂಡಿದ್ದ ಆರೋಪದ ಮೇಲೆ ಅಬಕಾರಿ ಅಧಿಕಾರಿಗಳು ಯುವಕನೊಬ್ಬನನ್ನು ಬಂಧಿಸಿದ್ದಾರೆ. ಚೇತನ್ (28) ಬಂಧಿತ ಆರೋಪಿ. ಈತನಿಂದ 4.8 ಗ್ರಾಂ ಒಣ ಗಾಂಜಾ, 0.4 ಗ್ರಾಂ ಎಲ್‌ಎಸ್‌ಡಿ ಹಾಗು 2.2 ಗ್ರಾಂ ಬ್ರೌನ್ ಶುಗರ್ (ಎಂಡಿಎಂಎ) ವಶಪಡಿಸಿಕೊಳ್ಳಲಾಗಿದೆ. ಜೊತೆಗೆ ಮಾದಕ ಸೇವನೆಗೆ ಬಳಸುತ್ತಿದ್ದ ಚಿಲುಮೆಯನ್ನೂ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ಅಬಕಾರಿ ನಿರೀಕ್ಷಕ ಹೆಚ್.ಸಿ.ಪಾಂಡುರಂಗ ಹಾಗು ಸಿಬ್ಬಂದಿ ಕೃಷ್ಣಮೂರ್ತಿ ಮತ್ತು ವಿಜಯಕುಮಾರ್ ಗಸ್ತಿನಲ್ಲಿ ಇದ್ದ ವೇಳೆ ಅನುಮಾನಾಸ್ಪದವಾಗಿ ಕಂಡು ಬಂದ ಚೇತನ್‌ನನ್ನು ತಪಾಸಣೆ ನಡೆಸಿದಾಗ ಪ್ರಕರಣ ಬೆಳಕಿಗೆ ಬಂದಿದೆ. ವಿಚಾರಣೆಯಲ್ಲಿ ಆತ ಹಾಸನದಿಂದ ಮೈಸೂರಿಗೆ ತೆರಳುತ್ತಿದ್ದಾಗ ನದಿ ತಟದಲ್ಲಿ ಮಾದಕ ಸೇವನೆ ಮಾಡುತ್ತಿದ್ದುದಾಗಿ ಒಪ್ಪಿಕೊಂಡಿದ್ದಾನೆ. ವೈದ್ಯಕೀಯ ಪರೀಕ್ಷೆಯಲ್ಲಿ ಆರೋಪಿ ಡ್ರಗ್ಸ್ ಸೇವಿಸಿರುವುದು ದೃಢಪಟ್ಟಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗುವುದು.

### ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ), ನೆದರ್ಲ್ಯಾಂಡ್ಸ್, ಸ್ವೀಡನ್, ನಾರ್ವೆ, ಇಟಲಿಗೆ ಆರು ದಿನಗಳ ಪ್ರವಾಸ

## ಯುಎಇಗೆ ಪ್ರಧಾನಿ: ಎಲ್‌ಪಿಜಿ, ರಕ್ಷಣಾ ಪಾಲುದಾರಿಕೆಯಲ್ಲಿ ಮಹತ್ವದ ಒಪ್ಪಂದ

• ಪ್ರಜೋದಯ ವರದಿ

**ಯುಎಇ:** ಮಧ್ಯಪ್ರಾಚ್ಯದಲ್ಲಿ ಯುದ್ಧದಿಂದಾಗಿ ಜಾಗತಿಕ ಇಂಧನ ಬಿಕ್ಕಟ್ಟಿನ ಮಧ್ಯೆ ಪ್ರಧಾನಿ ನರೇಂದ್ರ ಮೋದಿ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಗೆ ಅಧಿಕೃತ ಭೇಟಿಗಾಗಿ ಅಬುಧಾಬಿಗೆ ತಲುಪಿದ್ದಾರೆ.

ದೇಶದಲ್ಲಿ ಇಂಧನ ಬೆಲೆ ಏರಿಕೆಯ ಬೆಳವಣಿಗೆ ಜೊತೆಗೇ ಪ್ರವಾಸ ಬಂದಿದ್ದು, ಭಾರತದ ಇಂಧನ ಭದ್ರತೆಯನ್ನು ಬಲಪಡಿಸುವ ಮತ್ತು ಎರಡೂ ದೇಶಗಳ ನಡುವಿನ ದ್ವಿಪಕ್ಷೀಯ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ಗುರಿಯನ್ನು ಹೊಂದಿದೆ.

ಅಬುಧಾಬಿಯಲ್ಲಿ, ಪ್ರಧಾನಿ ಮೋದಿ ಯುಎಇ ಅಧ್ಯಕ್ಷ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರೊಂದಿಗೆ ವ್ಯಾಪಾರ, ಹೂಡಿಕೆ, ಇಂಧನ ಭದ್ರತೆ ಮತ್ತು ಜನರಿಂದ ಜನರಿಗೆ ಸಂಬಂಧಗಳು ಸೇರಿದಂತೆ ಸಹಕಾರದ ಪ್ರಮುಖ



ಕ್ಷೇತ್ರಗಳ ಕುರಿತು ಮಾತುಕತೆ ನಡೆಸಿದರು. ಈ ಸಣ್ಣ ಪ್ರವಾಸದ ಸಮಯದಲ್ಲಿ, ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಮತ್ತು ಕಾರ್ಯತಂತ್ರದ ಪೆಟ್ರೋಲಿಯಂ ನಿಕ್ಷೇಪಗಳ ಕ್ಷೇತ್ರಗಳಲ್ಲಿ ಎರಡು ಪ್ರಮುಖ ತಿಳುವಳಿಕೆ ಒಪ್ಪಂದಗಳನ್ನು (ಎಂಒಯುಗಳು) ತೀರ್ಮಾನಿಸಲಾಗಿದೆ.

ರಕ್ಷಣಾ ಪಾಲು ದಾರಿಕೆಗಾಗಿ ಚೌಕಟ್ಟಿನ ಕುರಿತು ಎರಡೂ ರಾಷ್ಟ್ರಗಳು ಒಪ್ಪಂದಕ್ಕೆ ಬಂದಿವೆ ಮತ್ತು ಗುಜರಾತ್‌ನ ದ್ವಾರಕಾ ಜಿಲ್ಲೆಯ ವಡಿನಾರ್ ಪಟ್ಟಣದಲ್ಲಿ ಹಡಗು ದುರಸ್ತಿ ಕ್ಲಸ್ಟರ್‌ನ್ನು ಸ್ಥಾಪಿಸುವ ಒಪ್ಪಂದಕ್ಕೂ ಉಭಯ ದೇಶಗಳು ಸಹಿ ಹಾಕಿವೆ. ಭಾರತೀಯ ಮೂಲಸೌಕರ್ಯ ಮತ್ತು ಆರ್‌ಬಿಎಲ್ ಬ್ಯಾಂಕ್ ಮತ್ತು ಸಮ್ಮಾನ್ ಕ್ಯಾಪಿಟಲ್‌ನಲ್ಲಿ 5 ಬಿಲಿಯನ್ ಹೂಡಿಕೆ ಯನ್ನು ಸಹ ಇದೇ ದ್ವಿಪಕ್ಷೀಯ ಸಭೆಯಲ್ಲಿ ಘೋಷಿಸಲಾಗಿದೆ.

ಈ ಒಪ್ಪಂದಗಳು ಗಲ್ಫ್ ಪ್ರದೇಶದಲ್ಲಿ ಪ್ರಮುಖ ಪಾಲುದಾರಿಕೆಯಲ್ಲಿ ಒಂದಾದ ನವದೆಹಲಿ ಮತ್ತು ಅಬುಧಾಬಿ ನಡುವಿನ ಕಾರ್ಯತಂತ್ರ ಮತ್ತು ಆರ್ಥಿಕ ಸಂಬಂಧವನ್ನು ಮತ್ತಷ್ಟು ಬಲಪಡಿಸುತ್ತವೆ.ಅಮೆರಿಕ ಮತ್ತು ಇಸ್ರೇಲ್ ಜೊತೆಗಿನ ಯುದ್ಧದ ಮಧ್ಯೆ ಯುಎಇ ಮೇಲೆ ಇರಾನ್ ನಡೆಸಿದ ದಾಳಿಯನ್ನು ಖಂಡಿಸಿದ್ದಾರೆ.

ಕಳೆದ 25 ವರ್ಷಗಳಲ್ಲಿ ಯುಎಇ ಭಾರತದ 3ನೇ ಅತಿದೊಡ್ಡ ವ್ಯಾಪಾರ ಪಾಲುದಾರ ಮತ್ತು ಒಟ್ಟಾರೆಯಾಗಿ ಏಳನೇ ಅತಿದೊಡ್ಡ ಹೂಡಿಕೆಯ ಮೂಲವಾಗಿದೆ. ಯು ಎಇ 4.5 ಮಿಲಿಯನ್‌ಗಿಂತಲೂ ಹೆಚ್ಚು ಭಾರತೀಯ ಸಮುದಾಯ ಹೊಂದಿರುವುದರಿಂದ, ಈ ಭೇಟಿ ಭಾರತೀಯರ ಕಲ್ಯಾಣ ಚರ್ಚಿಸಲು ಒಂದು ಅವಕಾಶವಾಗಿದೆ.

ಮಧ್ಯಪ್ರಾಚ್ಯದಲ್ಲಿನ ಪ್ರಸ್ತುತ ಪ್ರಕ್ಷುಬ್ಧತೆಯ ಮೂಲಕ, ಯುಎಇ ಭಾರತದ ಅತ್ಯಂತ ವಿಶ್ವಾಸಾರ್ಹ ಇಂಧನ ಪಾಲುದಾರರಲ್ಲಿ ಒಂದಾಗಿ ಉಳಿದಿದೆ. ದೀರ್ಘಕಾಲೀನ ಪೂರೈಕೆ ಒಪ್ಪಂದಗಳು ಜಾರಿಯಲ್ಲಿರುವಾಗ, ಭಾರತ ತನ್ನ ಇಂಧನ ಭದ್ರತೆಯನ್ನು ಮತ್ತಷ್ಟು ಬಲಪಡಿಸುತ್ತದೆ.

ಯುಎಸ್-ಇರಾನ್ ಯುದ್ಧದಿಂದಾಗಿ ಇಂಧನ ಬೆಲೆ ಆಘಾತವನ್ನು ತಿಂಗಳುಗಳ ಕಾಲ ತಡೆದುಕೊಂಡಿದ್ದ ಭಾರತ ಅಂತಿಮವಾಗಿ ಪೆಟ್ರೋಲ್ ಮತ್ತು ಡೀಸೆಲ್‌ನ ಚಿಲ್ಲರೆ ಮಾರಾಟದ ಬೆಲೆಗಳನ್ನು ಹೆಚ್ಚಿಸಿದೆ. ಶುಕ್ರವಾರದಿಂದ (ಮೇ 15) ಜಾರಿಗೆ ಬಂದಿರುವ ಈ ಹೆಚ್ಚಳ ಚಿಲ್ಲರೆ ಗ್ರಾಹಕರಿಗೆ ನಾಲ್ಕು ವರ್ಷಗಳಲ್ಲಿ ಮೊದಲನೆಯ ಬೆಲೆ ಏರಿಕೆಯಾಗಿದೆ. ಪೆಟ್ರೋಲ್ ಡೀಸೆಲ್ ಜೊತೆಗೆ ಸಿಎನ್‌ಜಿ ಬೆಲೆಯನ್ನು 2 ರೂ. ನಷ್ಟು ಹೆಚ್ಚಿಸಲಾಗಿದೆ.

### ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆಗೆ ಬೆಂಬಲ

ಅಬುಧಾಬಿ: ಪಶ್ಚಿಮ ಏಷ್ಯಾದಲ್ಲಿ ಶಾಂತಿ ನೆಲೆಸಲು ಭಾರತ ಸಾಧ್ಯವಿರುವ ಎಲ್ಲ ರೀತಿಯ ಬೆಂಬಲ ನೀಡಲು ಸಿದ್ಧವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಹೇಳಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯ ನಡುವೆಯೇ ಗಲ್ಫ್ ರಾಷ್ಟ್ರಕ್ಕೆ ಭೇಟಿ ನೀಡಿರುವ ಪ್ರಧಾನಿ ಮೋದಿ ಅವರು, ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರೊಂದಿಗೆ ಮಾತುಕತೆ ನಡೆಸಿದರು. ಯುಎಇ ಅಧ್ಯಕ್ಷರ ಜೊತೆ ನಡೆದ ಸಭೆಯ ಸಂದರ್ಭದಲ್ಲಿ ಮೋದಿ ತಮ್ಮ ಆರಂಭಿಕ ಭಾಷಣದಲ್ಲಿ, ಯುಎಇ ಮೇಲಿನ ದಾಳಿಗಳನ್ನು ನಾವು ಖಂಡಿಸಿದ್ದೇವೆ ಎಂದು ಹೇಳಿದರು.

ಇರಾನ್, ಯುಎಇಯನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದ್ದು ಸ್ವೀಕಾರಾರ್ಹವಲ್ಲ. ಆದರೆ ಯುಎಇ ಪ್ರಸ್ತುತ ಪರಿಸ್ಥಿತಿಯನ್ನು ಸಂಯಮದಿಂದ ನಿಭಾಯಿಸಿದ ರೀತಿ ಶ್ಲಾಘನೀಯ ಎಂದು ತಿಳಿಸಿದರು.

## ದೃಷ್ಟಿ ಪೂಜೆ



**ಹಾರನಹಳ್ಳಿ;** ಸಮೀಪದ ಗುತ್ತಿನಕೆರೆ ಶ್ರೀ ರಂಗನಾಥಸ್ವಾಮಿ ದೇವಾಲಯದ ಶಕ್ತಿ ದೇವತೆ ಶ್ರೀ ಧೂತರಾಯಸ್ವಾಮಿ, ಚಲುವರಾ ಸ್ವಾಮಿ ದೇವರುಗಳಿಗೆ ಹೊಸದಾಗಿ ಬಣ್ಣ ಹಾಕಿಸಿದ್ದು ದೃಷ್ಟಿ ಪೂಜೆ ನಡೆಯಿತು.

ದೃಷ್ಟಿ ಪೂಜೆ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಬಣ್ಣಗಾರರಾದ ತೊಂಡಿಗನಹಳ್ಳಿ ದಯಾನಂದ್ ಅವರು ದೇವರಿಗೆ ಹೊಸದಾಗಿ ಬಣ್ಣ ಹಾಕಿ ದೃಷ್ಟಿ ನೀಡಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರುಗಳು ಭಾಗವಹಿಸಿದ್ದರು.

ನಾಳೆ ಶನಿವಾರ ಸಂಜೆ 7 ಗಂಟೆಗೆ ಗುತ್ತಿನಕೆರೆ ಗ್ರಾಮದಲ್ಲಿ ಅದ್ದೂರಿ ಉತ್ಸವ ಮತ್ತು ಅನ್ನ ಸಂತರ್ಪಣೆ ಕಾರ್ಯಕ್ರಮಗಳು ನಡೆಯಲಿವೆ.

# ಇಸ್ರೇಲ್-ಕರ್ನಾಟಕ ಮಧ್ಯೆ ಶ್ರಮಶಕ್ತಿ ಒಪ್ಪಂದ

## ಉದ್ಯೋಗ ಸೃಷ್ಟಿಗೆ ಕಾರ್ಮಿಕ ಇಲಾಖೆ ದಿಟ್ಟ ಹೆಜ್ಜೆ | ಆರಂಭಿಕ ಮಾತುಕತೆ ಯಶಸ್ಸು

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದ ಜನರಿಗೆ ವೃತ್ತಿ ಕೌಶಲ ಹಾಗು ಸ್ವಾವಲಂಬಿ ಬದುಕು ಕಟ್ಟಿಕೊಡುವ ನಿಟ್ಟಿನಲ್ಲಿ ಮಹತ್ತರ ಹೆಜ್ಜೆ ಇಟ್ಟಿರುವ ಕಾರ್ಮಿಕ ಇಲಾಖೆ ಇಸ್ರೇಲ್-ಕರ್ನಾಟಕದ ನಡುವೆ ಶ್ರಮಶಕ್ತಿ ಒಪ್ಪಂದಕ್ಕೆ ಮುಂದಾಗಿದೆ.

ಪರಿಣತ ಕಾರ್ಮಿಕರ ಕೊರತೆ ಎದುರಿಸುತ್ತಿರುವ ಮಧ್ಯಪ್ರಾಚ್ಯದ ಕೆಲವು ದೇಶಗಳಲ್ಲಿ ಕೆಲಸ ಮಾಡುವ ಕ್ಷಮತೆಯಿರುವ ರಾಜ್ಯದ ಕಾರ್ಮಿಕರಿಗೆ ಅವಕಾಶ ಕಲ್ಪಿಸುವ ಸಂಬಂಧ ಕಾರ್ಮಿಕ ಸಚಿವ ಸಂತೋಷ್ ಲಾಡ್ ಶುಕ್ರವಾರ ವಿಧಾನಸೌಧದಲ್ಲಿ ಸಭೆ ನಡೆಸಿದರು.

ರಾಜ್ಯದ ಕಟ್ಟಡ ಕಾರ್ಮಿಕರು ಸೇರಿ ವಿವಿಧ ವಲಯಗಳ ಕಾರ್ಮಿಕರಿಗೆ ಇಸ್ರೇಲ್ ಹಾಗು ವಿವಿಧ ಮಧ್ಯಪ್ರಾಚ್ಯ ದೇಶಗಳಲ್ಲಿ ಲಭ್ಯವಿರುವ ಗುತ್ತಿಗೆ ಕೆಲಸಗಳ ಅವಕಾಶಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಈ ಬಗ್ಗೆ ನಡೆದ ಆರಂಭಿಕ ಹಂತದ ಸಭೆ ಇದಾಗಿದ್ದು, ಕಾರ್ಯಸಾಧ್ಯತೆ ಬಗ್ಗೆ ವಿವರವಾದ ವರದಿ ನೀಡುವಂತೆ ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

ಕಾರ್ಮಿಕ ಕಲ್ಯಾಣಕ್ಕಾಗಿ ಸದಾ ಹೊಸದನ್ನೇ ನಾದರೂ ಯೋಚಿಸುವ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು, ಸದ್ಯ ಇಸ್ರೇಲ್ ಸೇರಿ ಇತರ ಮುಂದುವರಿದ ಮಧ್ಯಪ್ರಾಚ್ಯ ದೇಶಗಳಲ್ಲಿ ಕೌಶಲ್ಯಯುತ ಕಾರ್ಮಿಕರಿಗೆ ಭಾರೀ ಬೇಡಿಕೆ ಇದ್ದು, ಅದರಲ್ಲೂ ಕನ್ಸ್ಟ್ರಕ್ಷನ್ ವಲಯದಲ್ಲಂತೂ ನುರಿತ ಕಾರ್ಮಿಕರಿಗೆ ಅಧಿಕ ಬೇಡಿಕೆ ಇರುವುದನ್ನು ಮನಗಂಡು ಇಲ್ಲಿನ ನುರಿತ ಕಟ್ಟಡ ಕಾರ್ಮಿಕರನ್ನು ಇಸ್ರೇಲ್‌ಗೆ ಗುತ್ತಿಗೆ ಆಧಾರದಲ್ಲಿ ಕಳುಹಿಸುವ ಮಹತ್ವದ ಪರಿಕಲ್ಪನೆಯೊಂದಿಗೆ ಮುಂದಡಿಯಿಟ್ಟಿದ್ದಾರೆ.





### ಕಾರ್ಮಿಕರಿಗೆ ಕನಿಷ್ಟ ವೇತನ

ಕಾರ್ಮಿಕರಿಗೆ ಕನಿಷ್ಟ ವೇತನ ನೀಡುವ ಸಂಬಂಧ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು, ವಿಧಾನಸೌಧದ ತಮ್ಮ ಕಚೇರಿಯಲ್ಲಿ ಪ್ರೊ. ಮ್ಯಾಥ್ಯೂ ಮತ್ತು ಕಾರ್ಮಿಕ ಸಂಘಟನೆಗಳ ಪ್ರಮುಖರ ಜೊತೆ ಚರ್ಚೆ ನಡೆಸಿದರು. ಇಲಾಖೆಯ ಕಾರ್ಯದರ್ಶಿ ಸಲ್ಮಾ ಫಹೀಮ್, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಅಭಿವೃದ್ಧಿ ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರವಿ ಡಿ.ಚನ್ನಣ್ಣವರ್, ಜಂಟಿ ಕಾರ್ಮಿಕ ಆಯುಕ್ತ ರವಿಕುಮಾರ್, ಜಂಟಿ ಕಾರ್ಮಿಕ ಆಯುಕ್ತ ಉಮೇಶ್, ಉಪ ಕಾರ್ಮಿಕ ಆಯುಕ್ತ ಜಾನ್ಸನ್ ಮತ್ತಿತರರು ಭಾಗವಹಿಸಿದ್ದರು.

ಕೌಶಲಪೂರ್ಣತೆ, ಅತ್ಯಂತ ಕಡಿಮೆ ಕ್ರೈಮ್ ರೇಟ್, ಬೇರೆ ಪ್ರದೇಶಗಳಲ್ಲಿ ಹೊಂದಿಕೊಂಡು ಕೆಲಸ ಮಾಡುವ ಸ್ವಭಾವ ಹಾಗು ಹಲವು ವಿಷಯಗಳಲ್ಲಿ ರಾಜ್ಯದ ಕಾರ್ಮಿಕ ವರ್ಗಕ್ಕೆ ತನ್ನದೇ ಆದ ಹೆಸರಿದೆ. ಹೀಗಾಗಿ ಬೇಡಿಕೆಯೂ ಸಹಜವಾಗಿದೆ. ಆದರೆ ಮಾಹಿತಿ ಕೊರತೆ, ಏಜೆನ್ಸಿಗಳ ಹಾವಳಿಯಿಂದ ವಿದೇಶಕ್ಕೆ ತೆರಳಿ ಕೆಲಸ ಮಾಡಲು ಕಾರ್ಮಿಕರಿಗೆ ಸಾಧ್ಯವಾಗುತ್ತಿಲ್ಲ. ಈ ಹಿನ್ನಲೆಯಲ್ಲಿ ಸಂತೋಷ್ ಲಾಡ್ ಅವರು ಇಸ್ರೇಲ್ ಕಾನ್ಸುಲೇಟ್ ಅಧಿಕಾರಿಗಳೊಂದಿಗೆ ನಡೆಸಿದ ಆರಂಭಿಕ ಹಂತದ ಸಭೆ ಮಹತ್ವ ಪಡೆದುಕೊಂಡಿದೆ.

ಶ್ರಮಿಕರ ಹಿತಕ್ಕಾಗಿ ಹಲವು ದಿಟ್ಟ ಹೆಜ್ಜೆಗಳನ್ನಿಡುತ್ತಿರುವ ಸಚಿವ ಸಂತೋಷ್ ಲಾಡ್ ಅವರು, ಈ ಹೊಸ ಪರಿಕಲ್ಪನೆಯನ್ನು ಹೇಗೆ ಕಾರ್ಯರೂಪಕ್ಕೆ ತರಲಿದ್ದಾರೆಂಬುದನ್ನು ಕಾದು ನೋಡಬೇಕಿದೆ.

# ಪತ್ನಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಪತಿ

• ಪ್ರಜೋದಯ ವರದಿ

**ಹಾಸನ:** ವರದಕ್ಷಿಣೆ ಕಿರುಕುಳ ಹಾಗು ಮಾನಸಿಕ ಹಿಂಸೆಯಿಂದ ತವರು ಮನೆಯಲ್ಲಿದ್ದ ಪತ್ನಿಯನ್ನು ನಂಬಿಸಿ ಕರೆದೊಯ್ದ ಪತಿ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ನಗರ ಹೊರ ವಲಯದ ಕೈಗಾರಿಕಾ ಪ್ರದೇಶದಲ್ಲಿ ನಡೆದಿದೆ.

ನಗರ ಹೊರವಲಯದ ಗವೇನ ಹಳ್ಳಿಯ ರೋಜಾ ಎಂಬುವವರ ಮೇಲೆ ಪತಿ ಉಮೇಶ ಹಲ್ಲೆ ಮಾಡಿದ್ದಾನೆ. ಜೋಡಿಕೃಷ್ಣಾಪುರದ ಉಮೇಶ ಜೊತೆಗೆ ಎಂಟು ವರ್ಷಗಳ ಹಿಂದೆ ಮದುವೆ ಮಾಡಿಕೊಡಲಾಗಿತ್ತು. ದಂಪತಿಗೆ ಗಂಡು ಮಗ ಇದ್ದಾನೆ. ಆರಂಭದ ನಾಲ್ಕು ವರ್ಷ ದಾಂಪತ್ಯ ಜೀವನ ಚೆನ್ನಾಗಿಯೇ ಇತ್ತಾದರೂ ಇತ್ತೀಚಿನ ವರ್ಷಗಳಲ್ಲಿ ಕ್ಷುಲ್ಲಕ ಕಾರಣಕ್ಕೆ ಜಗಳವಾಡುತ್ತಿದ್ದರು ಎನ್ನಲಾಗಿದೆ.



ಲಾರಿ ಚಾಲಕನಾಗಿ ಕೆಲಸ ಮಾಡುತ್ತಿರುವ ಉಮೇಶ, ಮದುವೆ ವೇಳೆ ನಿಮ್ಮ ಮನೆಯವರು ಏನೂ ಕೊಟ್ಟಿಲ್ಲ. ಈಗ ವರದಕ್ಷಿಣೆ ತರುವಂತೆ ಪತ್ನಿಗೆ ಕಿರುಕುಳ ನೀಡುತ್ತಿದ್ದ. ಅಲ್ಲದೆ ಪತ್ನಿಯ ಮೇಲೆ ಅನು ಮಾನ ಪಡುತ್ತಿದ್ದ ಎನ್ನಲಾಗಿದೆ. ಸಣ್ಣ ಪುಟ್ಟ ಕಾರಣಕ್ಕೂ ಇಬ್ಬರ ನಡುವೆ ಜಗಳ ನಡೆಯುತ್ತಿತ್ತು. ಅದರಿಂದ ರೋಸಿ ಹೋದ ರೋಜಾ ಒಂದು ವರ್ಷದ ಹಿಂದೆ ತವರು ಮನೆ ಸೇರಿದ್ದಳು. ಜೀವನೋಪಾಯಕ್ಕಾಗಿ ನಗರದ ಕೈಗಾರಿಕಾ ಪ್ರದೇಶದ ಫ್ಯಾಕ್ಟರಿ ಯೊಂದರಲ್ಲಿ ಕೆಲಸ ಮಾಡಿಕೊಂಡಿದ್ದರು. ಏನೋ ಮಾತನಾಡಬೇಕೆಂದು ಫ್ಯಾಕ್ಟರಿ ಬಳಿ ಬಂದು ಪತ್ನಿಯನ್ನು ಕರೆದುಕೊಂಡು ಹೋದ ಉಮೇಶ ಚಾಕುವಿನಿಂದ ಮನಬಂದಂತೆ ದೇಹದ ವಿವಿಧ ಭಾಗಗಳಿಗೆ ಚುಚ್ಚಿ ಕ್ರೌರ್ಯ ಮೆರೆದಿದ್ದಾನೆ.

ತಲೆ, ಎದೆಭಾಗ ಸೇರಿ ಅನೇಕ ಕಡೆಗಳಿಗೆ ಇರಿದಿದ್ದಾನೆ. ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಏಷ್ಯಾ ಬಿಕ್ಕಟ್ಟು ಸೇರಿ ಹಲವು ವಿಚಾರದ ಬಗ್ಗೆ ಜೈಶಂಕರ್-ಅರಾಘ್ಚಿ ಮಾತುಕತೆ




• ಪ್ರಜೋದಯ ವರದಿ

**ನವದೆಹಲಿ:** ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಮತ್ತು ಇರಾನ್ ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಘ್ಚಿ ಅವರು ಶುಕ್ರವಾರ ದೆಹಲಿಯಲ್ಲಿ ಸುದೀರ್ಘ ಮಾತುಕತೆ ನಡೆಸಿದರು. ಈ ವೇಳೆ ಪಶ್ಚಿಮ ಏಷ್ಯಾದಲ್ಲಿನ ಪ್ರಸ್ತುತ ಬಿಕ್ಕಟ್ಟು, ಇಂಧನ ಪೂರೈಕೆ ಮೇಲಾಗುತ್ತಿರುವ ಪರಿಣಾಮ ಮತ್ತು ಕಡಲ ಭದ್ರತೆಯ ಕುರಿತು ಉಭಯ ನಾಯಕರು ಗಂಭೀರವಾಗಿ ಚರ್ಚಿಸಿದರು.

ಬ್ರಿಕ್ಸ್ ವಿದೇಶಾಂಗ ಸಚಿವರ ಸಭೆಯಲ್ಲಿ ಪಾಲ್ಗೊಳ್ಳಲು ಅರಾಘ್ಚಿ ಅವರು ಮೂರು ದಿನಗಳ ಪ್ರವಾಸಕ್ಕಾಗಿ ಭಾರತಕ್ಕೆ ಆಗಮಿಸಿದ್ದಾರೆ. ಇನ್ನು, ಅರಾಘ್ಚಿ ಅವರೊಂದಿಗೆ ಮಾತುಕತೆಯ ನಂತರ ಸಾಮಾಜಿಕ ಮಾಧ್ಯಮ ವೇದಿಕೆ ಎಕ್ಸ್‌ನಲ್ಲಿ ಜೈಶಂಕರ್ ಮಾಹಿತಿ ಹಂಚಿಕೊಂಡಿದ್ದಾರೆ.

ಇಂದು ಬೆಳಿಗ್ಗೆ ದೆಹಲಿಯಲ್ಲಿ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರೊಂದಿಗೆ ಸಂಕ್ಷಿಪ್ತವಾದ ಸಂಭಾಷಣೆ ನಡೆಸಿದೆ. ಪಶ್ಚಿಮ ಏಷ್ಯಾದ ಪರಿಸ್ಥಿತಿ ಮತ್ತು ಅದರ ಪರಿಣಾಮಗಳ ಬಗ್ಗೆ ಚರ್ಚಿಸಲಾಯಿತು. ಅದರ ಜೊತೆಗೆ ಪರಸ್ಪರ ದ್ವಿಪಕ್ಷೀಯ ವಿಷಯಗಳ ಬಗ್ಗೆಯೂ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆಂದು ತಿಳಿಸಿದ್ದಾರೆ. ಬ್ರಿಕ್ಸ್ ವಿದೇಶಾಂಗ ಸಚಿವರ ಸಭೆಯಲ್ಲಿ ಪಾಲ್ಗೊಂಡಿದ್ದಕ್ಕಾಗಿ ಇರಾನ್ ಸಚಿವರಿಗೆ ಜೈಶಂಕರ್ ಅವರು ಧನ್ಯವಾದ ಅರ್ಪಿಸಿದರು.

# ಹಾರನಹಳ್ಳಿಯಲ್ಲಿ ಆರೋಗ್ಯ ತಪಾಸಣಾ ಶಿಬಿರ



• ಪ್ರಜೋದಯ ವರದಿ

**ಹಾರನಹಳ್ಳಿ:** ಶ್ರೀಮದ್ ರಾಜಚಂದ್ರ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದ ಸಹಯೋಗದಲ್ಲಿ ಹಾರನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯದ ಮುಂಭಾಗದಲ್ಲಿ ಆರೋಗ್ಯ ತಪಾಸಣಾ ಉಚಿತ ಶಿಬಿರ ನಡೆಯಿತು.

ಶಿಬಿರದ ಜಿಲ್ಲಾ ಸಂಯೋಜಕ ನವೀನ್ ಅವರು ಮಾತನಾಡಿ, ಗ್ರಾಮೀಣ ಭಾಗಗಳಲ್ಲಿ ಆರೋಗ್ಯ ಶಿಬಿರಗಳನ್ನು ಆಯೋಜಿಸುವುದರಿಂದ ಪ್ರಾಥಮಿಕ ಹಂತದಲ್ಲೇ ಕಾಯಿಲೆಗಳನ್ನು ಗುರುತಿಸಿ, ಅವು ಉಲ್ಬಣಗೊಳ್ಳುವ ಮುನ್ನವೇ ಚಿಕಿತ್ಸೆ ನೀಡಲು ಸಾಧ್ಯವಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಒಟ್ಟು 13 ಆರೋಗ್ಯ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಬೆಂಗಳೂರು ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಯ ಉದಯ್ ಮಾತನಾಡಿ, ಗ್ರಾಮೀಣ ಪ್ರದೇಶದ ಜನರು ನಿಯಮಿತವಾಗಿ ಬಿಪಿ, ಶುಗರ್ ತಪಾಸಣೆ ಮಾಡಿಸಿ ಕೊಳ್ಳುವುದರಿಂದ ಆರೋಗ್ಯದ ಸ್ಥಿತಿಗತಿಗಳನ್ನು ತಿಳಿದುಕೊಂಡು ಸೂಕ್ತ ಚಿಕಿತ್ಸೆ ಪಡೆಯ ಬಹುದು.

ಗ್ರಾಮೀಣ ಜನರಲ್ಲಿ ಆರೋಗ್ಯ ಜಾಗೃತಿ ಮೂಡಿಸಲು ಉಚಿತ ಆರೋಗ್ಯ ಶಿಬಿರಗಳು ಸಹಕಾರಿಯಾಗುತ್ತವೆ. ರೈತರು, ಮಹಿಳೆಯರು ಹಾಗು ಗ್ರಾಮಸ್ಥರು ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ತೋರದೆ ತಜ್ಞ ವೈದ್ಯರನ್ನು ಸಂಪರ್ಕಿಸಿ ಶಿಬಿರದ ಸದುಪಯೋಗ ಪಡೆಯಬೇಕೆಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಜೈನ್ ಆಸ್ಪತ್ರೆಯ ವತಿಯಿಂದ ಕಂಪ್ಯೂಟರ್ ಮೂಲಕ ಪಾದ ತಪಾಸಣೆ ನಡೆಸಲಾಯಿತು. ಹರ್ಷಿತಾ, ನವ್ಯಾ, ಪ್ರಿಯಾ, ಆಶಾ ಆರೋಗ್ಯ ಇಲಾಖೆಯ ಸಿಬ್ಬಂದಿ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯರು, ಗ್ರಾಮದ ಪ್ರಮುಖರು ಉಪಸ್ಥಿತರಿದ್ದರು.

# ನಂದಿಗ್ರಾಮ ವಿಧಾನಸಭಾ ಕ್ಷೇತ್ರಕ್ಕೆ ಸಿ.ಎಂ. ಸುವೇಂದು ಅಧಿಕಾರಿ ರಾಜೀನಾಮೆ

• ಪ್ರಜೋದಯ ವರದಿ

**ಕೋಲ್ಕತ್ತಾ:** ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ಶುಕ್ರವಾರ ನಂದಿಗ್ರಾಮ ವಿಧಾನಸಭಾ ಕ್ಷೇತ್ರಕ್ಕೆ ರಾಜೀನಾಮೆ ನೀಡಿದ್ದು, ಭವಾನಿಪುರ ಕ್ಷೇತ್ರವನ್ನು ಉಳಿಸಿ ಕೊಳ್ಳಲು ನಿರ್ಧರಿಸಿದ್ದಾರೆ.

ವಿಧಾನಸಭೆಯ ನಿಯಮಗಳ ಪ್ರಕಾರ ನಿಗದಿಪಡಿಸಲಾದ ಕಡ್ಡಾಯ 14 ದಿನಗಳ ಅವಧಿ ಯೊಳಗೆ ಅಧಿಕಾರಿ ಅವರು ರಾಜೀನಾಮೆಯನ್ನು ಸಭಾಪತಿ ರತೀಂದ್ರ ಬೋಸ್ ಅವರಿಗೆ ಸಲ್ಲಿಸಿ ದ್ದಾರೆಂದು ಮೂಲಗಳು ತಿಳಿಸಿವೆ. ಈಚೆಗೆ ನಡೆದ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಸುವೇಂದು ಅಧಿಕಾರಿ ಅವರು ಪೂರ್ವ ಮೇದಿನಿಪುರ ಜಿಲ್ಲೆಯ ನಂದಿಗ್ರಾಮ ಮತ್ತು ದಕ್ಷಿಣ ಕೋಲ್ಕತ್ತಾದ ಭವಾನಿಪುರ ಎರಡೂ ಕ್ಷೇತ್ರಗಳಿಂದ ಸ್ಪರ್ಧಿಸಿದ್ದರು. ನಂದಿಗ್ರಾಮ ಕ್ಷೇತ್ರದಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷದ (ಟಿಎಂಸಿ) ಅಭ್ಯರ್ಥಿ ಪವಿತ್ರಕರ್ ವಿರುದ್ಧ 9,665 ಮತಗಳ ಅಂತರದಿಂದ ಅಧಿಕಾರಿ ಗೆಲುವು ಸಾಧಿಸಿದ್ದರು. ಭವಾನಿಪುರ ಕ್ಷೇತ್ರದಲ್ಲಿ ಟಿಎಂಸಿ ಮುಖ್ಯಸ್ಥೆ, ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ 15,105 ಮತಗಳ ಅಂತರದಿಂದ ಅಧಿಕಾರಿ ಗೆಲುವಿನ ನಗೆ ಬೀರಿದ್ದರು. ಪಶ್ಚಿಮ ಬಂಗಾಳ ವಿಧಾನಸಭೆಯ ಒಟ್ಟು 294 ಸ್ಥಾನಗಳಲ್ಲಿ ಬಿಜೆಪಿಯು 207 ಸ್ಥಾನಗಳನ್ನು ಗೆದ್ದಿದ್ದು, 15 ವರ್ಷಗಳ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಆಡಳಿತವನ್ನು ಬದಿಗೆ ಸರಿಸಿ, ಮೊದಲ ಬಾರಿ ಆಡಳಿತದ ಚುಕ್ಕಾಣಿ ಹಿಡಿದಿದೆ.



# ಉತ್ತರ ಪ್ರದೇಶದಲ್ಲಿ ಭಾರೀ ಮಳೆಗೆ 142 ಜನರ ಸಾವು

• ಪ್ರಜೋದಯ ವರದಿ



**ಲಖನೌ:** ಉತ್ತರ ಪ್ರದೇಶದಾದ್ಯಂತ ಸಂಭವಿಸಿದ ಭೀಕರ ಚಂಡಮಾರುತ ಮತ್ತು ಮಳೆ ಸಂಬಂಧಿತ ಅವಘಡಗಳಲ್ಲಿ ಮೃತಪಟ್ಟವರ ಸಂಖ್ಯೆ 142ಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದ ಪೂರ್ವ ಮತ್ತು ಮಧ್ಯ ಭಾಗದ ಜಿಲ್ಲೆಗಳಲ್ಲಿ ಬುಧವಾರ ಚಂಡಮಾರುತ ಅಪ್ಪಳಿಸಿತ್ತು. ಅದರಿಂದ ಅಪಾರ ಪ್ರಮಾಣದ ಬೆಳೆ ನಷ್ಟವಾಗಿದ್ದು, ಜಾನುವಾರುಗಳ ಸಾವಿಗೂ ಕಾರಣವಾಗಿದೆ. ವಾರಾಣಸಿ, ಪ್ರಯಾಗ್‌ರಾಜ್ ಮತ್ತು ಕಾನ್ಪುರ ಜಿಲ್ಲೆಗಳು ಅತಿ ಹೆಚ್ಚು ಹಾನಿ ಗೊಳಗಾಗಿದ್ದು, ಹೆಚ್ಚಿನ ಸಾವು-ನೋವು ವರದಿಯಾಗಿದೆ. ಗೋಡೆ ಕುಸಿತದಂತಹ ಘಟನೆಗಳಿಂದಲೇ ಹೆಚ್ಚಿನ ಜನರು ಪ್ರಾಣ ಕಳೆದುಕೊಂಡಿದ್ದಾರೆಂದು ತಿಳಿದುಬಂದಿದೆ.

ರಾಜ್ಯ ಸರ್ಕಾರವು ಈಗಾಗಲೇ ಸಂಕಷ್ಟ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾರ್ಯಾಚರಣೆ ಪ್ರಾರಂಭಿಸಿದೆ. ಆಸ್ತಿ-ಪಾಸ್ತಿ ಹಾನಿ ಮತ್ತು ಜಾನುವಾರುಗಳ ನಷ್ಟವನ್ನು ಅಂದಾಜು ಮಾಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ.

**ಪರಿಹಾರ ಘೋಷಣೆ:** ಮೃತರ ಕುಟುಂಬದವರಿಗೆ ತಲಾ 4 ಲಕ್ಷ ರೂ. ತುರ್ತು ಪರಿಹಾರವನ್ನು ಸರ್ಕಾರ ಘೋಷಿಸಿದೆ. ಸಂಕಷ್ಟಕ್ಕೊಳಗಾದ ರೈತರಿಗೆ ಮತ್ತು ಇತರರಿಗೆ ತಕ್ಷಣ ನೆರವು ನೀಡಲು ಅಧಿಕಾರಿ ಗಳಿಗೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ನಿರ್ದೇಶನ ನೀಡಿದ್ದಾರೆ. ಮಳೆ ಯಿಂದ ಶೇ.33ಕ್ಕಿಂತ ಹೆಚ್ಚಿನ ಪ್ರಮಾಣದ ಬೆಳೆ ಹಾನಿಗೊಳಗಾದ ರೈತರಿಗೆ ಪರಿಹಾರ ನೀಡ ಲಾಗುವುದು. ಜಾನುವಾರುಗಳನ್ನು ಕಳೆದುಕೊಂಡವರಿಗೂ ಆರ್ಥಿಕ ನೆರವು ಒದಗಿಸಲಾಗುವುದೆಂದು ತಿಳಿಸಿದ್ದಾರೆ.

# 155 ಗ್ರಾಂ ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಬೇಲೂರು:** ಆಟೋದಲ್ಲಿ ಇಟ್ಟಿದ್ದ ವ್ಯಾನಿಟಿ ಬ್ಯಾಗ್‌ನಿಂದ 115 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ಮಾದಿಹಳ್ಳಿ ಹೋಬಳಿ ರಾಮಚಂದ್ರಾಪುರ ಗ್ರಾಮದ ಗೌರಮ್ಮ ಆಭರಣ ಕಳೆದುಕೊಂಡವರು. ಗುರುವಾರ ಸಾರಿಗೆ ಬಸ್‌ನಲ್ಲಿ ಬೇಲೂರಿಗೆ ಬಂದಿದ್ದ ಅವರು ತಟ್ಟೆಕೆರೆಗೆ ಹೋಗಲು ವಾಹನಕ್ಕಾಗಿ ಕಾದು ಕುಳಿತಿದ್ದರು. ಈ ವೇಳೆ ಗೌರಮ್ಮ ಅವರ ತಮ್ಮನ ಹೆಂಡತಿ ವೀಣಾ, ತಮ್ಮನ ಮಗಳು ವಿದ್ಯಾಶ್ರೀ, ಸೊದರತ್ತೆ ಸಾವಿತ್ರಮ್ಮ ಅವರು ಬಂದಿದ್ದು ಊಟದ ಸಮಯವಾದ್ದರಿಂದ ಎಲ್ಲರೂ ಸಮೀಪದ ಹೋಟೆಲ್‌ಗೆ ತೆರಳಿದ್ದಾರೆ. ಆಗ ಗೌರಮ್ಮ ಚಿನ್ನಾಭರಣವಿದ್ದ ವ್ಯಾನಿಟಿ ಬ್ಯಾಗ್ ಅನ್ನು ಸಹೋದರ ಚಿನ್ನೋಜಿರಾವ್‌ಗೆ ಕೊಟ್ಟು ಹೋಗಿದ್ದರು. ವಾಪಾಸ್ ಬರುವಷ್ಟರಲ್ಲಿ ವ್ಯಾನಿಟಿ ಬ್ಯಾಗ್ ಅನ್ನು ಆತ ಆಟೋದಲ್ಲಿ ಸೀಟು ಹಿಡಿಯಲೆಂದು ಇಟ್ಟಿದ್ದ ಎನ್ನಲಾಗಿದೆ. ಗೌರಮ್ಮ ಅವರು ಸೀಟು ಸಿಕ್ಕಿತೆಂದು ಆಟೋ ಹತ್ತಿ ಬ್ಯಾಗ್ ಪರಿಶೀಲಿಸಿದಾಗ 35 ಗ್ರಾಂ ತೂಕದ ನೆಕ್ಲೇಸ್, 25 ಗ್ರಾಂ ಕೊರಳಿನ ಚೈನ್, 25 ಗ್ರಾಂ ತೂಕದ ಗುಂಡಿನ ಸರ, 10 ಗ್ರಾಂನ ಓಲೆ, 20 ಗ್ರಾಂನ ಉಂಗುರ, 5 ಗ್ರಾಂ ಕಿವಿಯೊಲೆ, 10 ಗ್ರಾಂ ತೂಕದ ದಹ್ಯಾಂಗಿಂಗ್ಸ್ ಕಳುವಾಗಿದ್ದು ಒಟ್ಟು ಚಿನ್ನದ ಅಂದಾಜು ಮೌಲ್ಯ 25 ರಿಂದ 30 ಲಕ್ಷ ರೂ. ಆಗಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕಣ್ಣಿನ ಆರೈಕೆಗೆ ಜಾಗ್ರತೆ ವಹಿಸಿ: ಎ.ಟಿ.ರಾಮಸ್ವಾಮಿ

• ಪ್ರಜೋದಯ ವರದಿ



**ರಾಮನಾಥಪುರ:** ಮಾನವನ ಜೀವನದಲ್ಲಿ ಕಣ್ಣಿನ ಆರೋಗ್ಯ ಅತ್ಯಂತ ಮಹತ್ವದ್ದಾಗಿದ್ದು, ಪ್ರತಿಯೊಬ್ಬರೂ ಕಣ್ಣಿನ ಆರೈಕೆಯಲ್ಲಿ ಹೆಚ್ಚಿನ ಜಾಗ್ರತೆ ವಹಿಸಬೇಕೆಂದು ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಅವರು ಹೇಳಿದರು.

ರಾಮನಾಥಪುರದ ಭಾಗ್ಯಶ್ರೀ ಕಲ್ಯಾಣ ಮಂಟಪದಲ್ಲಿ ತಾಲ್ಲೂಕು ಸ್ವಸ್ಥ ಸಮಾಜ ನಿರ್ಮಾಣ ಸಮಿತಿ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಉಚಿತ ಕಣ್ಣಿನ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ನಿಖರವಾದ ಪೌಷ್ಟಿಕ ಆಹಾರ ಸೇವಿಸುವುದರ ಜೊತೆಗೆ ನಿಗದಿತ ಸಮಯಕ್ಕೆ ಸರಿಯಾಗಿ ಕಣ್ಣಿನ ಪರೀಕ್ಷೆಗಳನ್ನು ಮಾಡಿಸಿಕೊಳ್ಳುವ ಮೂಲಕ ಕಣ್ಣಿನ ರಕ್ಷಣೆಯನ್ನು ಮಾಡಿಕೊಳ್ಳಬೇಕೆಂದು ಸಲಹೆ ನೀಡಿದರು.

ಸ್ವಸ್ಥ ಸಮಾಜ ನಿರ್ಮಾಣ ಸಮಿತಿ ಅಧ್ಯಕ್ಷ ಪ್ರದೀಪ್ ರಾಮಸ್ವಾಮಿ ನೇತೃತ್ವದಲ್ಲಿ ಹಾಗು ಅರವಿಂದ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಶಿಬಿರವನ್ನು ಆಯೋಜಿಸಲಾಗಿತ್ತು. ಆಶಾರಾಣಿ ರಾಮಸ್ವಾಮಿ, ಡಾ.ವಿಜಯಕಾಂತ್, ಮುಖಂಡರಾದ ಶ್ರೀನಿಧಿ, ಕೃಷ್ಣೇಗೌಡ, ವಿರೂಪಾಕ್ಷ, ವೆಂಕಟೇಶ್, ಬಿ.ಸಿ. ವೀರೇಶ್, ಕಾಳೇಗೌಡರು, ಸಿದ್ದರಾಮು, ಪಾಂಡು, ದಿವಾಕರ್, ಸ್ವಾಮಿಗೌಡರು ಉಪಸ್ಥಿತರಿದ್ದರು.

# ಅಂತಾರಾಷ್ಟ್ರೀಯ ವೈಜ್ಞಾನಿಕ ಸಮ್ಮೇಳನ: ಜಿಲ್ಲೆಯ ಐವರು ಭಾಗಿ




• ಪ್ರಜೋದಯ ವರದಿ

**ಹಾಸನ:** ರಾಜ್ಯ ವೈಜ್ಞಾನಿಕ ಸಂಶೋ ಧನಾ ಪರಿಷತ್ ವತಿಯಿಂದ ಮೇ 17 ರಿಂದ 22ರ ವರೆಗೆ ನಡೆಯಲಿರುವ ಇಂಡೋ-ವಿಯೆಟ್ನಾಂ ಅಂತಾರಾಷ್ಟ್ರೀಯ ವೈಜ್ಞಾನಿಕ ಸಮ್ಮೇಳನದಲ್ಲಿ ಜಿಲ್ಲೆಯ ಐವರು ಪಾಲ್ಗೊಳ್ಳಲಿದ್ದಾರೆಂದು ಪರಿಷತ್ ಜಿಲ್ಲಾಧ್ಯಕ್ಷ ರವಿ ನಾಕಲಗೂಡು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ವಿಯೆಟ್ನಾಂನಲ್ಲಿ ಸೈಂಟಿಫಿಕ್ ಸಮ್ಮಿಟ್ ಫೆಲೋಶಿಫ್ ನಡೆಯಲಿದೆ. ಭಾರತ ಸೇವಾದಳದ ವಲಯ ಸಂಘಟಕಿ ವಿ.ಎಸ್.ರಾಣಿ, ಹಿಮ್ಸ್‌ನ ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ನಿಚಿತಾ ಕುಮಾರಿ, ರೋಟರಿ ಕ್ಲಬ್ ಜೋನ್-9 ವಲಯ ಸೇನಾನಿ ಮಮತಾ ಪಾಟೀಲ್, ಸರ್ಕಾರಿ ಶುಶ್ರೂಷಕ ಕಾಲೇಜಿನ ನಿವೃತ್ತ ಪ್ರಾಧ್ಯಾಪಕಿ ಜಯಮ್ಮ ಹಾಗು ರಾಜೀವ್ ಶಿಕ್ಷಣ ಸಂಸ್ಥೆಯ ನಿವೃತ್ತ ಆಡಳಿತಾಧಿಕಾರಿ ಕೆ.ನಾಗೇಶ್ ಆಚಾರ್ ಅವರು ಭಾಗವಹಿಸಿ ಪ್ರಶಸ್ತಿ ಸ್ವೀಕರಿಸಲಿದ್ದಾರೆಂದರು.

ಹುಲಿಕಲ್ ನಟರಾಜ್ ಅವರು ಸ್ಥಾಪಿಸಿರುವ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ಈ ರೀತಿಯ ಹತ್ತು ಹಲವು ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡುತ್ತಿದ್ದು, ವಿಯೆಟ್ನಾಂ ಪ್ರವಾಸ ಕೈಗೊಳ್ಳುತ್ತಿರುವ ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು.

ಸುದ್ದಿಗೋಷ್ಠಿಯಲ್ಲಿ ವಿ.ಎಸ್.ರಾಣಿ, ಧನಲಕ್ಷ್ಮಿ, ಮಮತಾ ಪಾಟೀಲ್, ಕತ್ತಿಮಲ್ಲೇನಹಳ್ಳಿ ಪರಮೇಶ್, ನಾಗೇಶ್ ಇದ್ದರು.

# 121 ಗ್ರಾಂ ತೂಕದ ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಹಾಸನ:** ಕಾರಿನಲ್ಲಿಟ್ಟಿದ್ದ ಸುಮಾರು 121 ಗ್ರಾಂ ತೂಕದ ಚಿನ್ನಾಭರಣ ಕಳುವಾ ಗಿರುವ ಘಟನೆ ನಗರದ ಗೋಮತಿ ಕಲ್ಯಾಣ ಮಂಟಪ ಸಮೀಪ ಇತ್ತೀಚೆಗೆ ನಡೆದಿದೆ.

ಬೆಂಗಳೂರಿನ ಆನೆಕಲ್ ತಾಲ್ಲೂಕು ಜಿಗಣಿಯ ಮಂಜು ಸಿಂಗ್ ಅವರಿಗೆ ಸೇರಿದ ಆಭರಣ ಕಳುವಾಗಿದೆ. ಸಂಬಂಧಿಕರ ಮದುವೆ ನಿಮಿತ್ತ ಮಂಜು ಸಿಂಗ್ ಕುಟುಂಬ ಸಮೇತ ಮೇ 5 ರಂದು ಹಾಸನಕ್ಕೆ ಬಂದಿದ್ದರು. ನಗರದ ಲಾಡ್ಜ್‌ವೊಂದರಲ್ಲಿ ಉಳಿದಿಕೊಂಡಿದ್ದ ಕುಟುಂಬಸ್ಥರು ಮದುವೆ ಕಾರ್ಯಕ್ರಮ ಮುಗಿದ ಬಳಿಕ ಮೇ 7ರಂದು ಸಂಬಂಧಿಕರಾದ ಅಭಿಜಿತ್ ಅವರ ಮನೆಯಲ್ಲಿ ಸತ್ಯನಾರಾಯಣ ಪೂಜೆಗೆ ತೆರಳಿದ್ದರು. 30 ಗ್ರಾಂ ತೂಕದ ಮಾಂಗಲ್ಯದ ಸರ, 50 ಗ್ರಾಂ ತೂಕದ ಚಿನ್ನದ ನೆಕ್ಲೆಸ್ ಮತ್ತು ಚಿನ್ನದ ಓಲೆ, 36 ಗ್ರಾಂ ತೂಕದ 4 ಚಿನ್ನದ ಉಂಗುರ, 20 ಗ್ರಾಂ ತೂಕದ ಮೋಹನ್ ಮಾಲೆ, 5 ಗ್ರಾಂ ತೂಕದ ಚಿನ್ನದ ಮೂಗುತಿ, 10.5 ಗ್ರಾಂ ತೂಕದ ಚಿನ್ನದ ಮಾಟಿಯನ್ನು ಬ್ಯಾಗ್‌ನಲ್ಲಿಟ್ಟು ಕಾರನ್ನು ಲಾಕ್ ಮಾಡಿ ಪೂಜೆಗೆಂದು ತೆರಳಿದ್ದರು. ಮಧ್ಯಾಹ್ನ 3ರ ಸಮಯದಲ್ಲಿ ಮಾತ್ರೆ ಸೇವಿಸಲೆಂದು ಮಂಜು ಸಿಂಗ್ ಕಾರಿನ ಬಳಿ ಬಂದಾಗ ಬ್ಯಾಗ್ ನಾಪತ್ತೆಯಾಗಿರುವುದು ತಿಳಿದಿದೆ. ಎಷ್ಟೇ ಹುಡುಕಾಡಿದರೂ ಸಿಗದ ಹಿನ್ನಲೆಯಲ್ಲಿ ಬಡಾವಣೆ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

# ನಾಳೆ ನಗರದಲ್ಲಿ ಶ್ರೀ ಗುರು ಸಿದ್ದರಾಮೋತ್ಸವ

• ಪ್ರಜೋದಯ ವರದಿ




**ಹಾಸನ:** ಅರಸೀಕೆರೆ ತಾಲ್ಲೂಕು ದೊಡ್ಡೇನಹಳ್ಳಿಯಲ್ಲಿ ನೆಲೆಸಿರುವ ಶ್ರೀ ಗುರು ಸಿದ್ದರಾಮೇಶ್ವರ ಸ್ವಾಮಿಯ ಪ್ರಥಮ ವರ್ಷದ ಸಿದ್ದರಾಮೋತ್ಸವ ಮೇ 17 ರಂದು ನಗರದಲ್ಲಿ ನಡೆಯಲಿದೆ ಎಂದು ಅಖಿಲ ಭಾರತ ಲಿಂಗಾಯತ-ವೀರಶೈವ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್ ಅವರು ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮೇಶ್ವರಸ್ವಾಮಿಯ ಉತ್ಸವ ಇದೇ ಮೊದಲ ಬಾರಿಗೆ ನಗರದಲ್ಲಿ ನಡೆಯುತ್ತಿದೆ. ಭಾನುವಾರ ಬೆಳಿಗ್ಗೆ 11 ಗಂಟೆಗೆ ನಗರಕ್ಕೆ ಸ್ವಾಮಿಯ ಆಗಮನವಾಗಲಿದ್ದು, ನಗರದ ಅಧಿದೇವತೆ ಹಾಸನಾಂಬ ದೇವಾಲಯ ಆವರಣಕ್ಕೆ ಬರಲಿದೆ ಎಂದು ಹೇಳಿದರು.

ಮಧ್ಯಾಹ್ನ 1 ಗಂಟೆಗೆ ಸಿದ್ದೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಸ್ವಾಮಿಗೆ ಮಹಾ ರುದ್ರಾಭಿಷೇಕ, ಶಿವಾಷ್ಟೋತ್ತರ, ಬಿಲ್ವಾರ್ಚನೆ, ಮಹಾ ಮಂಗಳಾರತಿ ನಡೆಯಲಿದೆ. ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ನಡೆಯಲಿದೆ. ಸಂಜೆ 4.30 ರಿಂದ ದೊಡ್ಡೇನಹಳ್ಳಿ ವೀರಭದ್ರೇಶ್ವರ ಸ್ವಾಮಿಯ ಪೂಜಾ ಕುಣಿತ, ವೀರಗಾಸೆ, ನಂದಿಧ್ವಜ, ಮದ್ದುಗುಂಡಿನ ಪ್ರದರ್ಶನದೊಂದಿಗೆ ಸ್ವಾಮಿಯವರ ಅದ್ದೂರಿ ಅಡ್ಡಪಲ್ಲಕ್ಕಿ ಉತ್ಸವ ಜರುಗಲಿದೆ ಎಂದು ಮಾಹಿತಿ ನೀಡಿದರು.

ಹಾಸನಾಂಬ-ಸಿದ್ದೇಶ್ವರ ದೇವಾಲಯದ ಅರ್ಚಕರು ಹಾಗು ಭಕ್ತಾದಿಗಳ ಸಹಕಾರದೊಂದಿಗೆ ಉತ್ಸವ ಹಾಸನಾಂಬ ದೇವಾಲಯದಿಂದ ಆರಂಭವಾಗಿ ಅರಳೇಪೇಟೆ, ಸಹ್ಯಾದ್ರಿ ರಸ್ತೆ ಮಾರ್ಗವಾಗಿ ಮಹಾವೀರ ವೃತ್ತ, ಅಲ್ಲಿಂದ ದೇವಿಗೆರೆ ವೃತ್ತ ತಲುಪಲಿದೆ. ಭಕ್ತರ ಅಪೇಕ್ಷೆ ಮೇರೆಗೆ ನಗರದಲ್ಲಿ ಮೊದಲ ಬಾರಿಗೆ ಈ ಉತ್ಸವ ಜರುಗುತ್ತಿದ್ದು, ಗುರುಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಉತ್ಸವ ಸಮಿತಿಯ ಪದಾಧಿಕಾರಿಗಳಾದ ನಾಗೇಂದ್ರಸ್ವಾಮಿ, ತ್ಯಾಗರಾಜು, ಸಚಿನ್, ದಯಾನಂದ್, ರೇವಣ್ಣ ಇದ್ದರು.

# ಇಂದಿನಿಂದ ಲಿಂಗಾಯತ ಬ್ಯುಸಿನೆಸ್ ಎಕ್ಸ್‌ಪೋ

• ಪ್ರಜೋದಯ ವರದಿ




**ಹಾಸನ:** ನಗರದ ಬಸವೇಶ್ವರ ದೇವಾಲಯ ಆವರಣದಲ್ಲಿ ಇದೇ ಮೊದಲ ಬಾರಿಗೆ ಮೇ 16 ಹಾಗು 17ರಂದು ವೀರಶೈವ ಲಿಂಗಾಯತ ಬ್ಯುಸಿನೆಸ್ ಎಕ್ಸ್ ಪೋ 2026 ಹಮ್ಮಿಕೊಳ್ಳಲಾಗಿದೆ ಎಂದು ಸಮುದಾಯ ಮುಖಂಡ ಸಂಗಂ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಾಗು ಜಿಲ್ಲಾ ವೀರಶೈವ ಲಿಂಗಾಯತ ಸಂಘದಿಂದ ಎರಡು ದಿನಗಳ ಕಾರ್ಯಕ್ರಮ ನಡೆಯಲಿದೆ. ಸಮಾಜದ ಜನರು ಆರ್ಥಿಕ ಹಾಗು ಸಾಮಾಜಿಕವಾಗಿ ಮುನ್ನಲೆಗೆ ಬರಬೇಕು. ಉದ್ಯಮ ಕ್ಷೇತ್ರದಲ್ಲಿ ಛಾಪು ಮೂಡಿಸಬೇಕೆಂಬ ಉದ್ದೇಶದಿಂದ ಎಕ್ಸ್‌ಪೋ ಹಮ್ಮಿಕೊಳ್ಳಲಾಗಿದೆ. ಶನಿವಾರ ಬೆಳಿಗ್ಗೆ 10 ರಿಂದ ರಾತ್ರಿ 10 ಗಂಟೆವರೆಗೆ ಮೇಳ ನಡೆಯಲಿದೆ ಎಂದರು.

ಹಳೇಬೀಡು ಪುಷ್ಪಗಿರಿ ಮಹಾ ಸಂಸ್ಥಾನ ಮಠದ ಸೋಮಶೇಖರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಚಲನಚಿತ್ರ ನಟ ದೊಡ್ಡಣ್ಣ ಅವರು ಎಕ್ಸ್ ಪೋ ಉದ್ಘಾಟಿಸುವರು. ನಟ ಮನು, ಎಂಟಿಇಎಸ್ ಅಧ್ಯಕ್ಷ ಬಿ. ಆರ್.ಗುರುದೇವ್, ಉದ್ಯಮಿ ರಾಜಶೇಖರ್ ಭಾಗವಹಿಸಲಿ ದ್ದಾರೆಂದರು.

ವಿವಿಧ ವ್ಯವಹಾರದಲ್ಲಿ ತೊಡಗಿರುವ ಸಮುದಾಯದವರನ್ನು ಒಂದೆಡೆ ಸೇರಿಸುವುದು ಅದರ ಉದ್ದೇಶ. ಅದರಿಂದ ಯಾರು ಯಾವ ಉದ್ಯಮದಲ್ಲಿ ತೊಡಗಿದ್ದಾರೆಂಬ ಮಾಹಿತಿ ಲಭ್ಯವಾಗಲಿದೆ. ಸಂಘಟನೆಗಾಗಿಯೂ ಈ ಎಕ್ಸ್ ಪೋ ಹಮ್ಮಿಕೊಳ್ಳಲಾಗಿದ್ದು, ಯಶಸ್ವಿಯಾಗುವ ವಿಶ್ವಾಸವಿದೆ ಎಂದರು.

ಮಹಿಳಾ ಘಟಕದ ತಾಲ್ಲೂಕು ಅಧ್ಯಕ್ಷೆ ಮಮತಾ ಪಾಟೀಲ್ ಅವರು ಮಾತನಾಡಿ, ಸಮು ದಾಯದ ವಧು-ವರರ ನೋಂದಣಿ ಮತ್ತು ಮಾಹಿತಿ ಕೇಂದ್ರ ತೆರೆಯಲಾಗುವುದು. ಡಾ. ಕೆ.ವಿ.ವೈಭವ್ ಕೆಂಚಾಂಬ ಅವ ರಿಂದ ಉಚಿತ ಡೆಂಟಲ್ ಶಿಬಿರ ಏರ್ಪಡಿಸಲಾಗಿದೆ. ಹಾಗೆಯೇ ಬೆಂಗಳೂರಿನ ಸುರಕ್ಷಾ ಕೆರಿಯರ್ ಅಕಾಡೆಮಿ ಅವರಿಂದ ಓಪನ್‌ಕಪ್ ಮೇಳ ಉದ್ಯೋಗಾವಕಾಶಗಳ ಬಗ್ಗೆ ಮಾಹಿತಿ ಮತ್ತು ನಿಯೋಜನೆ ಬಗ್ಗೆ ತಿಳುವಳಿಕೆ ನೀಡಲಾಗುವುದು. ಒಟ್ಟು 30 ಸ್ಟಾಲ್‌ಗಳ ಪೈಕಿ 4 ಫುಡ್ ಸ್ಟಾಲ್‌ಗಳು ಇರಲಿದೆ. ಪ್ರತಿದಿನ ಸಂಜೆ ಭರತನಾಟ್ಯ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯಲಿವೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ವೀರಶೈವ ಮಹಾಸಭಾದ ಅಧ್ಯಕ್ಷ ಐಸಾಮಿಗೌಡ, ಎಕ್ಸ್ ಪೋ ಅಧ್ಯಕ್ಷ ಹೆಚ್.ಪಿ.ಮಧು, ತಾಲ್ಲೂಕು ಅಧ್ಯಕ್ಷ ಮಮತಾ ಪಾಟೀಲ್, ಧನಲಕ್ಷ್ಮಿ ಹಾಜರಿದ್ದರು.

# ಡಿ.ಕೆ.ಶಿ.ಹುಟ್ಟುಹಬ್ಬ: ಆರೋಗ್ಯ ಶಿಬಿರ-ಅನ್ನದಾನ

• ಪ್ರಜೋದಯ ವರದಿ

**ಹಾಸನ:** ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಜನ್ಮ ದಿನದ ಪ್ರಯುಕ್ತ ಶುಕ್ರವಾರ ನಗರದ ಹೇಮಾವತಿ ಪ್ರತಿಮೆ ಬಳಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಆರೋಗ್ಯ ಉಚಿತ ತಪಾಸಣೆ, ರಕ್ತದಾನ ಶಿಬಿರ ಹಾಗು ಅನ್ನದಾನ ಏರ್ಪಡಿಸಲಾಗಿತ್ತು.

ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಬನವಾಸೆ ರಂಗಸ್ವಾಮಿ ಅವರು ಕೇಕ್ ಕತ್ತರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ವೇಳೆ ಮಾತನಾ ಡಿದ ಅವರು, ಮುಂದಿನ ದಿನಗಳಲ್ಲಿ ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಮುಖ್ಯಮಂತ್ರಿಯಾಗಲಿ. ದೇವರು ಅವರಿಗೆ ಆಯಸ್ಸು, ಆರೋಗ್ಯ ಭಾಗ್ಯ ಕರುಣಿಸಲಿ ಎಂದು ಹಾರೈಸಿದರು.



### 101 ಈಡುಗಾಯಿ ಸಮರ್ಪಣೆ

ಡಿ.ಕೆ.ಶಿವಕುಮಾರ್ ಅವರ ಹುಟ್ಟುಹಬ್ಬದ ಪ್ರಯುಕ್ತ ಹಾಸನಾಂಬ ದೇವಾಲಯ ಎದುರು ಕಾಂಗ್ರೆಸ್ ಕಾರ್ಯಕರ್ತರು 101 ಈಡುಗಾಯಿ ಒಡೆದು ಒಳಿತಿಗಾಗಿ ಪ್ರಾರ್ಥಿಸಿದರು. ಶಿವಕುಮಾರ್ ಅವರು ರಾಜ್ಯದ ಮುಖ್ಯಮಂತ್ರಿಯಾಗಲಿ ಎಂದು ಹರಕೆ ಹೊತ್ತಿದ್ದೇವೆ. ಖಂಡಿತವಾಗಿಯೂ ಅವರು ಮುಖ್ಯಮಂತ್ರಿಯಾಗುತ್ತಾರೆಂದು ಮುಖಂಡರಾದ ಕಟ್ಟಾಯ ಹೇಮಂತ್, ಜೆಸಿಬಿ ಚಂದ್ರು ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಈ.ಹೆಚ್. ಲಕ್ಷ್ಮಣ್ ಅವರು ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರ ಪಡೆಯಲು ಡಿ.ಕೆ.ಶಿವಕುಮಾರ್ ಅವರ ಶ್ರಮ ಹೆಚ್ಚಿದೆ. ಸಂಘಟನಾ ಚತುರ, ಪ್ರಬಲ ನಾಯಕತ್ವದಿಂದ ರಾಜ್ಯದಲ್ಲಿ ಕಾಂಗ್ರೆಸ್ ಗಟ್ಟಿಯಾಗಿದೆ. ಶಿವಕುಮಾರ್ ಅವರಿಗೆ ರಾಜಕೀಯದಲ್ಲಿ ಒಳ್ಳೆಯ ಅವಕಾಶಗಳು ಲಭಿಸಲಿ ಎಂದು ಪ್ರಾರ್ಥಿಸಿದರು.

ಕಾಂಗ್ರೆಸ್ ಜಿಲ್ಲಾವಕ್ತಾರ ಎಸ್. ಮಂಜುನಾಥಶರ್ಮಾ, ರಘುದಾಸರ ಕೊಪ್ಪಲು, ಚಂದ್ರಶೇಖರ್, ಆರೀಫ್, ಮನು, ಪ್ರಕಾಶ್, ಬೂದೇಶ್, ಹರೀಶ್ ಇತರರು ಭಾಗವಹಿಸಿದ್ದರು.

# ಸಂಘರ್ಷ ಕೊನೆಗಾಣಿಸಲು ಭಾರತ ಮಧ್ಯಸ್ಥಿಕೆಗೆ ರಷ್ಯಾ ಪ್ರಸ್ತಾಪ

• ಪ್ರಜೋದಯ ವರದಿ



**ನವದೆಹಲಿ:** ಇರಾನ್ ಮತ್ತು ಅಮೇರಿಕಾನಡುವಿನ ಸಂಘರ್ಷ ಕೊನೆಗಾಣಿಸಲು ಭಾರತದ ಮಧ್ಯಸ್ಥಿಕೆಯನ್ನು ರಷ್ಯಾ ಪ್ರಸ್ತಾಪಿಸಿದೆ.

ಭಾರತದ ವ್ಯಾಪಕ ರಾಜತಾಂತ್ರಿಕ ಅನುಭವ ಮತ್ತು ಜಾಗತಿಕ ಖ್ಯಾತಿಯನ್ನು ರಷ್ಯಾ ಉಲ್ಲೇಖಿಸಿದೆ. ಬ್ರಿಕ್ಸ್ ವಿದೇಶಾಂಗ ಸಚಿವರ ಸಭೆಗಾಗಿ ನವದೆಹಲಿಯಲ್ಲಿದ್ದ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್, ಮಧ್ಯಪ್ರಾಚ್ಯದಲ್ಲಿ ದೀರ್ಘಕಾಲೀನ ಸ್ಥಿರತೆಯನ್ನು ಖಚಿತಪಡಿಸಿ ಕೊಳ್ಳುವ ವಿಷಯದಲ್ಲಿ ಭಾರತ ಪ್ರಮುಖ ಪಾತ್ರ ವಹಿಸಬಹುದೆಂದು ಹೇಳಿದರು.

ತುರ್ತು ಸಮಸ್ಯೆಗಳನ್ನು ಪರಿಹರಿಸಲು ಅಮೇರಿಕಾ ಮತ್ತು ಇರಾನ್ ನಡುವೆ ಸಂವಾದ ಸ್ಥಾಪಿಸಲು ಪಾಕಿಸ್ತಾನ ಸಹಾಯ ಮಾಡುತ್ತಿದೆ. ಇರಾನ್ ಮತ್ತು ಅದರ ಅರಬ್ ಮಿತ್ರ ರಾಷ್ಟ್ರಗಳ ನಡುವೆ ದೀರ್ಘಕಾಲೀನ ಮಧ್ಯಸ್ಥಿಕೆ ವಹಿಸಲು ತನ್ನ ವಿಶಾಲ ರಾಜತಾಂತ್ರಿಕ ಅನುಭವ ಹೊಂದಿ ರುವ ಭಾರತ ಸೂಕ್ತವಾಗಿರುತ್ತದೆಂದು ಸೆರ್ಗೆಯ್ ಲಾವ್ರೊವ್ ಅವರು ಹೇಳಿದ್ದಾರೆ. ರಷ್ಯಾ ವಿದೇಶಾಂಗ ಸಚಿವರ ಈ ಹೇಳಿಕೆ ಪ್ರಧಾನಿ ನರೇಂದ್ರ ಮೋದಿ ಅವರ ಯುಎಇ ಭೇಟಿ ವೇಳೆ ಮಹತ್ವ ಪಡೆದುಕೊಂಡಿದೆ.

ಮಧ್ಯಪ್ರಾಚ್ಯ ಉದ್ವಿಗ್ನತೆಗಳ ಬಗ್ಗೆ ಜಾಗತಿಕ ಆತಂಕ ಹೆಚ್ಚಾಗಿರುವುದು ಹಾಗು ರಷ್ಯಾ ಮತ್ತು ಇರಾನಿನ ತೈಲದ ಮೇಲಿನ ಯುಎಸ್ ನಿರ್ಬಂಧ ಗಳ ವಿನಾಯಿತಿಗಳ ಸನ್ನಿಹಿತ ಮುಕ್ತಾಯದ ಸಂದರ್ಭದಲ್ಲಿ ನವದೆಹಲಿಗೆ ರಷ್ಯಾದ ರಾಜತಾಂತ್ರಿಕ ಭೇಟಿ ನೀಡಿದ್ದಾರೆ. ಪ್ರಸ್ತುತ ಬ್ರಿಕ್ಸ್ ಅಧ್ಯಕ್ಷರಾಗಿ ಮತ್ತು ಪ್ರಾದೇಶಿಕ ಸ್ಥಿರತೆಯಲ್ಲಿ ನೇರ ಆಸಕ್ತಿ ಹೊಂದಿರುವ ಪ್ರಮುಖ ಇಂಧನ ಗ್ರಾಹಕನಾಗಿ ಭಾರತ ಪ್ರಮುಖ ಪಾಲುದಾರರನ್ನು ಸಂವಾದಕ್ಕಾಗಿ ಒಟ್ಟುಗೂಡಿಸಲು ಸಹಾಯ ಮಾಡುತ್ತದೆಂದು ಲಾವ್ರೊವ್ ಹೇಳಿದ್ದಾರೆ.

ಎಮಿರೇಟ್ಸ್ ಮೇಲಿನ ಇತ್ತೀಚಿನ ಇರಾನಿನ ದಾಳಿಗಳನ್ನು ಉಲ್ಲೇಖಿಸಿ, ನವದೆಹಲಿ ಟೆಹ್ರಾನ್ ಮತ್ತು ಅಬುಧಾಬಿಯನ್ನು ಮಾತುಕತೆಗೆ ಕರೆಯಬಹುದು ಮತ್ತು ಹಗೆತನವನ್ನು ತಪ್ಪಿಸಲು ಸಹಾಯ ಮಾಡಬಹುದೆಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬ್ರಿಕ್ಸ್ ಅಧ್ಯಕ್ಷ ಸ್ಥಾನದಲ್ಲಿರುವ ಭಾರತ ಈ ಪ್ರದೇಶದಿಂದ ತೈಲ ಪಡೆಯುವಲ್ಲಿ ನೇರವಾಗಿ ಆಸಕ್ತಿ ಹೊಂದಿದೆ. ಆದ್ದರಿಂದ ಭಾರತ ಇರಾನ್, ಯುನೈಟೆಡ್ ಅರಬ್ ಎಮಿರೇಟ್ಸ್ ಅನ್ನು ಆಹ್ವಾನಿಸಬಹುದು. ಎರಡೂ ದೇಶಗಳ ನಡುವಿನ ಯಾವುದೇ ಹಗೆತನವನ್ನು ಹೇಗೆ ತಪ್ಪಿಸಬಹುದು ಎಂಬುದರ ಕುರಿತು ಪರಸ್ಪರ ಮಾತುಕತೆ ನಡೆಸಲು ಪ್ರಾರಂಭಿಸಬಹುದಲ್ಲವೇ ಎಂದರು.

ಇರಾನ್ ಮತ್ತು ಅರಬ್ ರಾಷ್ಟ್ರಗಳ ನಡುವೆ ಹಗೆತನವನ್ನು ಹೆಚ್ಚಿಸಲು ಅಮೇರಿಕಾ ಮತ್ತು ಇಸ್ರೇಲ್ ಪ್ರಯತ್ನಿಸುತ್ತಿವೆಯೆಂದು ರಷ್ಯಾದ ವಿದೇಶಾಂಗ ಸಚಿವರು ಆರೋಪಿಸಿದರು. ಆದರೆ ಮಾಸ್ಕೋ ಉದ್ವಿಗ್ನತೆಯನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿರುವ ಪ್ರಯತ್ನಗಳನ್ನು ಅನುಸರಿಸುತ್ತಿದೆಂದು ತಿಳಿಸಿದ್ದಾರೆ.

ಪ್ರತಿಯೊಂದುಸಂಘರ್ಷದ ಮೂಲ ಕಾರಣಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಇರಾನ್‌ನಲ್ಲಿ ಇದು ಯುಎಸ್ ಮತ್ತು ಇಸ್ರೇಲ್‌ನ ಅಪ್ರಚೋದಿತ ಆಕ್ರಮಣವಾಗಿದೆ. ಮಧ್ಯಪ್ರಾಚ್ಯದಲ್ಲಿ ಮತ್ತಷ್ಟು ಉಲ್ಬಣಗೊಳ್ಳುವುದನ್ನು ತಪ್ಪಿಸಲು ರಾಜತಾಂತ್ರಿಕತೆ ಮತ್ತು ಪ್ರಾದೇಶಿಕವಾಗಿ ತೊಡಗಿಸಿಕೊಳ್ಳುವುದರ ಅಗತ್ಯವನ್ನು ಲಾವ್ರೊವ್ ಪ್ರತಿಪಾದಿಸಿದ್ದಾರೆ.

# ಮೋದಿಯ ಮಿತವ್ಯಯ ಕರೆ: ಸುಪ್ರೀಂನಲ್ಲಿ ವಾರಕ್ಕೆ 2 ದಿನ ವರ್ಚುವಲ್ ವಿಚಾರಣೆ

• ಪ್ರಜೋದಯ ವರದಿ

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರ ಮಿತವ್ಯಯದ ಕರೆಗೆ ಸ್ಪಂದಿಸಿರುವ ಸುಪ್ರೀಂ ಕೋರ್ಟ್, ಸೋಮವಾರ ಮತ್ತು ಶುಕ್ರವಾರದಂದು ವರ್ಚುವಲ್ ಆಗಿ ವಿಚಾರಣೆಗಳನ್ನು ನಡೆಸಲು ನಿರ್ಧರಿಸಿದೆ ಎಂದು ಬಾರ್ ಅಂಡ್ ಬೆಂಚ್ ವರದಿ ಮಾಡಿದೆ.

ಹೈದರಾಬಾದ್‌ನಲ್ಲಿ ನಡೆದ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ್ದ ಪ್ರಧಾನಿ ಮೋದಿ, ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಬಿಕ್ಕಟ್ಟಿನ ಹಿನ್ನಲೆಯಲ್ಲಿ ಇಂಧನ ಉಳಿಸುವಂತೆ ಜನರಲ್ಲಿ ಮನವಿ ಮಾಡಿದ್ದರು. ಮೋದಿ ಅವರ ನಿರ್ದೇಶನದಂತೆ ವಾರದಲ್ಲಿ ಎರಡು ದಿನ ವರ್ಕ್ ಫ್ರಮ್ ಹೋಮ್ ವ್ಯವಸ್ಥೆ ಜಾರಿಗೆ ತರಲು ನಿರ್ಧರಿಸಲಾಗಿದೆ. ಅಷ್ಟೇ ಅಲ್ಲದೆ, ಪ್ರತಿ ಮಂಗಳವಾರದಿಂದ ಗುರುವಾರದವರೆಗೆ ಪ್ರಕರಣಗಳ ವಿಚಾರಣೆಗಾಗಿ ಹೈಬ್ರಿಡ್ ಮಾದರಿ ಯನ್ನು ಅಳವಡಿಸಿಕೊಳ್ಳುವುದಾಗಿ ಸುಪ್ರೀಂ ಕೋರ್ಟ್ ತಿಳಿಸಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019